UNIVERSAL LIBRARY
OU_200240
UNIVERSAL LIBRARY

ಮೊದಲನೆಯ ಮುದ್ರಣ
೧೯೪೬

ಬೆಲೆ : ಒಂದು ರೂಪಾಯಿ

(All Rights Reserved by the Author)

ಮುದ್ರಕರು
ವಿ. ರಾಮಕೃಷ್ಣ ಅಂಡ್ ಕೊ.
ಕೋಟೆ - ಬೆಂಗಳೂರು ನಗರ

# ಮುನ್ನುಡಿ

ಕನ್ನಡಿಗರ ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ನಾನು ಆಗಾಗ್ಗೆ ಬರೆದ ಪ್ರಬಂಧಗಳನ್ನು ಈ ಸಂಗ್ರಹದಲ್ಲಿ ಒಟ್ಟು ಗೂಡಿಸಿದ್ದೇನೆ. ಕನ್ನಡನಾಡಿನ ಬಹುಮುಖದ ಸಮಸ್ಯೆಗಳ ಪರಿಚಯ ನನ್ನ 'ಅಖಂಡ ಕರ್ನಾಟಕ,' 'ಕನ್ನಡದ ದಾರಿ' ಗ್ರಂಥಗಳಲ್ಲಾದಂತೆ ಇದರಿಂದಲೂ ಆಗಬಹುದೆಂಬ ಭರವಸೆಯಿದೆ.

ಇದರಲ್ಲಿ ಬಂದಿರುವ ಕೆಲವು ಪ್ರಬಂಧಗಳು ಈ ಮೊದಲೇ 'ಮಾತೃಭೂಮಿ ವಿಶೇಷ ಸಂಚಿಕೆ,' 'ವಾಕ್ಚಿತ್ರ ವಿಶೇಷ ಸಂಚಿಕೆ,' 'ಪೌರವಾಣಿ ವಿಶೇಷ ಸಂಚಿಕೆ,' ವಾಹಿನಿ, ಪ್ರಜಾಮತ ವಾರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕೊನೆಯ ಎರಡು ಪ್ರಬಂಧಗಳು ನಾನು 'ಆಕಾಶವಾಣಿ'ಯಲ್ಲಿ ಏಪ್ರಿಲ್ ೧೧-೧೨ರಲ್ಲಿ ಮಾಡಿದ ಭಾಷಣಗಳು. ಇವುಗಳನ್ನು ಗ್ರಂಥದಲ್ಲಿ ಸೇರಿಸಲು ಅನುಮತಿಯಿತ್ತ ಪತ್ರಿಕಾ ಸಂಪಾದಕರಿಗೂ, ಆಕಾಶವಾಣಿ ಸಂಸ್ಥೆಯ ಅಧಿಕಾರಿಗಳಿಗೂ ನಾನು ಋಣಿ.

ಗ್ರಂಥವನ್ನು ಅತ್ಯಲ್ಪವೇಳೆಯಲ್ಲಿ ಮುದ್ರಿಸಿಕೊಟ್ಟಿರುವ ಗೆಳೆಯ ವಿ. ರಾಮಕೃಷ್ಣರಿಗೂ, ಪ್ರಕಟನೆಯ ಹೊರೆಹೊತ್ತ ಎಸ್. ಎಸ್. ಎನ್. ಪುಸ್ತಕಾಲಯದ ಒಡೆಯರಾದ ಗೆಳೆಯ ಎಂ. ರಾಮರಾಯರಿಗೂ ನನ್ನ ಕೃತಜ್ಞತೆ ಸಲ್ಲಬೇಕಾಗಿದೆ.

"ಅನ್ನಪೂರ್ಣ"
ವಿಶ್ವೇಶ್ವರಪುರಂ
ಬೆಂಗಳೂರು ನಗರ
೧-೫-೧೯೪೭

ಅ. ನ. ಕೃಷ್ಣರಾಯ

# ಪರಿವಿಡಿ


೧. ಕರ್ನಾಟಕ ಪ್ರಾಂತ್ಯ ನಿಯೋಜನೆ .... .... ೧

೨. ಕರ್ನಾಟಕಕ್ಕೆ ದುಡಿವ ನಾಯಕರು .... .... ೧೨

೩. ಕನ್ನಡನಾಡಿನ ಮೇಲೆ ಆಂಧ್ರರ ಧಾಳಿ (೧) .... ೧೯

೪. ಕನ್ನಡನಾಡಿನ ಮೇಲೆ ಆಂಧ್ರರ ಧಾಳಿ (೨) .... ೨೪

೫. ಕನ್ನಡನಾಡಿನ ಮೇಲೆ ಆಂಧ್ರರ ಧಾಳಿ (೩) .... ೨೯

೬. ಮಹಿಳೆಯರ ಪ್ರಗತಿ (?) .... .... .... ೩೫

೭. ನಮಗೆ ಬೇಕು—ಸಜೀವ ಸಂಗೀತ .... .... ೪೧

೮. ಕನ್ನಡ ಸಂಗೀತ ಕಛೇರಿ .... .... .... ೪೫

೯. ಕರ್ನಾಟಕದಲ್ಲಿ ರಾಷ್ಟ್ರೀಯ ರಂಗಭೂಮಿ .... .... ೫೦

೧೦. ನಾಟಕ ಮತ್ತು ನಗರ ಸಭೆಗಳು .... .... ೬೦

೧೧. ಶಿವಗಂಗೆ .... .... .... .... ೬೩

೧೨. ಬೇಲೂರು .... .... .... .... ೬೫

೧೩. ಕನ್ನಡನಾಡಿನಲ್ಲಿ ಚಿತ್ರಕಲೆ .... .... .... ೬೭

೧೪. ಕಲೆಯ ಗುರಿ .... .... .... .... ೭೪

೧೫. ಸಾಹಿತಿಯ ಲಕ್ಷ್ಯ .... .... .... ೮೩

# ಕರ್ನಾಟಕದ ಹಿತಚಿಂತನೆ

## ೧. ಕರ್ನಾಟಕ ಪ್ರಾಂತ್ಯ ನಿಯೋಜನೆ

ಕನ್ನಡವನ್ನು ಮಾತೃಭಾಷೆಯಾಗಿಯುಳ್ಳ ಜನ ಹಲವು ರಾಜ್ಯಶಾಸನ, ಹಲವು ವಿಚಿತ್ರ ಪರಿಸ್ಥಿತಿಗಳಿಗೆ ಸಿಕ್ಕುಬಿದ್ದಿದ್ದಾರೆ. ಅವರ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ, ಕಲಾ ಉನ್ನತಿ ಪರಪ್ರಾಂತೀಯರನ್ನು ಆಶ್ರಯಿಸಿದೆ. ತೆಲುಗು, ತಮಿಳು, ಉರ್ದು, ಮರಾಠಿ ಭಾಷೆಗಳನ್ನು ಮಾತೃಭಾಷೆಗಳನ್ನಾಗಿಯುಳ್ಳ ಅರಸರ ಸರ್ಕಾರ, ಅವರ ಮೇಲೆ ಅಧಿಕಾರ ನಡೆಸುತ್ತಿದೆ. ಪ್ರಾಂತ್ಯಗಳನ್ನು ಒಂದುಗೂಡಿಸಿ ಅವುಗಳ ಬಹುಸಂಖ್ಯಾತರ ಭಾಷೆಗೆ ಕುಂದು ಬರದಂತೆ ರಾಜ್ಯಾಂಗ ನಿಯೋಜನೆ ಮಾಡಬೇಕೆಂಬ ತತ್ತ್ವ ಹುಟ್ಟಿಕೊಂಡದ್ದು ೧೯೧೨ ರಲ್ಲಿ ಬಂಗಾಳ ವಿಭಜನೆಯ ಕಾಲದಲ್ಲಿ. ಬಂಗಾಳದಲ್ಲಿ ಬ್ರಿಟಿಷರು ಅನುಸರಿಸಿದ ಮನೆಮುರುಕು ನೀತಿ ಬಂಗಾಳವನ್ನಷ್ಟೇ ಅಲ್ಲ ಇಡೀ ಭರತಖಂಡವನ್ನೇ ಅಲುಗಿಸಿಬಿಟ್ಟಿತು. ಬಂಗಾಳಿಗಳ ಕುತ್ತು ತಮ್ಮದೂ ಹೌದೆಂದು ಭಾವಿಸಿ ಕರ್ನಾಟಕ ಬಂಗಾಳದ ಏಕೀಕರಣಕ್ಕೆ ದುಡಿಯಿತು. ಇದರ ಪರಿಣಾಮವಾಗಿ ಸರ್ ಎಂ. ವಿಶ್ವೇಶ್ವರಯ್ಯನವರು, ಶ್ರೀಗಳಾದ ಆಲೂರ ವೆಂಕಟರಾಯರು, ಮುದವೀಡು ಕೃಷ್ಣರಾಯರು, ರಾ. ನರಸಿಂಹಾಚಾರ್ಯರು ಇವರ ಪ್ರಯತ್ನದಿಂದ ೧೯೧೫ ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ ಅವತರಿಸಿತು. ಪರಿಷತ್ತಿನ ದೃಷ್ಟಿ ಕೇವಲ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದುದೆಂದು ದಿವಂಗತ ಕಡಪಾ ರಾಘವೇಂದ್ರರಾಯರು ೧೯೧೭ ರಲ್ಲಿ ಕರ್ನಾಟಕ ಸಭೆಯನ್ನು ಸ್ಥಾಪಿಸಿ 'ಕರ್ನಾಟಕ ಏಕೀಕರಣ' ಮಹಾಮಂತ್ರವನ್ನು ಕನ್ನಡ ಜನತೆಗೆ ಉಪದೇಶಿಸಿದರು. ಕಡಪಾ ರಾಘವೇಂದ್ರರಾಯರ ಮತ್ತು ಇತರ ಧುರೀಣರ ಸತತ ಶ್ರಮದ ಫಲವಾಗಿ ಮಾಂಟೆಗ್ಯೂ ಚೆಮ್ಸ್‌ಫರ್ಡ್ ಸುಧಾರಣಾ ಸಮಿತಿ (೧೯೦೮) ಭಾಷಾನುವಾರು ಪ್ರಾಂತ್ಯ ತತ್ವವನ್ನು ಒಪ್ಪಿಕೊಂಡಿತು.

ಕಾಂಗ್ರೆಸ್ಸಿನಿಂದ ನಿಯೋಜಿತವಾದ ನೆಹ್ರೂ ಸಮಿತಿ (೧೯೨೧) ಕರ್ನಾಟಕ ಏಕೀಕರಣಕ್ಕೆ ಖಚಿತವಾದ ಶಬ್ದಗಳಿಂದ ಸಂಪೂರ್ಣ ಬೆಂಬಲವನ್ನು ನೀಡಿತು. ಭಾಷಾನುವಾರು ಪ್ರಾಂತ್ಯ ರಚನೆಗೆ ಪೂರ್ವ ಪೀಠಿಕೆಯಾಗಿರಲು ಕಾಂಗ್ರೆಸ್ ತನ್ನ ಸಮಿತಿಗಳನ್ನು ಆ ಅಸ್ತಿಭಾರದ ಮೇಲೆ ರಚಿಸಿತು. ಭಾರತ ಸುಸಂಘಟಿತವಾಗಿ, ಅನ್ಯೋನ್ಯವಾಗಿ, ಸುಭದ್ರವಾಗಿ ಬಾಳಬೇಕಾದರೆ ಭಾಷಾನುವಾರು ಪ್ರಾಂತರಚನೆ ಮಾಡದೆ ಗತ್ಯಂತರವಿಲ್ಲವೆನ್ನುವ ಸತ್ಯ ಕಾಂಗ್ರೆಸ್, ಸಾರ್ವಭೌಮ ಸರ್ಕಾರ ಮತ್ತು ಜನತೆ ಎಲ್ಲರಿಗೂ ಮನವರಿಕೆಯಾಗಿದೆ.

ಕರ್ನಾಟಕ ಪ್ರಾಂತ್ಯ ಚಳುವಳಿ ೨೮ ವರ್ಷಗಳದ್ದಾದರೂ ಪ್ರಾಂತ್ಯ ಸಾಧನೆ ಇನ್ನೂ ಕನಸಿನ ಗಂಟಾಗಿಯೇ ಉಳಿದಿದೆ. ಕರ್ನಾಟಕಕ್ಕಿಂತಲೂ ಸಣ್ಣದಾದ ಪ್ರಾಂತಗಳಿಗೆ ಸ್ವತಂತ್ರ ಸರ್ಕಾರ ಲಭಿಸಿದೆ. ಆದರೆ ಕರ್ನಾಟಕದ ಬಗ್ಗೆ ಎಲ್ಲರೂ ಮೀನ ಮೇಷ ಎಣಿಸುತ್ತಿದಾರೆ.

ಕಾಂಗ್ರೆಸ್ಸಿನವರು ಈ ವರ್ಷ (೧೯೪೭) ಮಧ್ಯವರ್ತಿ ಸರ್ಕಾರ ಸ್ಥಾಪಿಸಿದ ಮೇಲೆ ಕರ್ನಾಟಕದ ಹಿತಸಾಧನೆ ಇನ್ನು ಬಹಳ ತಡವಾಗಲೊಲ್ಲದು, ಪ್ರಾಂತ್ಯ ನಿರ್ಮಾಣ ಕ್ಷಿಪ್ರವಾಗಿ ಲಭಿಸುತ್ತದೆ ಎಂಬ ಆಶೆ ಅಂಕುರಿಸಿದೆ. ಕನ್ನಡ ಜನನಾಯಕರು ಜಾಗೃತರಾಗಿ ತಮ್ಮ ಒಳ ಸಮಸ್ಯೆಗಳನ್ನು ಬಿಡಿಸಿ ಪ್ರಾಂತ್ಯದ ಸ್ಪಷ್ಟ ರೂಪರೇಷೆಯನ್ನು ರಚಿಸಬೇಕಾದ ಮಹತ್ವದ ಕಾಲವಿದು.

ಕರ್ನಾಟಕವೆಂದರೆ ೧) ಮೈಸೂರು ಸಂಸ್ಥಾನ ೨) ನಿಜಾಮರ ಅಧೀನದಲ್ಲಿರುವ ರಾಯಿಚೂರು, ಕೊಪ್ಪಳ, ಗುಲ್ಬರ್ಗ, ಬೀದರೆ, ವಾರಂಗಲ್ಲಿನ ಕೆಲವು ತಾಲ್ಲೂಕುಗಳು ೩) ಉತ್ತರ ಕರ್ನಾಟಕದ ಆಶ್ರಿತ ಸಂಸ್ಥಾನಗಳು: ಕೊಲ್ಹಾಪುರ, ಹಿರಿಯ, ಕಿರಿಯ ಮಿರಜಿ, ಜಮಖಂಡಿ, ಮುಧೋಳ, ರಾಮದುರ್ಗ, ಅಕ್ಕಲಕೋಟೆ, ಹಿರಿಯ, ಕಿರಿಯ ಕುರಂದವಾಡಿ, ಔಂಧ್, ಸವಣೂರು, ಸಾಂಗ್ಲಿ. ೪) ಮದರಾಸು ಪ್ರಾಂತ್ಯದಲ್ಲಿರುವ ಆಶ್ರಿತ ಸಂಸ್ಥಾನ–ಸೊಂಡೂರು. ೫) ಮದರಾಸು ಪ್ರಾಂತ್ಯಾಡಳಿತಕ್ಕೆ ಸೇರಿರುವ ಭಾಗಗಳು: ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿ ಜಿಲ್ಲೆ, ನೀಲಗಿರಿ, ಅನಂತಪುರ, ತುಂಗಭದ್ರಾ, ಆದವಾನಿ, ಹಿಂದೂಪುರ, ಪೆನುಗೊಂಡೆ, ಕರ್ನೂಲು ಜಿಲ್ಲೆಯ ಪಾತಿಕೊಂಡ, ಮಲಬಾರಿನ ವೈನಾಡು, ಕೊಯಿಮತ್ತೂರು, ಅವಿನಾಶಿ, ಗೋಪಿಶೆಟ್ಟಿ ಪಾಳ್ಯ, ಭವಾನಿ, ಕೊಳ್ಳೆಗಾಲ ಹೊಸೂರು,

ಕೃಷ್ಣಗಿರಿ, ಧರ್ಮಪುರಿ, ಪುಂಗನೂರು, ಉತ್ತರ ಆರ್ಕಾಡು ಜಿಲ್ಲೆಯ ಕರಿಗುಂದಿ. ೬) ಮುಂಬಯಿ ಪ್ರಾಂತ್ಯಕ್ಕೆ ಸೇರಿರುವ ಭಾಗಗಳು: ಉತ್ತರ ಕನ್ನಡ ಜಿಲ್ಲೆ, ಬೆಳಗಾಂವಿ, ವಿಜಾಪುರ, ಸೊಲ್ಲಾಪುರ. ೭) ಕೊಡಗು



ಪ್ರಾಂತ್ಯ. ೮) ಗೋವಾ. ೯) ಸವಣೂರು. ಇವುಗಳ ಒಟ್ಟು ವಿಸ್ತೀರ್ಣ ೯೯,೪೯೦ ಮೈಲಿಗಳು, ಜನಸಂಖ್ಯೆ ೧,೫೬,೩೮,೦೬೭ ಬ್ರಿಟಿಷ್ ಕರ್ಣಾಟಕ ವನ್ನಷ್ಟೇ ಗಮನಿಸಿದರೆ ಅದರ ವಿಸ್ತೀರ್ಣ ೪೭,೯೯೮ ಮೈಲಿಗಳು. ಜನಸಂಖ್ಯೆ ೮೨,೫೮,೩೪೦.

ಬ್ರಿಟಿಷ್ ಕರ್ನಾಟಕದಷ್ಟೇ ಇರುವ ಅಥವಾ ಅದಕ್ಕೂ ಚಿಕ್ಕದಾಗಿರುವ ಸ್ವತಂತ್ರ ಪ್ರಾಂತಗಳನ್ನು ನೋಡೋಣ.

| ಪ್ರಾಂತ್ಯ | ವಿಸ್ತೀರ್ಣ | ಜನಸಂಖ್ಯೆ | ಆದಾಯ ರೂ. |
|---|---|---|---|
| ಅಸ್ಸಾಂ | ೫೫,೦೧೪ | ೮೬೨೨೨೫೧ | ೨೮೪೪೫೦೦೦ |
| ಸಿಂಧ್ | ೪೬,೩೭೮ | ೩೮೮೭೦೭೦ | ೩೮೩೩೨೦೦೦ |
| ಒರಿಸ್ಸಾ | ೧೩,೭೦೦ | ೫೩೦೬೧೪೨ | ೧೮೯೫೬೦೦೦ |
| ವಾಯುವ್ಯ ಗಡಿ | ೧೩,೫೧೮ | ೨೪೨೫೦೭೬ | ೧೭೯೬೯೦೦೦ |
| ಬ್ರಿಟಿಷ್ ಕರ್ನಾಟಕ | ೪೭,೭೭೮ | ೮೨೫೮೩೪೦ | ೨೬೨೪೮೦೦೦ |

ಅಸ್ಸಾಮ್, ಒಂದೇ ಕರ್ಣಾಟಕದಷ್ಟಿರುವ ಪ್ರಾಂತ್ಯ. ಸಿಂಧ್, ಒರಿಸ್ಸಾ, ವಾಯುವ್ಯಗಡಿಗಳು ಕರ್ನಾಟಕಕ್ಕಿಂತ ತೀರ ಚಿಕ್ಕವು. ಕರ್ನಾಟಕ ಪ್ರಾಂತ್ಯ ರಚನೆ ಸಾಧ್ಯವಾದುದೆಂಬುದಕ್ಕೆ ಈ ಅಂಕೆ ಸಂಖ್ಯೆಗಳಿಗಿಂತ ಹೆಚ್ಚಿನ ಸಾಕ್ಷ್ಯ ಬೇಕಿಲ್ಲ.

ಕರ್ನಾಟಕದ ಏಕೀಕರಣವನ್ನು ಹೇಗೆ ಮಾಡಬೇಕೆಂಬುದರ ಬಗ್ಗೆ ಕೆಲವು ಊಹಾಪೋಹಗಳಿದ್ದವೆ.

೧. ಸದ್ಯಕ್ಕೆ ಬ್ರಿಟಿಷ್ ಕರ್ನಾಟಕವನ್ನಷ್ಟೇ ಒಂದು ಪ್ರಾಂತವನ್ನಾಗಿ ರಚಿಸಬೇಕು.


೨. ಬ್ರಿಟಿಷ್ ಕರ್ಣಾಟಕ ಮತ್ತು ಉತ್ತರ ಕರ್ನಾಟಕದ ದೇಶೀಯ ಸಂಸ್ಥಾನಗಳನ್ನು ಕೂಡಿಸಿ ಪ್ರಾಂತ್ಯ ರಚಿಸಬೇಕು.

೩. ಎಲ್ಲ ಕನ್ನಡ ಭಾಗಗಳನ್ನು ಕೂಡಿಸಿಯೇ ಪ್ರಾಂತ್ಯರಚನೆ ಮಾಡಬೇಕು.

ಬ್ರಿಟಿಷ್ ಕರ್ನಾಟಕದ ಭಾಗವನ್ನಷ್ಟೇ ಸದ್ಯಕ್ಕೆ ಲಕ್ಷ್ಯದಲ್ಲಿಟ್ಟುಕೊಂಡರೂ ಅದು ಒಂದು ಪ್ರಾಂತ್ಯವಾಗುವಷ್ಟು ದೊಡ್ಡದಾಗಿದೆ ಎಂಬುದು ನಿರ್ವಿವಾದ. ಆದರೆ ಉತ್ತರ ಕರ್ನಾಟಕ ಸಂಸ್ಥಾನಗಳು ಅವುಗಳ ಜತೆ

ಹಾಸು ಹೊಕ್ಕಾಗಿರುವುದರಿಂದ ಅವುಗಳನ್ನು ನಿರ್ಲಕ್ಷಿಸುವುದಕ್ಕಾಗುವುದಿಲ್ಲ. ಉತ್ತರ ಕರ್ನಾಟಕ ಸಂಸ್ಥಾನಗಳ ಅರಸರು ಮರಾಟಿಗರು. ಅವರ ಒಲವು

# ಉತ್ತರ ಕರ್ನಾಟಕದ ಸಂಸ್ಥಾನಗಳು



ಮಹಾರಾಷ್ಟ್ರ ಪ್ರಾಂತ್ಯದ ಕಡೆ ಸಹಜವಾಗಿ ಹರಿಯುತ್ತದೆ. ಉ. ಕ. ಸಂಸ್ಥಾನಗಳಿಗಾಗಿಯೇ ಈಗ ಕೊಲ್ಹಾಪುರದಲ್ಲಿ ನಿಯೋಜಿತವಾಗಿರುವ ಹೈಕೋರ್ಟು ಪರೋಕ್ಷವಾಗಿ ಈ ಚಳುವಳಿಗೆ ಇಂಬುಗೊಟ್ಟಿದೆ. ರೂಕ್ಷ ಸರಕಾರವನ್ನು ರಚಿಸಿ, ಪ್ರಜೆಗಳನ್ನು ಕಾಡು ಮೃಗಗಳಂತೆ ಬೇಟೆಯಾಡುತ್ತಿರುವ ಉತ್ತರ ಕರ್ನಾಟಕ ಸಂಸ್ಥಾನಗಳ ಅರಸರ ಅಧಿಕಾರ ಭಾರತ ಇತಿಹಾಸದ ಒಂದು ರಕ್ತಪುಟ. ಜನತೆಯ ಹಿತದ ದೃಷ್ಟಿಯಿಂದ ಈ ಚಂದಣದ ಗೊಂಬೆಗಳನ್ನು ಕಪಾಟು ಸೇರಿಸದ ಹೊರತು ಗತ್ಯಂತರವಿಲ್ಲ. ಹತ್ತು ಜನ ಸುಖಲೋಲುಪ ಅರಸರ ಹಿತಕ್ಕೆ ಲಕ್ಷಾಂತರ ದೀನ ಜನರನ್ನು ಬಲಿಗೊಡುವುದು ತರವಲ್ಲ. ಹಿಂದೆ ಪಾಳೆಯಗಾರರಿಗೆ ಮಾಸಾಶನ ಕೊಟ್ಟು ಮನೆಗೆ ಕಳಿಸಿದಂತೆ ಈ ಸಂಸ್ಥಾನಿಕರನ್ನು ಅಧಿಕಾರದಿಂದ ನಿವೃತ್ತಿಮಾಡಿ ಉತ್ತರ ಕರ್ನಾಟಕ ಸಂಸ್ಥಾನಗಳನ್ನು ಕರ್ನಾಟಕ ಪ್ರಾಂತ್ಯದೊಳಗೆ ಸೇರಿಸಿಕೊಳ್ಳಬೇಕು.

ಹೈದರಾಬಾದು ನಿಜಾಮರಿಗೆ ಸೇರಿರುವ ಮೂರು ಜಿಲ್ಲೆ, ಕೆಲವು ತಾಲ್ಲೂಕುಗಳನ್ನು ಕೇಂದ್ರ ಸರ್ಕಾರ ತನ್ನ ಸ್ವಾಧೀನಕ್ಕೆ ಹಣ ಕೊಟ್ಟಾದರೂ ತೆಗೆದುಕೊಂಡು ಅದನ್ನು ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸಬೇಕು. ಪರಭಾಷಾಭಿಮಾನಿಗಳಾದ ಈ ಅರಸರ ಕೈಕೆಳಗಿರುವ ಕನ್ನಡಿಗರ ಶೋಚನೀಯ ಸ್ಥಿತಿ ನಾತ್ಸಿ ಜರ್ಮನಿಯಲ್ಲಿ ಜ್ಯೂ ಜನರ ಪಾಡನ್ನು ನೆನಪಿಗೆ ತರುತ್ತದೆ.

ಕೊಡಗು, ಮಂಗಳೂರಿನ ಸೆರಗಿನಲ್ಲಿರುವುದರಿಂದ ಅದು ಮಂಗಳೂರಿಗೇ ಸೇರಬೇಕು.

ಮೈಸೂರನ್ನು ಕರ್ನಾಟಕ ಪ್ರಾಂತ್ಯದೊಳಗೆ ಅಡಗಿಸುವುದಕ್ಕೆ ಬಹಳ ಜನರ ವಿರೋಧವಿದೆ. (ಮೈಸೂರಿನ ವಿಸ್ತೀರ್ಣ ೨೯,೪೭೫ ಮೈಲಿಗಳು; ಜನಸಂಖ್ಯೆ ೫೮,೦೬,೧೯೩) ವಿರೋಧ ಪಕ್ಷದ ವಾದ ವೈಖರಿ ಹೀಗಿದೆ: ಮೈಸೂರು ಎಲ್ಲ ರೀತಿಯಲ್ಲಿಯೂ ಪರಿಪೂರ್ಣವಾದ ಸಂಸ್ಥಾನ. ರಾಷ್ಟ್ರೀಯ ಸರ್ಕಾರದ ಕೆಳಗೆ ಜನಗಳಿಗೆ ಸಿಕ್ಕುವ ಸುಖ ಸೌಲಭ್ಯಗಳೆಲ್ಲಾ ಮೈಸೂರಿನವರಿಗಿದೆ. ಇಲ್ಲಿ ಕೈಗಾರಿಕೆ ಬಹಳ ಮುಂದುವರಿದಿದೆ. ಆಳುವ ರಾಜಮನೆತನಕ್ಕೆ ಐತಿಹಾಸಿಕ ಹಿನ್ನೆಲೆಯಿದೆ. ಮೈಸೂರು ಸಿಂಹಾಸನ ಕನ್ನಡ

ಸಿಂಹಾಸನ. ಮೈಸೂರು ಕರ್ನಾಟಕ ಪ್ರಾಂತ್ಯ ನಿಯೋಜನೆಯಲ್ಲಿ ಸೇರುವುದರಲ್ಲಿ ಅದಕ್ಕೆ ಯಾವ ಲಾಭವೂ ಇಲ್ಲ. ಮೂವತ್ತು ವರ್ಷಗಳಲ್ಲಿ ಎರಡು ಕೋಟಿಯಿಂದ ಏಳು ಕೋಟಿಯವರೆಗೆ ತನ್ನ ಆದಾಯವನ್ನು ಹೆಚ್ಚಿಸಿಕೊಂಡಿರುವ ಮೈಸೂರು ಯಾರಿಂದಲೂ ಯಾವ ಸಹಾಯವನ್ನೂ ನಿರೀಕ್ಷಿಸುವುದಿಲ್ಲ. ಈ ವಾದವನ್ನು ನಾಲ್ಕು ಪ್ರಸ್ಥಾನಗಳಿಂದ ವಿಮರ್ಶಿಸಬೇಕು. ೧) ರಾಜಮನೆತನದ ಸ್ಥಾನ. ೨) ಪ್ರಜೆಗಳ ಸುಖ ಸಂತೋಷ-ಮೈಸೂರು ಸರ್ಕಾರ ರಾಷ್ಟ್ರೀಯ ಸರ್ಕಾರವೇ? ೩) ಕರ್ನಾಟಕ ಪ್ರಾಂತ್ಯದೊಂದಿಗೆ ಸೇರುವುದರ ಲಾಭನಷ್ಟ ೪) ಮೈಸೂರು ಕನ್ನಡ ರಾಜ್ಯ.

ಮೈಸೂರು ರಾಜಮನೆತನ ಐತಿಹಾಸಿಕವೆಂಬುದೂ, ಹಿಂದೂ ಸಂಸ್ಕೃತಿಯ ಪ್ರತೀಕವಾಗಿದೆಯೆಂಬುದೂ ನಿರ್ವಿವಾದ. ಆದರೆ ಕರ್ನಾಟಕ ಪ್ರಾಂತ್ಯ ನಿಯೋಜನೆ ಮೈಸೂರು ಶ್ರೀಮನ್ಮಹಾರಾಜರವರ ಪದವಿಗೆ ಚ್ಯುತಿ ತರಲು ಯತ್ನಿಸುತ್ತಿಲ್ಲ. ಸಂಯುಕ್ತ ರಾಜ್ಯಾಂಗ ನಿಯೋಜನೆಯ ಕ್ರಮದಂತೆ ಮೈಸೂರು ಕರ್ನಾಟಕ ಪ್ರಾಂತ್ಯವನ್ನು ಸೇರಲೊಪ್ಪಿದರೆ ಶ್ರೀಮನ್ಮಹಾರಾಜರವರು ಅಖಿಲ ಕರ್ನಾಟಕದ ಶಾಸನಬದ್ಧ ಪ್ರಭುಗಳಾಗುತ್ತಾರೆ. ಇದರಿಂದ ಅವರ ಕೀರ್ತಿ ವಿಸ್ತರಿಸುತ್ತದೆ. ಪ್ರಕೃತದಲ್ಲಿ ಮೈಸೂರು ಪ್ರಜೆಗಳು ಸುಖ ಸಂತೋಷಗಳಲ್ಲಿ ಲೋಲಾಪ್ತಿಪಡುತ್ತಿದಾರೆ ಎಂಬ ಮಾತು ರಾಜಸೇವಾಸಕ್ತರ 'ಜೋಳದ ಪಾಳಿಯ' ಮಾತು. ಎರಡು ದಶಕಗಳಿಂದ ಜನನಾಯಕರು ಜವಾಬ್ದಾರಿ ಸರ್ಕಾರ ಬೇಡುತ್ತಿದ್ದರೂ ಅದು ಅವರಿಗೆ ಲಭಿಸಿಲ್ಲ. ಸರ್ ಮಿರ್ಜಾ ಎಂ. ಇಸ್ಮಾಯಿಲರ ದಿವಾನಗಿರಿ ಮುಗಿದ ಮೇಲಂತೂ ಮೈಸೂರು ಸರ್ಕಾರ ಕುಸಿದು ಬಿತ್ತು. ಸರ್ಕಾರದ ನೀತಿ ಹೊರಗಿನಿಂದ ಆಮದಾದ ಕೆಲವು ಅಧಿಕಾರಿಗಳ ಕೈವಶವಾಯಿತು. ಬ್ರಾಹ್ಮಣ-ಬ್ರಾಹ್ಮಣೇತರ ಸಮಸ್ಯೆಯ ವ್ಯಾಜದಲ್ಲಿ ಮೈಸೂರು ಮಕ್ಕಳಿಗೆ ಸ್ಥಾನಭ್ರಷ್ಟತ್ವವಾಯಿತು. ಕಳೆದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಕಾಂಗ್ರೆಸ್, ಹಿಂದೂ ಮಹಾಸಭಾ, ಮುಸ್ಲಿಂಲೀಗ್ ಮತ್ತು ಸ್ವತಂತ್ರ ಪಕ್ಷದವರೆಲ್ಲಾ ಏಕಕಂಠರಾಗಿ ಇಂದಿನ ಮಂತ್ರಿ ಮಂಡಲದ ಬಗ್ಗೆ ಅವಿಶ್ವಾಸ ಸೂಚಿಸಿದುದೇ ಸಾಕ್ಷಿ. ಹೊರಗಿನವರ ಕಣ್ಣಿಗೆ ಮಣ್ಣೆರಚಲು ಕೆಲವು ತಮ್ಮ ಭಕ್ತಕೋಟಿಯ ಜನರನ್ನು ಅಧಿಕಾರ ಸ್ಥಾನಗಳಿಗಾಯ್ದು, ಮೈಸೂರಿ

ನಲ್ಲಿಯೂ ಜನ ಪ್ರತಿನಿಧಿಗಳಿಗೆ ಸ್ಥಾನವಿದೆಯೆಂದು ತೋರಿಸಲು ಮೈಸೂರು ಯತ್ನಿಸಿದೆ. ಇದೊಂದು ಕಪಟ ನಾಟಕ. ಮೈಸೂರು ಜನರ ಸ್ಥಿತಿಗತಿ ಕೆಲವು ಬೇಜವಾಬ್ದಾರಿ ಜನರ ಕೈಗೆ ಸಿಕ್ಕಿ ಅವರು ಹೊಟ್ಟೆ ಬಟ್ಟೆಗಿಲ್ಲದೆ ಕೊರಗುವಂತಾಗಿದೆ.

ಮೈಸೂರಿನ ಜನನಾಯಕರು (ಕಾಂಗ್ರೆಸ್ಸಿಗರು ಮತ್ತಿತರರು) ಕರ್ನಾಟಕದ ಸಂಬಂಧವನ್ನು ಕೇವಲ ವ್ಯಾಪಾರ ದೃಷ್ಟಿಯಿಂದ ನೋಡು ವುದರಲ್ಲಿ ಅರ್ಥವಿಲ್ಲ. ಒಂದು ರಾಷ್ಟ್ರದ ಲಾಭನಷ್ಟ ಕೇವಲ ವರ್ತಮಾನ ಸ್ಥಿತಿಗೆ ಸೇರಿದುದಲ್ಲ. ಅದರ ಉಜ್ವಲ ಭವಿಷ್ಯದ ಕಡೆಗೆ ರಾಜಕಾರಣ ಪಟುಗಳು ಲಕ್ಷ್ಯ ಕೊಡಬೇಕು. ಔದ್ಯೋಗಿಕ ಪ್ರಗತಿ ಮೈಸೂರಿನಲ್ಲಿ ಈಗಾಗಿರುವಷ್ಟು ಕರ್ನಾಟಕದ ಇತರ ಭಾಗಗಳಲ್ಲಿ ಆಗಿಲ್ಲ. ಆದರೆ ಉತ್ತರ ಕರ್ನಾಟಕ ಮತ್ತು ಉತ್ತರಕನ್ನಡ ಜಿಲ್ಲೆಯ ಕಚ್ಚಾಮಾಲುಗಳ ಸೌಕರ್ಯ, ಭಟ್ಕಳ, ಕುಮಠಾ, ಮಲ್ಪೆ ಬಂದರುಗಳ ಅನುಕೂಲ, ಉತ್ತರ ಕರ್ನಾ ಟಕದ ವ್ಯಾಪಾರ ಸಂಪತ್ತುಗಳ ಸಹಕಾರ ಮೈಸೂರಿಗೆ ಬೇಕೇಬೇಕು. ಮೈಸೂರು ಹಾಗೂ ಮೈಸೂರೇತರ ಕರ್ನಾಟಕದ ಎಲ್ಲ ಸೌಲಭ್ಯಗಳನ್ನೂ ಒಂದುಗೂಡಿಸಿದರೆ ಕರ್ನಾಟಕದಷ್ಟು ಸಂಪದ್ಭರಿತ ಪ್ರಾಂತ್ಯ ಬೇರೊಂದು ಸಿಕ್ಕುವುದಿಲ್ಲ.

ಮೈಸೂರು ಹೆಸರಿಗೆ ಮಾತ್ರ ಕನ್ನಡ ರಾಜ್ಯ. ಇನ್ನೂ ಜನತೆಯ ಶಿಕ್ಷಣದ ಭಾಷೆ ಕನ್ನಡವಾಗಿಲ್ಲ; ಕೋರ್ಟು ಕಛೇರಿಗಳ ಭಾಷೆ ಕನ್ನಡವಲ್ಲ; ಸರ್ಕಾರದ ಭಾಷೆ ಕನ್ನಡವಲ್ಲ. ಕನ್ನಡ ಬರದ ಪ್ರಧಾನ ಮಂತ್ರಿಗಳೂ, ಮಂತ್ರಿಗಳೂ, ಹೈಕೋರ್ಟು ನ್ಯಾಯಾಧೀಶರೂ, ಇತರ ಅಧಿಕಾರಿಗಳೂ ಮೈಸೂರಿನಲ್ಲಿ ಪ್ರಭಾವಶಾಲಿಗಳಾಗಿದ್ದಾರೆ. ಸಾಹಿತ್ಯ, ಕಲೆಗಳಿಗೆ ಮೈಸೂರಿ ನಲ್ಲಿ ಯಾವ ಪ್ರೋತ್ಸಾಹವೂ ಇಲ್ಲ. ಮೈಸೂರಿನಲ್ಲೇನಾದರೂ ಸಾಹಿತ್ಯ, ಕಲೆಗಳಲ್ಲಿ ಒಳ್ಳೆಯ ಕೆಲಸ ನಡೆದಿದ್ದರೆ ಅದರ ಕೀರ್ತಿ ಅರಸರಿಗಾಗಲಿ, ಸರ್ಕಾರಕ್ಕಾಗಲಿ ಸೇರತಕ್ಕುದಲ್ಲ. ಸಾಹಿತಿಗಳ ಮತ್ತು ಕಲಾವಿದರ ತಪಸ್ಸು, ತ್ಯಾಗಗಳ ಫಲದಿಂದ ಮೈಸೂರು ಸಂಸ್ಕೃತಿಯ ವೃಕ್ಷ ಒಣಗಿ ಬರಡಾಗದಂತೆ ಕಾಯ್ದುಕೊಂಡಿದೆ. ಮೈಸೂರು ಕನ್ನಡ ರಾಜ್ಯವಾಗ ಬೇಕಾದರೆ ಅಖಿಲ ಕರ್ನಾಟಕದೊಂದಿಗೆ ಸೇರುವುದೊಂದೇ ಉಪಾಯ.

ಕರ್ನಾಟಕ ಪ್ರಾಂತ್ಯ ರಚನೆಗೆ ಹಲವು ಅಡಚಣೆಗಳಿವೆ. ಈಗಿರುವ ಮದರಾಸು ಮುಂಬಯಿ ಸರ್ಕಾರಗಳು, ಅವುಗಳನ್ನು ನಡೆಸುವ ತೆಲುಗು, ತಮಿಳು, ಗುಜರಾತಿ ಮರಾಠಿ ಜನರು ಕರ್ನಾಟಕಕ್ಕೆ ಬೆಂಬಲ ನೀಡುವುದಿಲ್ಲ. ತಮ್ಮ ಅಧೀನದಲ್ಲಿರುವ ಕರ್ನಾಟಕದ ಭಾಗಗಳು ಮುಂಬಯಿ, ಮದರಾಸು ಸರ್ಕಾರಗಳಿಗೆ ಕಾಮಧೇನು ಕಲ್ಪವೃಕ್ಷಗಳಂತಿವೆ. ಬ್ರಿಟಿಷರು ಭಾರತದ ರಕ್ತ ಹೀರಿದಂತೆ ಪರ ಪ್ರಾಂತೀಯರು ಕರ್ನಾಟಕದ ರಕ್ತ ಹೀರುತ್ತ ಬಂದಿದಾರೆ. ದೃಷ್ಟಾಂತಕ್ಕೆ ಮೂರು ಜಿಲ್ಲೆಗಳ ಕೆಲವು ಆದಾಯ, ವೆಚ್ಚಗಳನ್ನು ನೋಡೋಣ :

| ಜಿಲ್ಲೆಗಳು | ಆದಾಯ | ಖರ್ಚು | ಉಳಿತಾಯ |
|---|---|---|---|
| ದ. ಕನ್ನಡ | ೪೪·೦೮ ಲಕ್ಷ | ೧೭·೪೭ | ೨೬·೬೧ |
| ನೀಲಗಿರಿ | ೧೦·೫೩ ಲಕ್ಷ. | ೯·೧೪ | ೧.೩೯ |
| ಬಳ್ಳಾರಿ | ೩೩·೮೭ ಲಕ್ಷ. | ೧೧·೭೫ | ೨೨·೧೨ |

ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿ, ನೀಲಗಿರಿಗಳಲ್ಲಿ ೫೦ ಲಕ್ಷ ರೂಪಾಯಿಗಳಿಗೆ ಮಿಕ್ಕು ಪ್ರತಿವರ್ಷ ಲಾಭವಿದೆ. ಈ ಹಣ ದ.ಕನ್ನಡ, ಬಳ್ಳಾರಿ, ನೀಲಗಿರಿಗಳಿಗೆ ವಿನಿಯೋಗವಾಗುವುದಿಲ್ಲ. ಆಂಧ್ರ, ತಮಿಳುನಾಡುಗಳ ಪ್ರಗತಿಗೆ ವಿನಿಯೋಗವಾಗುತ್ತದೆ. ಮುಂಬಯಿ ಸರ್ಕಾರವೂ ಇದೇ ಸುಲಿಗೆ ಸೇವೆ ಮಾಡುತ್ತಿದೆ.

ಹೊಟ್ಟೆಪಾಡಿಗಾಗಿ ಕರ್ನಾಟಕದಲ್ಲಿ ಬಂದು ನೆಲಸಿರುವ ಪರಪ್ರಾಂತೀಯರೂ ಅಧಿಕಾರ ಸ್ಥಾನಗಳಿಗೆ ಕರ್ನಾಟಕಕ್ಕೆ ಬರುವ ಹೊರಗಿನವರೂ ಪ್ರಾಂತ್ಯ ನಿಯೋಜನೆಯನ್ನು ವಿರೋಧಿಸುತ್ತಾರೆ. ಅವರ ದೃಷ್ಟಿ ಪುಣೆ, ಮದರಾಸು, ತಿರುಚನಾಪಳ್ಳಿಗಳ ಕಡೆಗಿರುತ್ತದೆ.

ಮೈಸೂರಿನಲ್ಲಿರುವ ರಾಜಸೇವಾಸಕ್ತರ ತಂಡಕ್ಕೆ, ಕರ್ನಾಟಕ ಪ್ರಾಂತ್ಯ ನಾಳೆ ಕಾಂಗ್ರೆಸ್ಸಿನ ಸ್ವಾಮ್ಯಕ್ಕೊಳಗಾದರೆ ತಮ್ಮ ಪ್ರತಿಷ್ಠೆಗೆಲ್ಲಿ ಧಕ್ಕೆ ಬರುವುದೋ ಎಂದು ಭಯ.

ಕರ್ನಾಟಕ ಕಾಂಗ್ರೆಸ್ಸಿನ ಒಳಗಿರುವ ಗೋಮುಖವ್ಯಾಘ್ರಗಳು, ದೇಶಪಾಂಡೆ ಗಂಗಾಧರರಾಯರು, ಲಠ್ಠೆಯವರು, ಸಾಬಡೆ ಮಹಾಶಯ

ರಂಥವರು. ಕರ್ನಾಟಕ ಬೃಹನ್ಮಹಾರಾಷ್ಟ್ರದ ಒಂದು ಜಿಲ್ಲೆಯಾಗಲೆಂಬುದು ಇವರ ಉತ್ಕಟ ಆಶಯು.

ಈ ಒಳ-ಹೊರ ಶತ್ರುಗಳನ್ನು ಕರ್ನಾಟಕ ಎದುರಿಸಬೇಕು. ಜಾತಿಯ ನೆಪದಲ್ಲಿ ತಲೆಯೆತ್ತಿರುವ ಸ್ವಯೂಥ ಕಲಹವನ್ನು ಕನ್ನಡಿಗರು ಬದಿಗೊತ್ತಿ ತಮ್ಮ ಅಂತಿಮ ಗುರಿಯನ್ನು ಸಾಧಿಸಬೇಕು.

ಕರ್ನಾಟಕ ಪ್ರಾಂತ್ಯದ ಭವಿಷ್ಯತ್ ರಾಜ್ಯಾಂಗ ನಿಯೋಜನೆಯನ್ನು ದಕ್ಷರ ಮಂಡಳಿ ಆಲೋಚಿಸಿ ನಿರ್ಧರಿಸಬೇಕು. ಒಂದು ತಾತ್ಪೂರ್ತಿಕ ನಿಯೋಜನೆಯನ್ನು ಇಲ್ಲಿ ಸೂಚಿಸಲಾಗಿದೆ.

ಜಿಲ್ಲೆಗಳು: ೧) ಮೈಸೂರು ಸಂಸ್ಥಾನ ಮತ್ತು ನೀಲಗಿರಿ ೨) ದಕ್ಷಿಣ ಕನ್ನಡ ಜಿಲ್ಲೆ ೩) ಉತ್ತರ ಕನ್ನಡ ಜಿಲ್ಲೆ. ೪) ಉತ್ತರ ಕರ್ನಾಟಕ ೫) ಉ. ಕರ್ಣಾಟಕದ ದೇಶೀಯ ಸಂಸ್ಥಾನಗಳು ೬) ಮದರಾಸು ಸರ್ಕಾರಕ್ಕೆ ಸೇರಿರುವ ಬಳ್ಳಾರಿ, ಅನಂತಪುರ ಇತ್ಯಾದಿ-ಜತೆಗೆ ಸೊಂಡೂರು ೭) ಹೈದರಾಬಾದಿನ ಕನ್ನಡ ಜಿಲ್ಲೆಗಳು.

ಈ ಜಿಲ್ಲೆಗಳನ್ನೊಳಗೊಂಡ ಪ್ರಾತಿನಿಧಿಕ ಪ್ರಜಾಶಾಸನ ಸಭೆ ಸ್ಥಾಪಕವಾಗಬೇಕು. ಜಿಲ್ಲೆಗಳಿಗೆ ಜನಸಂಖ್ಯಾನುಗುಣವಾದ ಪ್ರಾತಿನಿಧ್ಯವಿರತಕ್ಕದ್ದು. ಈ ಸಭೆಯಿಂದಲೇ ಮಂತ್ರಿ ಮಂಡಳವೇರ್ಪಡಬೇಕು. ಮಂತ್ರಿ ಮಂಡಳದಲ್ಲಿ ಜಿಲ್ಲೆಗಳ ಪ್ರಾತಿನಿಧ್ಯವೂ, ಅಲ್ಪಸಂಖ್ಯಾತ ವರ್ಗಗಳ ಪ್ರಾತಿನಿಧ್ಯವೂ ಇರತಕ್ಕದ್ದು. ೧೮ ವರ್ಷಕ್ಕೆ ಮೇಲ್ಪಟ್ಟ ಎಲ್ಲರೂ ಮತಕೊಡಲು ಅಧಿಕಾರ ಪಡೆದಿರಬೇಕು, ಮಂತ್ರಿ ಮಂಡಳವೇ ಪ್ರಧಾನ ಮಂತ್ರಿಯನ್ನು ಚುನಾಯಿಸಬೇಕು. ಮಂತ್ರಿ ಸ್ಥಾನಕ್ಕೆ ಅಭ್ಯರ್ಥಿಗಳನ್ನು ಆಯಾ ಜಿಲ್ಲೆಯ ಪ್ರತಿನಿಧಿಗಳು ಸೂಚಿಸಬೇಕು. ಒಟ್ಟು ಸಭೆ ಯಾರಿಗೆ ಹೆಚ್ಚು ಮತ ಕೊಡುತ್ತದೆಯೋ ಅಂಥವರನ್ನು ಆಯ್ದುಕೊಳ್ಳಬೇಕು. ಜಿಲ್ಲಾಧಿಕಾರ ಏಳು ಅಥವಾ ಹೆಚ್ಚು (ಆಡಳಿತ ಸೌಕರ್ಯವನ್ನನುಸರಿಸಿ) ಅಧಿಕಾರಿಗಳ ಕೈಯಲ್ಲಿರತಕ್ಕದ್ದು.

ಪ್ರಾಂತ್ಯದ ಕೇಂದ್ರ ಕಾರ್ಯಾಲಯ, ಪ್ರಜಾ ಶಾಸನ ಸಭೆಯ ಕಾರ್ಯಾಲಯ ಹುಬ್ಬಳ್ಳಿಯಲ್ಲಿರತಕ್ಕದ್ದು.

ಪ್ರಾಂತ್ಯ ಸರ್ಕಾರದ ಭಾಷೆ, ಬೋಧಕಭಾಷೆ, ಸರ್ಕಾರದ ಭಾಷೆ ಶಾಸನ ಸಭೆಯ ಭಾಷೆಯೆಲ್ಲಾ ಕನ್ನಡ. ಸಹಾಯಕ ಭಾಷೆಗಳನ್ನಾಗಿ ಹಿಂದೀ, ಇಂಗ್ಲೀಷುಗಳನ್ನು ಬಳಸಬಹುದು.

ಪ್ರಾಂತ್ಯ ಸರ್ಕಾರ ಕೂಡಲೇ "ಕರ್ನಾಟಕ ವಿಶ್ವವಿದ್ಯಾನಿಲಯ" ವನ್ನು ಸ್ಥಾಪಿಸಬೇಕು. ಈಗ ಕರ್ನಾಟಕದಲ್ಲಿರುವ ಕಾಲೇಜುಗಳನ್ನೆಲ್ಲಾ ಅದು ಉಳಿಸಿಕೊಂಡು ಹೆಚ್ಚು ವೈಜ್ಞಾನಿಕ, ಔದ್ಯೋಗಿಕ, ವ್ಯಾಪಾರಿಕ ಕಾಲೇಜುಗಳನ್ನೂ, ಪ್ರಯೋಗಾಲಯಗಳನ್ನೂ ಸ್ಥಾಪಿಸಬೇಕು. ವಿಶ್ವ ವಿದ್ಯಾನಿಲಯದ ಕೇಂದ್ರಾಲಯ ಧಾರವಾಡದಲ್ಲಿ ಇರಬಹುದು.

ಕರ್ನಾಟಕ ಏಕೀಕರಣ ಸಂಘಗಳು, ಕರ್ನಾಟಕ ಸಂಘಗಳು, ವ್ಯಾಪಾರೀ ಸಂಘಗಳು ಈ ನಿಯೋಜನೆಯನ್ನು ಚರ್ಚಿಸಿ ತಮ್ಮ ಅಭಿಮತ ವನ್ನು ವ್ಯಕ್ತಪಡಿಸಬೇಕು. ಆದಷ್ಟು ಬೇಗ ಎಲ್ಲ ಭಾಗಗಳ ಪ್ರತಿನಿಧಿಗಳ ಒಂದು ದಕ್ಷ ಮಂಡಳ (Expert Committee) ಏರ್ಪಟ್ಟು ಪ್ರಾಂತ್ಯ ನಿಯೋಜನೆ ಕ್ಷಿಪ್ರವಾಗಿ ಕಾರ್ಯೋನ್ಮುಖವಾಗಲು ನೆರವಾಗಬೇಕು.

———

# ೨ ಕರ್ನಾಟಕಕ್ಕೆ ದುಡಿವ ನಾಯಕರು

ಪಂಡಿತ ಜವಹರಲಾಲ ನೆಹ್ರೂರವರು ಕಾನ್‌ಸೆಂಬ್ಲಿಯಲ್ಲಿ ಮಂಡಿಸಿದ " ಲೋಕಸತ್ತಾತ್ಮಕ ರಾಜಘಟನೆಯು (Republic) " ನಿರ್ಣಯ ಹೆಚ್ಚು ಕಡಿಮೆ ಹಿಂದೂಸ್ಥಾನದ ಎಲ್ಲ ಪ್ರಗತಿಗಾಮಿಗಳ ಹೃದಯದ ಕನ್ನಡಿ. ಭಾವೀ ಭಾರತದ ರಾಜ್ಯ ನಿರ್ವಾಹಕರು ಸಾಮಾನ್ಯ ಜನತೆಯ ಸರ್ವತೋಮುಖ ಏಳಿಗೆಗೆ ಹಾಗೂ ಜೀವಿತಕ್ಕೆ ಇಂಬುಗೊಡದಿದ್ದರೆ ಅದು ಮತ್ತೊಂದು ಪಾಶವಾಗುತ್ತದೆ. ಪಂಡಿತ ನೆಹ್ರೂರವರ ನಿರ್ಣಯ ಜನತೆಯನ್ನೇ ಬುನಾದಿ ಮಾಡಿಕೊಂಡು ನಿಯೋಜಿಸಲ್ಪಟ್ಟಿದೆ.

ಇಂಥ ಲೋಕಸತ್ತಾತ್ಮಕ ರಾಜ್ಯಭಾರತದಲ್ಲಿ ನಿಯೋಜಿತವಾಗಬೇಕಾದರೆ ಎಲ್ಲ ಪ್ರಾಂತ್ಯಗಳ ಸಂಪೂರ್ಣ ಸಹಕಾರ ಅತ್ಯಗತ್ಯ. ಪ್ರಾಂತ್ಯಗಳ ಇಂದಿನ ವಿಗಡ ವಿಭಜನೆ ಹೋಗಿ ನಾಳೆ ಭಾಷಾನ್ವಯ ಪ್ರಾಂತ್ಯ ರಚನೆಯಾಗಲೇಬೇಕು. ಆಯಾ ದೇಶಭಾಷೆಗಳನ್ನು ಅವಲಂಬಿಸಿದ ಜನ ತಮ್ಮ ಒಗ್ಗೂಟವನ್ನು ಸಾಧಿಸಿ ತನ್ಮೂಲಕ ಪ್ರಾಂತ್ಯ ಮೇಳವಾದ ಪ್ರಜಾರಾಜ್ಯವನ್ನು ಬಲಪಡಿಸಲು ಸಾಧ್ಯವಾಗುತ್ತದೆ. ಕಾಂಗ್ರೆಸ್ ತನ್ನ ದೂರದರ್ಶಿತ್ವದಿಂದ ಈ ಸತ್ಯವನ್ನು ೧೯೨೧ರಲ್ಲಿ ಕಂಡು ಭಾಷಾನುವಾರ ಪ್ರಾಂತ್ಯ ರಚನೆಯ ಸಿದ್ಧಾಂತಕ್ಕೆ ಪೂರ್ಣ ಬೆಂಬಲ ಕೊಟ್ಟಿತು.

ರಚಿತವಾಗಲಿರುವ ಭಾರತದ ರಾಜ್ಯಾಂಗ ಘಟನೆಯಲ್ಲಿ ಬೇರೆ ಬೇರೆ ಪ್ರಾಂತ್ಯಗಳ ಜನ ತಮ್ಮ ಹಕ್ಕುಬಾಧ್ಯತೆಗಳನ್ನು ಸ್ಥಾಪಿಸಿಕೊಳ್ಳಲೆತ್ನಿಸುತ್ತಿದ್ದಾರೆ. ಮಹಾರಾಷ್ಟ್ರ, ತಮಿಳು, ತೆಲುಗು, ಕೇರಳದ ಕೂಗು ಗಟ್ಟಿಯಾಗಿ ಕೇಳಿಬರುತ್ತಿದೆ. ಕರ್ನಾಟಕ ಸ್ವರ ಎಂದಿನಂತೆ ಕ್ಷೀಣ. ಕನ್ನಡ ಜನರ ಹಿತ ಪ್ರತಿಪಾದಿಸುವ ನಾಯಕರು ಎಂದಿನಂತೆ ದುರ್ಬಲರು.

ದಾವಣಗೆರೆ, ರಬಕವಿಗಳಲ್ಲಿ ಸೇರಿದ ಕರ್ನಾಟಕ ಏಕೀಕರಣ ಸಮ್ಮೇಳನಗಳಲ್ಲಿ ಈ ಪ್ರಶ್ನೆ ವಿಪುಲ ಚರ್ಚೆಗೊಳಗಾಗಿ ಭಾಷಾನುವಾರ ಪ್ರಾಂತ್ಯರಚನೆಯ ಅವಶ್ಯಕತೆ ಪುನರ್-ಪಠಿಸಲ್ಪಟ್ಟಿತು. ಪ್ರಾಂತ್ಯದ ಮಾತು ಎಲ್ಲರೂ ಆಡುತ್ತಿದ್ದಾರೆ-ಆದರೆ ಅದರ ಸಾಧನೆಗಾಗಿ ಹೆಗಲು ಗೊಟ್ಟು ನಿಂತು ಕೆಲಸಮಾಡುತ್ತಿರುವವರು ಕರ್ನಾಟಕದಲ್ಲಿ ವಿರಳ.

ತಮಿಳಿಗೆ ಸಿ. ಆರ್. ತೆಲುಗಿಗೆ ಪಟ್ಟಾಭಿ, ಪ್ರಕಾಶಂ, ಮಹಾರಾಷ್ಟ್ರಕ್ಕೆ ಶಂಕರರಾವ್ ದೇವ್ ದುಡಿಯುತ್ತಿರುವಂತೆ ಕರ್ನಾಟಕಕ್ಕೆ ದುಡಿಯುವ ನಾಯಕರೊಬ್ಬರೂ ಇಲ್ಲ. ನಮ್ಮ ರಾಜಕಾರಣವಿನ್ನೂ ಸಣ್ಣ ಪುಟ್ಟ ಆಸೆ, ಅಧಿಕಾರಗಳ ಸಾಧನೆಯ ವಿಷವ್ಯೂಹಬಿಟ್ಟು ಹೊರಗೆ ಬಂದಿಲ್ಲ.

ಕನ್ನಡನಾಡಿನ ರಾಜಕಾರಣದ ಸರ್ವಸ್ವಾಮ್ಯ ವಹಿಸಿ ಈ ೨೫ ವರ್ಷ ಸರ್ವಾಧಿಕಾರ ನಡೆಸಿದ ಹಿರಿಯರ ಹಣೇಬರಹ ನೋಡಿಯಾಯಿತು. ದೇಶವೆಲ್ಲಾ ರಾಮದುರ್ಗದ ದುರಂತದ ಪರಿಣಾಮವಾಗಿ ಒಡೆದು ಚೂರಾದುದನ್ನು ಕಂಡಾಯ್ತು. ಇನ್ನಾದರೂ ಕನ್ನಡ ಜನ ವಿವೇಕವಂತರಾಗಬೇಕು. ನಮ್ಮ ನಾಯಕರ ಪೊಳ್ಳುತನವನ್ನರಿತುಕೊಳ್ಳಬೇಕು. ಪರಪ್ರಾಂತ್ಯ, ಪರಭಾಷೆಗಳ ಮೋಹದಿಂದ ಅವರು ಕನ್ನಡನಾಡಿಗೆ ಮಾಡುತ್ತಿರುವ ಅನ್ಯಾಯ ಪರಂಪರೆಯನ್ನು ಅರ್ಥಮಾಡಿಕೊಳ್ಳಬೇಕು.

ತರುಣ ಕಾರ್ಯಕರ್ತರನ್ನು ಎಚ್ಚರಿಸಿ ಅವರನ್ನು ನಾಡಸೇವೆಯ ನೊಗಕ್ಕೆ ಹೂಡಲು ಧಾರವಾಡದಲ್ಲಿ (ಜನವರಿ ೨೫-೨೬) ಒಂದು ಮಹಾಸಭೆಯನ್ನು ಕೆಲವು ಬಂಧುಗಳು ಕರೆದಿರುವುದು ಸಮಯೋಚಿತವಾಗಿದೆ. ತಮ್ಮ ಮುಂದಿರುವ ಮಹತ್ಕಾರ್ಯದ ಅರಿವು ಅವರಿಗಿದೆ. ಅದಕ್ಕೆ ಬೇಕಾದ ನಿಷ್ಠೆ, ದಕ್ಷತೆ ಇದೆಯೋ ಇಲ್ಲವೋ ಮುಂದೆ ತಿಳಿಯಬೇಕು.

ಸಮ್ಮೇಳನದ ಕಾರ್ಯಕ್ಷೇತ್ರವನ್ನು ಕಾರ್ಯಕರ್ತರು ಇಂತು ವಿಶ್ಲೇಷಿಸಿದ್ದಾರೆ.

## ಮಹಾಸಭೆಯಲ್ಲಿ ಸ್ವೀಕರಿಸಲ್ಪಡಬಹುದಾದ ಗೊತ್ತುವಳಿಗಳು

೧. "ಅಖಂಡ ಕರ್ನಾಟಕದ ಸೇವೆಯನ್ನೇ ಧ್ಯೇಯವಾಗಿಟ್ಟುಕೊಂಡು ಸಮಯೋಚಿತ ರೀತಿಯಲ್ಲಿ ಸತತ ದುಡಿಯುವ "ಕರ್ನಾಟಕ ಸೇವಾ ಮಂಟಪ"ವೆಂಬ ಒಂದು ಸಂಸ್ಥೆಯನ್ನು ಸ್ಥಾಪಿಸುವದು ಅತ್ಯವಶ್ಯವೆಂದು ಈ ಸಭೆಯು ನಿರ್ಣಯಿಸುತ್ತದೆ."

೨. "ಅಖಿಲ ಕರ್ನಾಟಕಕ್ಕೆ ಸಂಬಂಧಪಟ್ಟ ಎಲ್ಲ ಬಗೆಯ ಅಂಕಿ ಅಂಶಗಳನ್ನು ಕೂಡಿ ಹಾಕಲು 'ಅಂಶ ಸಂಗ್ರಹ ಸಮಿತಿ'ಯನ್ನು ನಿಯಮಿಸಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ."

೩. "ಮನೆನಾಡು ತತ್ವಕ್ಕನುಸರಿಸಿ ವಿಶಾಲ ಕರ್ನಾಟಕದ ಮೇರೆಯನ್ನು ಗೊತ್ತುಪಡಿಸಲಿಕ್ಕೂ ಗಡಿನಾಡುಗಳಲ್ಲಿ ಇರುವ ಪ್ರತಿಯೊಂದು ಹಳ್ಳಿ, ಪಟ್ಟಣ ಮತ್ತು ತಾಲ್ಲೂಕುಗಳ ಪೂರ್ವದ ಇತಿಹಾಸವನ್ನು ಅಭ್ಯಸಿಸಲಿಕ್ಕೂ ಒಂದು 'ಗಡಿಸಮಿತಿ' ಯನ್ನು ನಿಯಮಿಸುವುದು ಅವಶ್ಯವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ."

೪. "ಅಖಂಡ ಕರ್ನಾಟಕದ ಹೊಸ ರಾಜ್ಯಘಟನೆಯಲ್ಲಿ ಸಂಸ್ಥಾನಗಳ ಸ್ಥಾನಮಾನಗಳನ್ನು ವಿವೇಚಿಸಲು ಒಂದು 'ಸಂಪರ್ಕ ಸಮಿತಿ'ಯನ್ನು ನಿಯಮಿಸುವದು ಅವಶ್ಯವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ."

೫. "ಅಖಿಲ ಕರ್ನಾಟಕದ ಭಾವೀ ರಾಜ್ಯಘಟನೆಯ ರೂಪರೇಷೆಗಳ ಕರಡನ್ನು ಸಿದ್ಧಗೊಳಿಸಲು ಒಂದು 'ಆಡಳಿತೆಯ ಸಮಿತಿ'ಯನ್ನು ನೇಮಿಸುವುದು ಅವಶ್ಯವೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ."

೬. "ಯುದ್ಧೋತ್ತರ ಪುನರ್ರಚನೆಯ ಯೋಜನೆಗಳಲ್ಲಿ ಕರ್ನಾಟಕದ ಹಿತಕ್ಕೆ ಬಾಧೆ ತಟ್ಟದಂತೆ ಅವಶ್ಯವೆನಿಸಿದ ಎಲ್ಲ ಕೆಲಸಗಳನ್ನು ಕೈಕೊಳ್ಳಲು ಒಂದು 'ಯುದ್ಧೋತ್ತರ ಕರ್ನಾಟಕ ಪುನರ್ರಚನಾ ಸಮಿತಿ'ಯನ್ನೂ ನಿಯಮಿಸುವದು ಅವಶ್ಯವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ."

೭. "ಕರ್ನಾಟಕ ಏಕೀಕರಣ ಆಂದೋಲನಕ್ಕೆ ಪ್ರಚಂಡ ಬೆಂಬಲವನ್ನು ಕೊಡಲು ಒಂದು 'ಪ್ರಚಾರ ಸಮಿತಿ'ಯನ್ನು ನಿಯಮಿಸುವದು ಅತ್ಯವಶ್ಯವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ. ಅಲ್ಲದೆ ಆ ಸಮಿತಿಯ ಹಿರಿಯತನದಲ್ಲಿ ಅನೇಕ ಪ್ರಚಾರಕರನ್ನು ಕೂಡಲೆ ನೇಮಿಸಬೇಕೆಂದು ಮತ್ತು ಪ್ರಚಾರ ಸಾಹಿತ್ಯದ ಕಿಡಿಗಳನ್ನು ಹೇರಳವಾಗಿ ಪ್ರಕಟಿಸಬೇಕೆಂದು ಈ ಸಭೆಯು ಸೂಚಿಸುತ್ತದೆ."

೮. "ಕರ್ಣಾಟಕ ಏಕೀಕರಣದ ಆಂದೋಲನಕ್ಕೆ ಸಹಾಯವಾಗಲೆಂದೂ ಶಿಸ್ತು ಸಂಘಟನೆಯನ್ನು ಕಾಯುವದಕ್ಕೆಂದೂ 'ಕರ್ಣಾಟಕ ಸ್ವಯಂ ಸೇವಕರ ಬಲ' ಕೆ. ಎಸ್. ಬಿ. ಸ್ಥಾಪಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ."

೯. "ಸೇವಾಮಂಟಪದ ಕಚೇರಿಯ ವೆಚ್ಚಕ್ಕಾಗಿ ಮತ್ತು ಪ್ರಚಾರಕರ ವೇತನಕ್ಕಾಗಿ ಎರಡು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಧನವನ್ನು

ಕೂಡಿಸಲಿಕ್ಕೆ ಒಂದು 'ನಿಧಿ ಸಂಗ್ರಹ ಸಮಿತಿ'ಯನ್ನು ನೇಮಿಸಬೇಕೆಂದು ಈ ಸಭೆಯು ಆಗ್ರಹಪಡಿಸುತ್ತದೆ. ಈ ಸಮಿತಿಯವರು ತಮ್ಮ ಕೆಲಸವನ್ನು ಕೂಡಲೇ ಪ್ರಾರಂಭಿಸಿ ನಾಲ್ಕುತಿಂಗಳಲ್ಲಿ ಅದನ್ನು ಪೂರ್ತಿಗೊಳಿಸಬೇಕೆಂದು ಈ ಸಭೆಯು ಸೂಚಿಸುತ್ತದೆ."

೧೦. "ಭಾಷಾನುಗುಣ ಪ್ರಾಂತ ರಚನೆಯ ತತ್ವವನ್ನು ಕೂಡಲೇ ಮಾನ್ಯಮಾಡಬೇಕೆಂದೂ ಕರ್ನಾಟಕ ಏಕೀಕರಣದ ಪ್ರಶ್ನೆಯನ್ನು ಮುಂದೂಡಬಾರದೆಂದೂ ಗಡಿಗಳನ್ನು ನಿರ್ಣಯಿಸುವಾಗ ಮನೆನಾಡು ತತ್ವವನ್ನೇ ಅಂಗೀಕರಿಸಬೇಕೆಂದೂ ಈ ಸಭೆಯು ಘಟನಾ ಸಮಿತಿಯನ್ನು ಆಗ್ರಹಪೂರ್ವಕವಾಗಿ ಬಿನ್ನವಿಸಿಕೊಳ್ಳುತ್ತದೆ."

೧೧. "ಕರ್ನಾಟಕದ ಅಭ್ಯುದಯಕ್ಕೆ ವಿಘಾತಕವಾದ ದಕ್ಷಿಣ ಸಂಸ್ಥಾನಗಳ ಒಕ್ಕೂಟದ ಯೋಜನೆಯನ್ನು ಈ ಸಭೆಯು ತೀವ್ರವಾಗಿ ಪ್ರತಿಭಟಿಸುತ್ತದೆ."

೧೨. "ಕರ್ನಾಟಕ ವಿಶ್ವವಿದ್ಯಾಲಯವನ್ನು ಇದೇ ವರ್ಷ ಸ್ಥಾಪಿಸ ಬೇಕೆಂದು ಮತ್ತು ಕರ್ನಾಟಕ ಪ್ರದೇಶದಲ್ಲಿ ಇರುವ ಯಾವ ಶಿಕ್ಷಣ ಸಂಸ್ಥೆ ಯನ್ನೂ ಮಹಾರಾಷ್ಟ್ರ ವಿಶ್ವವಿದ್ಯಾಲಯಕ್ಕೆ ಸೇರಿಸುವ ಅನ್ಯಾಯವನ್ನು ಮಾಡಕೂಡದೆಂದೂ ಈ ಸಭೆಯು ಮುಂಬಯಿ ಸರಕಾರದವರನ್ನು ಆಗ್ರಹ ಪೂರ್ವಕವಾಗಿ ಬಿನ್ನವಿಸಿಕೊಳ್ಳುತ್ತದೆ."

೧೩. ಕರ್ನಾಟಕದಲ್ಲಿಯ ಅಧಿಕಾರ ಸ್ಥಾನಗಳಿಗೆ ಅಚ್ಚ ಕನ್ನಡಿ ಗರನ್ನೇ ನಿಯಮಿಸಬೇಕೆಂದು ಸಂಬಂಧಪಟ್ಟ ಎಲ್ಲ ಸರಕಾರಗಳನ್ನೂ ಈ ಸಭೆಯು ಬಿನ್ನವಿಸಿಕೊಳ್ಳುತ್ತದೆ. ಕರ್ನಾಟಕದಲ್ಲಿ ನವಕರಿಗಾಗಿ ಬಂದ ಕನ್ನಡೇತರರು ಕರ್ನಾಟಕದ ಹಿತವನ್ನು ಬಯಸುವುದಿಲ್ಲವೆಂದು ಈ ಸಭೆಯು ಸ್ಪಷ್ಟವಾಗಿ ತಿಳಿಸುತ್ತದೆ."

೧೪. "ದಾವಣಗೆರೆ ಮತ್ತು ರಬಕವಿ ಮಹಾಸಭೆಗಳಲ್ಲಿ ಸ್ವೀಕೃತ ವಾದ ಗೊತ್ತುವಳಿಗಳಿಗೆ ಈ ಸಭೆಯು ಬೆಂಬಲಕೊಡುತ್ತದೆ."

೧೫. "ಕರ್ನಾಟಕದಲ್ಲಿ ಜರುಗುವ ಸಭೆ ಸಮ್ಮೇಳನಗಳಲ್ಲಿ ಕನ್ನಡ ವನ್ನಲ್ಲದೆ ಇತರ ಯಾವ ಭಾಷೆಯನ್ನೂ ಉಪಯೋಗಿಸಬಾರದೆಂದು ಈ ಸಭೆಯು ನಿರ್ಣಯಿಸುತ್ತದೆ. ಮತ್ತು ಆಮಂತ್ರಣ, ಮಾನಪತ್ರ, ಹಸ್ತ

ಪತ್ರಿಕೆ, ಜಾಹೀರ ನೋಟೀಸು ಮೊದಲಾದವುಗಳಲ್ಲಿ ಕನ್ನಡವನ್ನೇ ಉಪಯೋಗಿಸಬೇಕೆಂದೂ ಮತ್ತು ಬೇರೆ ಭಾಷೆಯನ್ನು ಉಪಯೋಗಿಸಿದಲ್ಲಿ ಅಂಥ ಪ್ರಸಂಗಗಳನ್ನು ಬಹಿಷ್ಕರಿಸಬೇಕೆಂದೂ ಈ ಸಭೆಯು ಸ್ಪಷ್ಟವಾಗಿ ಅಭಿಪ್ರಾಯಪಡುತ್ತದೆ. ಮೊನ್ನೆ ಬೆಳಗಾಂವಿಯಲ್ಲಿ ಜರುಗಿದ "ಕರ್ಣಾಟಕ ಮಹಿಳಾ ಪರಿಷತ್ತಿನ" ಕಾಲದಲ್ಲಿಯೂ ಅಲ್ಲಿಯ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ್ ಮಾನಪತ್ರವನ್ನು ಅರ್ಪಿಸುವಾಗಲೂ ಕನ್ನಡವನ್ನು ಬಿಟ್ಟು ಇತರ ಭಾಷೆಯನ್ನು ಉಪಯೋಗಿಸಿದ್ದನ್ನು ಈ ಸಭೆಯು ಖಂಡಿಸುತ್ತದೆ."

೧೬. ಡಿಸ್ಟ್ರಿಕ್ಟ್ ಸ್ಕೂಲ್‌ಬೋರ್ಡು, ತಾಲ್ಲೂಕಾ ಸ್ಕೂಲುಬೋರ್ಡು, ಮತ್ತು ಶಾಸನ ಸಭೆಗಳಿಗೆ ಹುರಿಯಾಳುಗಳನ್ನು ಆರಿಸುವಾಗ ಕನ್ನಡ ದ್ರೋಹಿಗಳಿಗೆ ಮತ್ತು ಕರ್ಣಾಟಕದ ಅಭಿಮಾನಶೂನ್ಯರಿಗೆ ಎಂದೂ ಮತವನ್ನು ಕೊಡಕೂಡದೆಂದು ಸಭೆಯು ಕರ್ಣಾಟಕದಲ್ಲಿಯ ಎಲ್ಲ ಮತ ದಾರರನ್ನೂ ಬೇಡಿಕೊಳ್ಳುತ್ತದೆ."

ಈ ನಿರ್ಣಯಗಳ ಮಹಾ ಗರ್ಭದೊಳಗೆ ಕರ್ನಾಟಕದ ಸಮಸ್ಯೆ ಗಳೆಲ್ಲವೂ ಅಡಕವಾಗಿದೆ. ಈ ಸಂದರ್ಭದಲ್ಲಿ ಕಾರ್ಯಕರ್ತರು ಹೆಚ್ಚು ಗಮನಿಸಬೇಕಾದ ಕೆಲವು ವಿಷಯಗಳನ್ನಿಲ್ಲಿ ಸೂಚಿಸಬಯಸುತ್ತೇವೆ.

೧. ಕರ್ನಾಟಕ ಪ್ರಾಂತ್ಯದ ಒಂದು ಸ್ಪಷ್ಟ ಚಿತ್ರ ಎಲ್ಲರಲ್ಲಿಯೂ ಮೂಡಬೇಕು. ಕರ್ನಾಟಕಕ್ಕೊಂದು ವಿಶ್ವ ವಿದ್ಯಾನಿಲಯ, ವಿಸರಣಾ ಲಯಗಳನ್ನು ದೊರಕಿಸುವುದು ಬಹು ಸಣ್ಣ ವಿಷಯ. ನಮ್ಮ ಎಲ್ಲ ಸಮಸ್ಯೆ ಗಳ ನಿವಾರಣೆಯಿರುವುದು ಪ್ರಾಂತ್ಯ ನಿಯೋಜನೆಯಲ್ಲಿ. ವಿಶ್ವವಿದ್ಯಾನಿಲಯ, ಭಟ್ಕಳ ಬಂದರು ಮುಂತಾದ ವಿಷಯಗಳಿಗೆ ಈಗ ಲಕ್ಷ್ಯಕೊಟ್ಟು, ಆ ದಾರಿ ಯಲ್ಲಿ ಚೈತನ್ಯ ವ್ಯಯವಾಗುವಂತೆ ಮಾಡಿ ಮೂಲಭೂತವಾದ ತತ್ವವನ್ನು ಹಿಂಬದಿಗೆ ತಳ್ಳಬಾರದು.

೨. ಕನ್ನಡದ ಭವಿಷ್ಯಕ್ಕೊದಗಿರುವ ದೊಡ್ಡ ಕುತ್ತು ದಕ್ಷಿಣೀ ಸಂಸ್ಥಾ ನಗಳ ಒಗ್ಗೂಟ ಕರ್ನಾಟಕದ ಒಳಕೋಟಲೆಗಳನ್ನರಿಯದೆ ಪಂಡಿತ ನೆಹ್ರೂ ಅವರು ದಕ್ಷಿಣೀ ಸಂಸ್ಥಾನಗಳ (ಅಂದರೆ ಉತ್ತರ ಕರ್ನಾಟಕ ಸಂಸ್ಥಾನಗಳ) ಒಗ್ಗೂಟಕ್ಕೆ ಬೆಂಬಲವಿತ್ತಿದ್ದಾರೆ. ಒಗ್ಗೂಡಿದ ದಕ್ಷಿಣೀ ಅರಸರು ಪ್ರಜೆಗಳ ಹಿತವನ್ನು ಹೆಚ್ಚು ವ್ಯವಸ್ಥಿತ ರೀತಿಯಲ್ಲಿ ತುಳಿಯಲು

ಈ ಒಗ್ಗೂಟ ನೆರವಾಗುತ್ತದೆ. ಮುಂದೆ ಬಲಿಷ್ಠ ಅರಸರ ಮೇಳ ಭಾರತದ ಲೋಕಸತ್ತಾತ್ಮಕ ರಾಜ್ಯದ ಕಂಟಕವಾಗುತ್ತದೆ. ಸಂಸ್ಥಾನಗಳಲ್ಲಿರುವ ಪ್ರಜೆಗಳಿಗೆ ಇಂಥ ಒಗ್ಗೂಟ ಬೇಕಿಲ್ಲ. ಇದರ ಬದಲು ತಮ್ಮ ತಮ್ಮ ಸಂಸ್ಥಾನಗಳನ್ನು ಬಳಿಯಲ್ಲಿರುವ ಬ್ರಿಟಿಷ್ ಕರ್ನಾಟಕಕ್ಕೆ ಸೇರಿಸಿದರೆ ಅವರು ಬೇಡವೆನ್ನುವುದಿಲ್ಲ. ಸಂಸ್ಥಾನಗಳ ಪ್ರಜಾಭಿಪ್ರಾಯವನ್ನು ಸಂಘಟಿಸಿ ಅವರು ಏಕಮುಖವಾದ ಕಾರ್ಯಕ್ರಮವನ್ನು ಕೈಗೊಂಡು ಅರಸರ ಒಗ್ಗೂಟವನ್ನು ಎದುರಿಸುವಂತೆ ಮಾಡಬೇಕಾದುದು ಕಾರ್ಯಕರ್ತರ ಕರ್ತವ್ಯ.

೩. ಪ್ರಾಂತ್ಯಗಳ ಗಡಿ ನಿಯೋಜನೆಯ ಬಗ್ಗೆ ಕಾರ್ಯಕರ್ತರು ಯೋಗ್ಯಪ್ರಸಾರ ಕಾರ್ಯವನ್ನು ಈಗಿನಿಂದ ಕೈಗೊಳ್ಳಬೇಕು. ಕರ್ನಾಟಕದ ಗಡಿಗಳ ಕೆಲವು ಭಾಗಗಳನ್ನು ನುಂಗಲು ಪಟ್ಟಾಭಿ, ಶಂಕರರಾವ್ ದೇವ್ ಹೊಂಚು ಕಾಯುತ್ತಿದ್ದಾರೆ. ಹಿಂದೆ ಆದವಾನಿ, ಬಳ್ಳಾರಿ, ಕಾಸರಗೋಡು, ಬೆಳಗಾಂವಿಯ ಭಾಗಗಳಲ್ಲಿ ಜನಗಣತಿ ತೆಗೆದುಕೊಂಡಾಗ, ಆ ಕೆಲಸಕ್ಕೆ ವಿಧಾಯಕವಾದ ಮರಾಟಿ, ತೆಲುಗು, ತಮಿಳು, ಮಲಯಾಳಿ ಗಣಕರು ಜನರ ಭಾಷೆಯನ್ನು ಅದಲುಬದಲು ಮಾಡಿ ಸುಳ್ಳು ಲೆಕ್ಕ ಒಪ್ಪಿಸಿದ್ದಾರೆ. ನಾಳೆ ಗಡಿಗಳ ನಿರ್ಣಯ ಜನ ನಿರ್ಧಾರದ ಮೇಲೆ ಆಗುವುದಾದರೂ ಅದಕ್ಕೆ ಪೂರ್ವಭಾವಿಯಾಗಿ ಜನಗಳನ್ನು ಎಚ್ಚರಿಸಬೇಕು. ಹೊರಗಿನವರ ಕೌಟಿಲ್ಯ, ಕೃತ್ರಿಮಗಳಿಗೆ ಅಜ್ಞರು ಬಲಿ ಬೀಳದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಗಡಿನಾಡುಗಳಲ್ಲಿ ಉಗ್ರಕಾರ್ಯಕ್ರಮ ಆರಂಭವಾಗಬೇಕು.

೪. ಮೈಸೂರಿನಂಥ ಪ್ರಾಗತಿಕ ಸಂಸ್ಥಾನದಲ್ಲಿ ಕನ್ನಡದ ತವರೆಂದು ಹೆಸರಾದ ಸಂಸ್ಥಾನದಲ್ಲಿ ಕನ್ನಡಕ್ಕೆ ಆಗುತ್ತಿರುವ ಅನ್ಯಾಯ ಹೇಳತೀರದು. ಪರಕೀಯರೂ ಪರಭಾಷಾಭಿಮಾನಿಗಳೂ ಆದ ನಾಲ್ಕು ಜನ ಅಧಿಕಾರಿಗಳು ಕನ್ನಡ ವಿಶ್ವವಿದ್ಯಾನಿಲಯದ ಒಳಗೆ, ಕೋರ್ಟು ಕಛೇರಿಗಳ ಒಳಗೆ ಹಾಗೂ ಶಿಕ್ಷಣ ಕ್ಷೇತ್ರದ ಒಳಗೆ ಕನ್ನಡಕ್ಕೆ ತಡೆಗಟ್ಟುತ್ತಿದ್ದಾರೆ. ಏಕೀಕರಣ ಕೆಲಸಕ್ಕೆ ಮನಸ್ಸು ಗೊಟ್ಟವರು ಮೈಸೂರು ಕಾಂಗ್ರೆಸ್ಸನ್ನು ಕೂಡಿ ಕೊಂಡು ಮೈಸೂರಿನಲ್ಲಿ ಕನ್ನಡದ ಬಗ್ಗೆ ಪ್ರಬಲ ಚಳುವಳಿ ಮಾಡಬೇಕಾ ದುದವಶ್ಯಕ.

ಧಾರವಾಡದಲ್ಲಿ ಸೇರಲಿರುವ ಕಾರ್ಯಕರ್ತರ ಸಭೆ ಒಣನಿರ್ಣಯಗಳ ಸಭೆಯಾಗದೆ ನಿಜಕ್ಕೂ ಕಾರ್ಯಕರ್ತರ ಸಭೆಯಾಗಲೆಂದು ನಮ್ಮ ಹಾರೈಕೆ. ಇಂಥ ಪರ್ವಕಾಲದಲ್ಲಿ ಕನ್ನಡ ಜನ ಆಲಸಿಗರಾಗಿದ್ದರೆ 'ಎಣ್ಣೆ ಬಂದಾಗ ಕಣ್ಣುಮುಚ್ಚಿಕೊಂಡಂತೆ' ಆಗುತ್ತದೆ. ತಾವೇ ತಮ್ಮ ಭವಿಷ್ಯದ ಮೃತ್ಯುಗಳಾಗುತ್ತಾರೆ.

———

# ೩. ಕನ್ನಡನಾಡಿನ ಮೇಲೆ ಆಂಧ್ರರ ಧಾಳಿ


## ೧

ಭಾಷಾನುವಾರು ಪ್ರಾಂತ್ಯರಚನೆಯ ಮಾತು ಕೆಲವು ಪ್ರಾಂತ್ಯಗಳಿಂದ ಬಹಳ ಗಟ್ಟಿಯಾಗಿ ಕೇಳಿಬರುತ್ತಿದೆ. ತಮಿಳು, ಕೇರಳ, ಆಂಧ್ರ, ಕರ್ನಾಟಕದ ಜನಕ್ಕೆಲ್ಲಾ ಪ್ರಾಂತ್ಯ ರಚನೆ ಬೇಕು. ಆದರೆ ಆಂಧ್ರರ ಕೂಗು, ಚಳುವಳಿ ಎಲ್ಲರಿಗಿಂತ ಹೆಚ್ಚು. ಆಂಧ್ರಕ್ಕೆ ಪ್ರಾಂತ್ಯಬೇಕೆಂಬ ತತ್ವವನ್ನಲ್ಲದೆ ಆಂಧ್ರೇತರ ಪ್ರಾಂತ್ಯಗಳ ಕೆಲವು ಭಾಗಗಳೂ ತಮ್ಮದೆಂದು ಆಂಧ್ರರು ಚಳುವಳಿಮಾಡುತ್ತಿದ್ದಾರೆ. ದತ್ತ ಮಂಡಲದ ಸೀಮೆಗಳು, ಹೈದರಾಬಾದು, ಮೈಸೂರಿನ ಕೆಲವು ಭಾಗಗಳು ಭಾವೀ ಆಂಧ್ರ ಪ್ರಾಂತ್ಯದಲ್ಲಿ ಸಮಾವೇಶವಾಗಬೇಕೆಂದು ಅವರು ಉಗ್ರಚಳುವಳಿ ಕೈಗೊಂಡಿದ್ದಾರೆ. ಇಂದಿಗೂ ಅನಂತಪುರದ ಕಾಲೇಜನ್ನು ಆಂಧ್ರ ವಿಶ್ವವಿದ್ಯಾನಿಲಯಕ್ಕೆ ಸೇರಿಸುವ ಅವರ ಪ್ರಯತ್ನ ಅವ್ಯಾಹತವಾಗಿ ಸಾಗಿದೆ. ವಿಜಯನಗರ ಸಾಮ್ರಾಜ್ಯ ತಮ್ಮದೆಂಬ ತರ್ಕವಿರುದ್ಧ, ಇತಿಹಾಸಬಾಹಿರ, ಸತ್ಯದೂರ ವಾದವನ್ನು ಅವರು ಬಿಟ್ಟಿಲ್ಲ.

ಆಂಧ್ರದ ರಾಜಕಾರಣಿಗಳು ಮಾತ್ರವೇ ಅಲ್ಲ ಈ ಚಳುವಳಿಯಲ್ಲಿ ಆಸಕ್ತರು. ತ್ಯಾಗರಾಜನ ಹೆಸರು ಮುಂದೆಮಾಡಿ, ಸಂಗೀತ ಭಾಷೆಯ ಬಂಧನದಿಂದ ದೂರವಾದುದೆಂದು ತಿಳಿಸಿ ಆಂಧ್ರರು ತೆಲುಗಿನ ಪ್ರಚಾರ ಮಾಡುತ್ತಾರೆ. ಸಾಹಿತ್ಯರಂಗದಲ್ಲಿ ಡಾ. ಸಿ. ಆರ್. ರೆಡ್ಡಿ, ಡಾ. ಪಿ. ಟಿ. ರಾಜು ಮೊದಲಾದ ಮಹನೀಯರು ಕನ್ನಡ ಕವಿಗಳ ಹಣೆಯ ಮೇಲೆ ಆಂಧ್ರ ಮುದ್ರೆಯನ್ನೊತ್ತಲು ಯತ್ನಿಸುತ್ತಿದ್ದಾರೆ. ಆಂಧ್ರದ ರಾಜಕಾರಣಿಗಳು, ಶಿಕ್ಷಣವೇತ್ತರು, ಕಲಾವಿದರು, ಸಮಾಜ ಸುಧಾರಕರು ಎಲ್ಲರೂ ಒಂದಲ್ಲ ಒಂದು ಬಗೆಯಲ್ಲಿ ಆಂಧ್ರ ಪ್ರಭಾವ ಪ್ರಸಾರಮಾಡುತ್ತಿದ್ದಾರೆ. ಜರ್ಮನಿಯಲ್ಲಿ ಒಬ್ಬ ಡಾ. ಗೋಬೆಲ್ಸ್ ಇದ್ದಿದ್ದರೆ ಇಂದು ಆಂಧ್ರದಲ್ಲಿ ನೂರಾರು, ಸಾವಿರಾರು, ಗೋಬೆಲ್ಸ್‌ಗಳಿದ್ದಾರೆ. ಮೈಸೂರಿನ ಮಾಜಿ ದಿವಾನರಾಗಿದ್ದ ಶ್ರೀ ನ್ಯಾಪತಿ ಮಾಧವರಾಯರು ಮೈಸೂರಿನಿಂದ

ದೊರೆಯುವ ವಿರಾಮ ವೇತನವನ್ನು ಈ ಪವಿತ್ರ ಕಾರ್ಯಕ್ಕೆ ನಿವೇದಿಸಿ, ಆಂಧ್ರ ಪ್ರಚಾರಕ್ಕಾಗಿ ಸಂಚಾರಮಾಡುತ್ತಿದ್ದಾರೆ. ಮದರಾಸು ವಿಸರ ಶಾಲೆಯು ಇಂಥ ಪ್ರಚಾರಕರಿಗೆ ಒಂದು ಆಯುಧ. ಮದರಾಸಿನ ಇಂಗ್ಲಿಷ್ ಪತ್ರಿಕೆಗಳು ಇವರ ಪಲ್ಲವಿಗೆ ತಾಳಹಾಕುತ್ತಿವೆ. ಆಂಧ್ರರು ಪರಪ್ರಾಂತ್ಯಗಳ ಆಕ್ರಮಣಕ್ಕೆ ಒಂದು ಪ್ರಬಲ ಪ್ರಸಾರ ಯಂತ್ರವನ್ನೇ ನಿರ್ಮಿಸಿ ಉಪಯೋಗಿಸುತ್ತಿದ್ದಾರೆ. ಆಂಧ್ರದ ನೂರಾರು ಶ್ರೀಮಂತ ಜಮೀನುದಾರರ ಉದಾರಾಶ್ರಯ ಈ ಚಳುವಳಿಗೆ ದೊರೆತಿದೆ.

ಈ ಪ್ರಸಾರಕಾರ್ಯ ಸೂಕ್ಷ್ಮವಾಗಿ ಮುಂಬಯಿ ಪತ್ರಿಕೆಗಳಲ್ಲಿಯೂ ಆರಂಭವಾಗಿದೆ. 'ಭಾರತಜ್ಯೋತಿ' (೧೨-೧-೧೯೪೭) ಪತ್ರಿಕೆಯಲ್ಲಿ



ಶ್ರೀ ಎಸ್. ಜಿ. ದಾಸ್ ಅನ್ನುವವರು ಒಂದು ಲೇಖನ ಬರೆದು, ಜತೆಯಲ್ಲಿ ಒಂದು ನಕ್ಷೆಯನ್ನು ಪ್ರಕಟಿಸಿ ಆಂಧ್ರ ಪ್ರಸಾರ ಕಾರ್ಯವನ್ನು ಬಹು ವಿಲಕ್ಷಣವಾಗಿ ಮುಂದುವರಿಸಿದ್ದಾರೆ. ಅವರ ಇತಿಹಾಸಜ್ಞಾನ, ನೀತಿದೃಷ್ಟಿ, ಸತ್ಯಪ್ರಿಯತೆಗಳಿಗೆ ಲೇಖನ ಮಹಾಮೇರುವಿನಂತಿದೆ. ಈಗಿನ ಮದರಾಸು ಪ್ರಾಂತ್ಯದಲ್ಲಿ ಕೇರಳ, ತಮಿಳು, ಕರ್ನಾಟಕ, ಆಂಧ್ರಗಳು ಸೇರಿವೆಯೆಂದು ಹೇಳಿಕೊಂಡು ಬಂದು ಶ್ರೀ ದಾಸರು ' ಮದರಾಸಿನ ೯ ಮಿಲಿಯ ಕನ್ನಡ ಮಾತಾಡುವ ಜನ, ಮೈಸೂರಿನ ಆಡಳಿತದಲ್ಲಿರುವುದರಿಂದ ಅವರು ಪುಣ್ಯ ಶಾಲಿಗಳು. ಅವರ ಏಕೀಕರಣ ಅವರ ಒಗ್ಗಟ್ಟಿಗೆ ಮೂಲವಾಗಿದೆ.' ಎಂದು ಹೇಳುತ್ತಾರೆ. ದಾಸರು ತಮ್ಮ ಲೇಖನದ ಜತೆ ಪ್ರಕಟಿಸಿರುವ ನಕ್ಷೆಯಲ್ಲಿ ಮೈಸೂರಷ್ಟೇ ಕರ್ನಾಟಕ. ಉಳಿದ ಭಾಗವೆಲ್ಲಾ ಆಂಧ್ರ ತಮಿಳುನಾಡು, ಕೇರಳಗಳಿಗೆ ಸೇರಿವೆ. ಕರ್ನಾಟಕದ ಒಂದೊಂದು ಭಾಗವನ್ನು ಸ್ವಾಹಾಮಾಡುವದಕ್ಕಿಂತಲೂ ಒಟ್ಟಿಗೇ ಕಬಳಿಸಿಬಿಡುವು ದೊಳ್ಳೆಯದೆಂದು ಶ್ರೀ ದಾಸರು ಭಾವಿಸಿದ ಹಾಗೆ ಕಾಣುತ್ತದೆ. ಅವರ ವಾದದ ರೀತಿಯಲ್ಲಿ ಕರ್ನಾಟಕದ ಜನಸಂಖ್ಯೆ .೯ ಮಿಲಿಯನ್, ಅಂದರೆ ೯೦ ಲಕ್ಷ ಮಾತ್ರ. ಕರ್ನಾಟಕದ ಜನಸಂಖ್ಯೆ ಹಾಗೂ ಭೂ ಪ್ರದೇಶ ಹೀಗಿದೆ :

**ಸಂಸ್ಥಾನಿ ಕರ್ಣಾಟಕ**

| | | | |
|---|---|---|---|
| ಭೂಪ್ರದೇಶ | ೪೫೯೪೬ ಮೈಲಿ | ಜನಸಂಖ್ಯೆ | ೧೧,೬೩,೯೪೮೧ |

**ಬ್ರಿಟಿಷ್ ಕರ್ಣಾಟಕ**

| | | | |
|---|---|---|---|
| ಭೂಪ್ರದೇಶ | ೩೨೫೭೧ ಮೈಲಿ | ಜನಸಂಖ್ಯೆ | ೭೦,೦೦,೦೦೦೦ |

**ಒಟ್ಟು**

| | | | |
|---|---|---|---|
| ಭೂಪ್ರದೇಶ | ೭೮೫೧೭ ಮೈಲಿ | ಜನಸಂಖ್ಯೆ | ೧೮,೬೩,೯೪೮೧ |

ಹಿಂದೂಸ್ಥಾನದಲ್ಲಿ ಸುಮಾರು ಎರಡು ಕೋಟಿ ಜನ ಕನ್ನಡ ಮಾತ ನಾಡುತ್ತಾರೆ. ೭೯ ಸಾವಿರ ಚದುರ ಮೈಲಿ ವಿಸ್ತೀರ್ಣ ಅವರಿಗೆ ಸೇರಿದೆ.

ಈ ಲೆಕ್ಕವನ್ನು ಕಳೆದ ಜನಗಣತಿ ಲೆಕ್ಕದಿಂದ ಸಿದ್ಧಗೊಳಿಸಲಾಗಿದೆ. ಆದರೆ ಕಳೆದ ಲೆಕ್ಕ ಕಳ್ಳ ಲೆಕ್ಕ. ಮದರಾಸು, ಮುಂಬಯಿ ಆಧಿಪತ್ಯದ ಕೆಳಗಿರುವ ಸ್ಥಾನಗಳ ಜನಗಣತಿಗೆ ಬಂದ ತಮಿಳರು, ತೆಲುಗರು,

ಮಲಯಾಳಿಗಳು ಹಾಗೂ ಮರಾಟಿಗರು ತಪ್ಪು ಲೆಕ್ಕ ಬರೆದುಕೊಂಡು, ಕನ್ನಡದ ಸಾವಿರಾರು ಪ್ರಜೆಗಳನ್ನು ತಮ್ಮ ಭಾಷೆಗೆ ಧಾರೆಯೆರೆದಿದ್ದಾರೆ.

ಪ್ರಾಂತ್ಯ ನಿಯೋಜನೆಯ ತತ್ಪೂರ್ವದಲ್ಲಿ ಹೊಸ ಜನಗಣತಿ ಲೆಕ್ಕ ತೆಗೆದುಕೊಳ್ಳಬೇಕಾಗುತ್ತದೆ. ಗಡಿ ನಿರ್ಧಾರ ಸಮಿತಿ (Boundary Commission) ಯವರು ಹೊಸ ಜನಗಣತಿ ಲೆಕ್ಕದ ಪ್ರಮಾಣದ ಮೇಲೆ ಪ್ರಾಂತ್ಯದ ಎಲ್ಲೆಗಳನ್ನು ನಿರ್ಧರಿಸಬೇಕಾಗುತ್ತದೆ. ಗಡಿ ನಿರ್ಧಾರದ ಸಮಿತಿಯಲ್ಲಿ ಡಾ. ಪಟ್ಟಾಭಿಯವರು, ಶಂಕರರಾವ್‌ದೇವ್ ಅವರು ತಮ್ಮ ಸ್ಥಾನಗಳನ್ನು ಈಗಿನಿಂದಲೇ ಭದ್ರಪಡಿಸಿಕೊಂಡಿದ್ದಾರೆ. ಕರ್ನಾಟಕದ ಪರವಾಗಿ ಅಲ್ಲಿ ಯಾರಿರಬೇಕೆಂದು ಇನ್ನೂ ನಿರ್ಧರವಾಗಿಲ್ಲ.

ಕರ್ನಾಟಕದ ಕೆಲವು ಭಾಗಗಳನ್ನು ನುಂಗಬೇಕೆಂದು ಪಟ್ಟಾಭಿ, ಸಿ. ಆರ್. ರೆಡ್ಡಿ, ಹರಿಸರ್ವೋತ್ತಮರಾವ್ ಮೊದಲಾದ ಆಂಧ್ರ ಮುಖಂಡರು ಮೊದಲಿನಿಂದಲೂ ಹೊಂಚು ಕಾಯುತ್ತಿದ್ದಾರೆ. ಬಳ್ಳಾರಿ ಯಂಥ ಕನ್ನಡನಾಡಿನ ಹೃದಯದಲ್ಲಿ ಆಂಧ್ರ ಮಹಾಸಭೆಯನ್ನು ಕರೆದು, ವಿಜಯನಗರದಲ್ಲಿ ಆಂಧ್ರ ಮಹೋತ್ಸವವನ್ನು ನೆರೆಯಿಸಿ ಆಂಧ್ರರು ಇಲ್ಲಸಲ್ಲದ ಜಗಳವನ್ನು ಹುಟ್ಟಿಸುತ್ತಿದ್ದಾರೆ. ಆಂಧ್ರರ ಪ್ರಯತ್ನಕ್ಕೆ ಕನ್ನಡಿಗರ ಆಲಸ್ಯವೂ, ಕೆಲವು ಕನ್ನಡ ಮನೆಮುರುಕರ ಪ್ರೋತ್ಸಾಹವೂ ಬೆಂಬಲವಾಗಿವೆ.

ರಾಷ್ಟ್ರ, ದೇಶ ಮೊದಲಾದ ದೊಡ್ಡ ದೊಡ್ಡ ಮಾತುಗಳನ್ನು ಹೇಳಿ ಕೊಂಡು, ಕರ್ನಾಟಕದ ಆತ್ಮಗೌರವವನ್ನು ತುಳಿಯಲೆತ್ನಿಸುತ್ತಿರುವ ಆಂಧ್ರ ನಾಯಕರ ದುರಾಕ್ರಮಣ ನೀತಿಯನ್ನು ಕನ್ನಡಿಗರು ಪ್ರತಿಭಟಿಸ ಬೇಕು. ಬಳ್ಳಾರಿಯವರು ತೋರಿದ ಒಗ್ಗಟ್ಟು, ಕಾರ್ಯದಕ್ಷತೆ ಎಲ್ಲ ಕಡೆ ಪ್ರಕಟವಾಗಬೇಕು. ತಮ್ಮ ನಾಡಿನ ಒಂದಂಗುಲ ಭೂಮಿಯನ್ನು ಒಬ್ಬ ಪ್ರಜೆಯನ್ನು ಕನ್ನಡಿಗರು ಬೇರೆಯವರಿಗೆ ಬಿಟ್ಟುಕೊಡಬಾರದು.

ಆಂಧ್ರ ಬಂಧುಗಳಿಗೊಂದು ಮಾತು. ಆಂಧ್ರದ ಯಾವ ಭಾಗವನ್ನೂ ಕರ್ನಾಟಕಕ್ಕೆ ಸೇರಿಸಿಕೊಂಡು, ಪರರ ಮೇಲೆ ಧಾಳಿ ಮಾಡ ಬೇಕೆಂದು ಕನ್ನಡಿಗರು ಇಚ್ಛಿಸುವುದಿಲ್ಲ. ನಿಮ್ಮದು ನಿಮಗಿರಲಿ, ನಮ್ಮದು ನಮಗಿರಲಿ. ನಮ್ಮದಕ್ಕೆ ಕೈ ಹಾಕಬೇಡಿ. ಬಳ್ಳಾರಿಯ ಅನುಭವವನ್ನು

ನೆನಪಿನಲ್ಲಿಟ್ಟುಕೊಂಡು ದುರಾಕ್ರಮಣ ನೀತಿಯನ್ನು ಬಿಟ್ಟುಬಿಡಿ. ಕರ್ನಾಟಕಾಂಧ್ರ ಒಮ್ಮತಿಸಮ್ಮತಿಯಿಂದ ಸೋದರ ಪ್ರಾಂತ್ಯಗಳಂತೆ ಬೆಳೆಯಲಿ. ಉಭಯ ಸ್ನೇಹ, ಸಹಕಾರಗಳಿಂದ ರಾಷ್ಟ್ರಕ್ಕೆ ಹಿತ ವಾಗುತ್ತದೆ.

ಕನ್ನಡಿಗರು ಎಚ್ಚರಗೊಳ್ಳುವುದೆಂದಿಗೆ? ಶತಮಾನಗಳ ದಾಸ್ಯದಿಂದ ತೊಳಲಿದ್ದೇವೆ. ಹೊರಗಿನಿಂದ ಬಂದು ನಮ್ಮನ್ನು ತುಳಿದವರನ್ನೆಲ್ಲಾ ಪೂಜಿಸಿ ಪಾಪಿಗಳಾಗಿದ್ದೇವೆ. ಇದು ಕ್ಲೈಬ್ಯವನ್ನು ದೂರಮಾಡಬೇಕಾದ ಕಾಲ. ನಮ್ಮ ಆಲಸ್ಯವೇ ನಮ್ಮ ಮೃತ್ಯುವಾಗಿದೆ. ಕನ್ನಡಿಗರು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಉಗ್ರ ಚಳುವಳಿಯನ್ನು ಕೈಗೊಳ್ಳ ಬೇಕು.

ಸಾಹಿತ್ಯ, ಸಂಗೀತ, ರಾಜಕಾರಣ, ಸಮಾಜ ಯಾವ ಹೆಸರಿನಲ್ಲಿ ಪರಾಕ್ರಮಣ ಕಂಡು ಬಂದರೂ ಕನ್ನಡಿಗರು ಎದುರಿಸಬೇಕು. ಕನ್ನಡ ನಾಡು ಸ್ವತಂತ್ರವಾಗಿ ಅನಾಗರಿಕವಾಗಿದ್ದರೂ ಚಿಂತೆಯಿಲ್ಲ. ಪರರೆಂಜಲಿನ ಕೃಪೆಯಿಂದ ನಾಗರಿಕರೆನಿಸಿಕೊಳ್ಳುವುದು ಬೇಡ.

# ೪. ಕನ್ನಡನಾಡಿನ ಮೇಲೆ ಆಂಧ್ರರ ಧಾಳಿ

## ೨

ಕಳೆದ ಅಧ್ಯಾಯದಲ್ಲಿ ಆಂಧ್ರರ ಮೇರೆಯನ್ನು ಕರ್ನಾಟಕದ ಒಳಗೆ ಒತ್ತುತ್ತಾ ಕ್ರಮಕ್ರಮೇಣ ಗಡಿಯಲ್ಲಿರುವ ಕರ್ನಾಟಕದ ಭಾಗಗಳನ್ನು ಆಂಧ್ರಕ್ಕೆ ಸೇರಿಸಿಕೊಳ್ಳಲು ಹವಣಿಸುತ್ತಿರುವ ಆಂಧ್ರರ ದುಷ್ಟ ಮನೋಗತವನ್ನು ಕುರಿತು ಬರೆದಿದ್ದೆ. ಆಂಧ್ರರ ರಾಜಕಾರಣಿಗಳು ಮಾತ್ರವೇ ಅಲ್ಲ, ಅದರ ಸಾಹಿತಿಗಳು, ಕಲಾವಿದರು, ವಿದ್ವಜ್ಜನರು ಕೂಡ ಇಂಥ ಗಾಬೆಲ್ಸ್ ಪ್ರಚಾರದಲ್ಲಿ ಉದ್ಯುಕ್ತರಾಗಿದ್ದಾರೆ ಎಂದು ತಿಳಿಸಿದೆ.

ಪ್ರಸಿದ್ಧ ವಿದ್ವಾಂಸರೂ, ಆಂಧ್ರ ವಿಶ್ವ ವಿದ್ಯಾನಿಲಯದ ಪ್ರೊಫೆಸರರೂ ಆದ ಪ್ರೊ. ಪಿ. ಟಿ. ರಾಜು ಅವರು ಮುಂಬಯಿಯ "ಪಿ. ಇ. ಎನ್." ಸಂಸ್ಥೆಯ ಪ್ರಕಟನೆಗಳಿಗೆ "ತೆಲಗು ಸಾಹಿತ್ಯ—ಆಂಧ್ರ ಸಾಹಿತ್ಯ"ದ ಮೇಲೆ ಒಂದು ಗ್ರಂಥ ಬರೆದುಕೊಟ್ಟಿದ್ದಾರೆ. ಅದಕ್ಕೆ ಆಂಧ್ರ ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾದ ಡಾ॥ ಸರ್ ಪಿ. ರಾಮಲಿಂಗರೆಡ್ಡಿ ಅವರು ಒಂದು ಮುನ್ನುಡಿ ಬರೆದಿದ್ದಾರೆ. ರಾಜು ಅವರ ಗ್ರಂಥಾವಲೋಕನ ಮಾಡುವುದಕ್ಕೆ ಮುಂಚೆ ಡಾ॥ ರೆಡ್ಡಿಯವರ ಮುನ್ನುಡಿಯನ್ನು ಕರ್ನಾಟಕ ಆಂಧ್ರ ದೃಷ್ಟಿಯಿಂದ ಅವಲೋಕಿಸಬೇಕಾಗಿದೆ.

ಪಿ. ಇ. ಎನ್. ಲಂಡನ್ನಿನಲ್ಲಿ ೧೯೨೧ರಲ್ಲಿ ಸ್ಥಾಪಿತವಾದ ಅಂತರ ರಾಷ್ಟ್ರೀಯ ಸಂಸ್ಥೆ. ಅದರ ಅಧ್ಯಕ್ಷಸ್ಥಾನದಲ್ಲಿ ಎಚ್. ಜಿ. ವೆಲ್ಸ್, ಜೂಲಿಸ್ ರೊಮೇನ್ಸ್, ಜಾನ್ ಗಾಲ್ಸ್‌ವರ್ದಿ ಮೊದಲಾದ ಜಗದ್ವಿಖ್ಯಾತ ಸಾಹಿತಿಗಳಿದ್ದರು. ಮುಂಬಯಿಯ ವಿದುಷಿ ಮ್ಯಾದಂ ಸೋಫಿಯಾ ವಾಡಿಯಾ ಅವರ ಪ್ರಯತ್ನದಿಂದ ಹಿಂದೂಸ್ಥಾನದಲ್ಲಿ ಪಿ. ಇ. ಎನ್. ಸಂಸ್ಥೆಯ ಭಾರತೀಯ ಶಾಖೆ ೧೯೩೩ರಲ್ಲಿ ಸ್ಥಾಪಿಸಲ್ಪಟ್ಟಿತು. ಕವಿಗುರು ರವೀಂದ್ರನಾಥ ಠಾಕೂರರೇ ಅದರ ಮೊದಲನೆಯ ಅಧ್ಯಕ್ಷರು. ಅವರ ತರುವಾಯ ಶ್ರೀಮತಿ ಸರೋಜನಿದೇವಿಯವರು ಅಧ್ಯಕ್ಷಸ್ಥಾನಕ್ಕೆ ಆಯಲ್ಪಟ್ಟರು. ಪಂಡಿತ ಜವಹರಲಾಲ ನೆಹ್ರೂ, ಸರ್ ಎಸ್. ರಾಧಾಕೃಷ್ಣನ್ ಅದರ ಉಪಾಧ್ಯಕ್ಷರಾಗಿದ್ದಾರೆ. ಪಿ. ಇ. ಎನ್. ಸಂಸ್ಥೆ ಆಕೃತಿಯಲ್ಲಿ ಕಿರಿದಾದ

ಗುಣದಲ್ಲಿ ಹಿರಿದಾದ ಒಂದು ಮಾಸಪತ್ರಿಕೆಯನ್ನು ನಡೆಸುತ್ತಿದೆ. ಕಾಲ ಕಾಲಕ್ಕೆ ಭಾರತೀಯ ಸಾಹಿತ್ಯಗಳ ಮೇಲೆ ಗ್ರಂಥಗಳನ್ನು ಪ್ರಕಟಿಸುತ್ತಿದೆ. ಈಗಾಗಲೇ ಅದು ಅಸಾಮಿ, ಬಂಗಾಳಿ, ಭಾರತಾಂಗ್ಲ ಸಾಹಿತ್ಯಗಳ ಮೇಲೆ ಗ್ರಂಥಗಳನ್ನು ಪ್ರಕಟಿಸಿದೆ. ಪ್ರೊ. ಪಿ. ಟಿ. ರಾಜು ಅವರ 'ತೆಲುಗು ಸಾಹಿತ್ಯ' ಆ ಮಾಲೆಯಲ್ಲಿ ಒಂದು. ದಿವಂಗತ ಪ್ರೊ. ಬಿ. ಎಂ. ಶ್ರೀಕಂಠಯ್ಯ ನವರು 'ಕನ್ನಡ ಸಾಹಿತ್ಯ'ದ ಮೇಲೆ ಬರೆಯಲು ಒಪ್ಪಿಕೊಂಡಿದ್ದರು.

ಪಿ. ಇ. ಎನ್. ಸಂಸ್ಥೆಯ ಮುಖ್ಯೋದ್ದೇಶ ಭಾರತ ವಿವಿಧ ಪ್ರಾಂತ್ಯ ಸಾಹಿತಿಗಳಲ್ಲಿ ಹೆಚ್ಚಿನ ಬಾಂಧವ್ಯವನ್ನು ಬೆಳೆಸುವುದು ; ವಿವಿಧ ಪ್ರಾಂತ್ಯ ಗಳಲ್ಲಾಗುತ್ತಿರುವ ಸಾಹಿತ್ಯ ಚಟುವಟಿಕೆಗಳನ್ನು ವಿಶಾಲ ಭಾರತಕ್ಕೆ, ವಿಶಾಲ ಜಗತ್ತಿಗೆ ಪರಿಚಯಮಾಡಿಕೊಡುವುದು. ಪಿ. ಇ. ಎನ್. ಗ್ರಂಥ ಮಾಲೆಯ ಉದ್ದೇಶವೂ ಇದೇ. ತಮ್ಮ ಸಂಪಾದಕೀಯ ಮುನ್ನುಡಿಯಲ್ಲಿ ವ್ಯಾದಾಂ ವಾಡಿಯಾ ಅವರು ಅದನ್ನು ಹೀಗೆ ವಿವರಿಸುತ್ತಾರೆ.

" ಭಾರತದ ಶತ್ರುಗಳು ಎಷ್ಟೇ ಬಾಯಿಂದ ಕೂಗಿದರೂ, ಭಾರತದ ರಾಜಕೀಯ ಹಾಗೂ ಇತರ ಸುಧಾರಕರು ಒಂದೇ ಭಾಷೆ ಬೇಕೆಂದು ಎಷ್ಟು ಬಯಸಿದರೂ ಭಾರತದಲ್ಲಿರುವ ಹಲವು ಭಾಷೆಗಳು ಅದರ ಶಾಪವಾಗಿ ಪರಿಣಮಿಸಿಲ್ಲ. ಭಾವಗಳು ಜನಗಳನ್ನೊಂದುಗೂಡಿಸಿ ಜಗತ್ತನ್ನಾಳುತ್ತವೆ, ಶಬ್ದಗಳಲ್ಲ. ಯೂರೋಪ್ ನರಳುತ್ತಿರುವುದು ಅದರಲ್ಲಿ ಹಲವು ಭಾಷೆಗಳ ವ್ಯಾಪ್ತಿಯಿದೆಯೆಂದಲ್ಲ; ಪರಸ್ಪರ ವಿರುದ್ಧ ಭಾವಗಳೂ, ಸ್ಪರ್ಧೆಗೆ ನಿಂತ ವಿಚಾರ ತರಂಗವೂ ಅದರ ಶಾಂತಿಯನ್ನು ಕಲಕಿ ವಿಪ್ಲವವನ್ನೇಳಿಸಿವೆ. ನಮ್ಮ ವಿವಿಧ ಭಾಷೆಗಳು ಸಾಂಸ್ಕೃತಿಕ ಸಂಪತ್ತಿನ ಹಲವು ಕಾಲುವೆಗಳಾಗಿವೆ. ಅನೇಕ ಸುಶಿಕ್ಷಿತ ಭಾರತೀಯರಿಗೆ ತಮ್ಮ ಭಾಷೆಯನ್ನು ಬಿಟ್ಟು ಉಳಿದ ಭಾರತೀಯ ಭಾಷೆಗಳಲ್ಲಿನ ಸಾಹಿತ್ಯ ಸಂಪತ್ತಿನರಿವಿಲ್ಲ. ಎಷ್ಟು ಜನ ಬಂಗಾಳಿಗಳಿಗೆ ಮಲಯಾಳಿ ಸಾಹಿತ್ಯಸೌಂದರ್ಯದ ಪರಿಚಯವಿದೆ ? ಎಷ್ಟು ಜನ ತಮಿಳರಿಗೆ ಪ್ರಾಚೀನ, ಅರ್ವಾಚೀನ ಅಸಾಮಿನ ಸಾಹಿತ್ಯದ ಸವಿ ಗೊತ್ತಿದೆ ? ಹೀಗೇ ವಿಲಾಯಿತಿಯಲ್ಲಂತೂ ಭಾರತದ ವಿವಿಧ ಭಾಷೆಗಳ ಮಹೋನ್ನತಿ ಬಗ್ಗೆ ಪೂರ್ಣ ಅಜ್ಞಾನ ಕವಿದಿದೆ. ಭಾರತೀಯ ಸಾಹಿತ್ಯ ಕಥೆಯನ್ನುಸುರುವ ಯಾವ ಕ್ರಮಬದ್ಧವಾದ ಯತ್ನವೂ ನಡೆದಿಲ್ಲ.

ಇಂಗ್ಲಿಷ್ ಅನುವಾದದ ಮುಖಾಂತರ ವಿವಿಧ ಸಾಹಿತ್ಯಗಳ ರತ್ನಗಳನ್ನು ಜನತೆಗೆ ನೀಡುವ ಪ್ರಯತ್ನವೂ ನಡೆದಿಲ್ಲ. ಇಂಥ ಪ್ರಯತ್ನ ನಡೆಸುವುದೇ ಪಿ. ಇ. ಎನ್. ಸಂಸ್ಥೆಯ ಭಾರತೀಯ ಶಾಖೆಯ ಗುರಿ."

ಪಿ. ಇ. ಎನ್. ಸಂಸ್ಥೆಯ ಹಾಗೂ ಮ್ಯಾದಾಂ ವಾಡಿಯಾ ಅವರ ಗುರಿ ಎಷ್ಟು ಪವಿತ್ರವಾದುದೆಂದು ಹೇಳಬೇಕಾಗಿಲ್ಲ. ಅವರ ಗುರಿಯ ಪಾವಿತ್ರ್ಯತೆಯನ್ನು ಅರ್ಥಮಾಡಿಕೊಂಡು, ಪರಸಾಹಿತ್ಯ ಪ್ರಾಂತ್ಯಗಳ ಅವಹೇಳನಕ್ಕೆ ಕೈಹಾಕದೆ, ತಮ್ಮ ಸಾಹಿತ್ಯದ ಸವಿಯನ್ನು ಎತ್ತಿ ತೋರುವುದೇ ಪಿ. ಇ. ಎನ್. ಗ್ರಂಥಕರ್ತರ ಉದ್ದೇಶವಾಗಿರಬೇಕು.

'ತೆಲಗು ಸಾಹಿತ್ಯ'ದ ಮೇಲೆ ಬರೆದಿರುವ ಪ್ರೊ. ರಾಜು ಅವರನ್ನುಳಿದು ಇತರರು ಈ ಧರ್ಮವನ್ನು ಪಾಲಿಸಿಕೊಂಡು ಹೋಗಿದ್ದಾರೆ. ತಮ್ಮ ಪಾಂಡಿತ್ಯ, ಸಂಯಮ, ವಿಮರ್ಶಾಗುಣಗಳಿಂದ ಓದುಗರ ಲಕ್ಷ್ಯ, ಆಸಕ್ತಿ, ಅಭಿಮಾನಗಳನ್ನು ತಮ್ಮ ಸಾಹಿತ್ಯಕ್ಕೆ ದೊರಕಿಸಿದ್ದಾರೆ.

ಪ್ರೊ. ರಾಜು ಅವರ ಗ್ರಂಥಕ್ಕೆ ಮುನ್ನುಡಿ ಬರೆದಿರುವ ಡಾ. ರೆಡ್ಡಿಯವರು ಉದ್ದಾಮ ವಿದ್ವಾಂಸರು. ಇಂಗ್ಲಿಷ್, ತೆಲುಗು ಭಾಷೆಗಳಲ್ಲಿ ರೆಡ್ಡಿಯವರಿಗೆ ತುಂಬ ಪ್ರಾವೀಣ್ಯತೆಯಿದೆ. ಆಧುನಿಕ ತೆಲುಗು ಸಾಹಿತ್ಯದ ಗದ್ಯಶೈಲಿಯ ಮಾರ್ಗದರ್ಶಕರಿವರು. ಬಹಳ ಕಾಲ ಮೈಸೂರಿನಲ್ಲಿ ಶಿಕ್ಷಣ ಖಾತೆಯ ಅಧಿಕಾರಿಗಳಾಗಿದ್ದುದರಿಂದ ರೆಡ್ಡಿಯವರಿಗೆ ಕನ್ನಡ ಭಾಷೆ, ಸಾಹಿತ್ಯಗಳ ಪರಿಚಯವೂ ಸಾಕಷ್ಟಿದೆ. ೧೯೨೨ರಲ್ಲಿ ಮೊಟ್ಟಮೊದಲಿಗೆ ಪ್ರಕಟವಾದ ಟಿ. ಪಿ. ಕೈಲಾಸಂ ಅವರ "ಟೊಳ್ಳು ಗಟ್ಟಿ" ನಾಟಕಕ್ಕೆ ರೆಡ್ಡಿಯವರು ಬರೆದಿರುವ ಮುನ್ನುಡಿಯೇ ಅವರ ಪಾಂಡಿತ್ಯ, ವಿಮರ್ಶನ ಜ್ಞಾನಗಳ ಸಾಕ್ಷಿಯಾಗಿದೆ.

ಇಂಥ ಪಂಡಿತರು ಯಾವ ಅಭಿಮಾನ, ಮೊಬ್ಬಿಗೂ ಬಿದ್ದು ತಮ್ಮ ಯುಕ್ತಾಯುಕ್ತ ಪರಿಜ್ಞಾನವನ್ನು, ಸತ್ಯಪ್ರಿಯತೆಯನ್ನು ಭ್ರಷ್ಟಗೊಳಿಸಿಕೊಳ್ಳಬಾರದೆಂದು ಜನ ನಿರೀಕ್ಷಿಸುತ್ತದೆ. ಆದುದರಿಂದ, ರೆಡ್ಡಿಯವರು ತಮ್ಮ ಪ್ರಖರ ಪಾಂಡಿತ್ಯವನ್ನು ಮುಚ್ಚಿಟ್ಟು 'ಆಂಧ್ರ ಪ್ರಾಂತ್ಯ ಪ್ರಾಸಾರ'ಕ್ಕೆ ಹೊರಟಿದ್ದಾರೆ. ಪ್ರಚಾರಕನ ಸ್ವಭಾವಕ್ಕನುಗುಣವಾಗಿ ಸತ್ಯ ದೂರವಾದ, ತರ್ಕವಿರುದ್ಧವಾದ, ಇತಿಹಾಸ ಹೌದೆನ್ನದ ವಿಷಯಗಳನ್ನು ನಿರ್ಭೀತಿಯಿಂದ

ನಿರ್ಲಜ್ಜೆಯಿಂದ ಮಂಡಿಸುತ್ತಿದ್ದಾರೆ. ಅನಂತಪುರದ ಕಾಲೇಜನ್ನು ಮದರಾಸು ವಿಶ್ವವಿದ್ಯಾನಿಲಯದ ಸ್ವಾಮ್ಯದಿಂದ ಬಿಡಿಸಿ ಆಂಧ್ರ ವಿಶ್ವವಿದ್ಯಾನಿಲಯಕ್ಕೆ ಸೇರಿಸಿಕೊಳ್ಳಬೇಕೆಂದು ಸರ್ವಸಾಹಸ ಮಾಡುತ್ತಿದ್ದಾರೆ. ಆಂಧ್ರ ಪ್ರೇಮ ಕರ್ನಾಟಕ ದ್ವೇಷವಾಗಿ ಪರಿಣಮಿಸಬೇಕಾದ ಅಗತ್ಯವಿಲ್ಲವೆನ್ನುವ ಸತ್ಯವನ್ನು ಡಾ. ರೆಡ್ಡಿಯವರು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ.

ರಾಜು ಅವರ ಪುಸ್ತಕಕ್ಕೆ ಡಾ. ರೆಡ್ಡಿಯವರು ಬರೆದಿರುವ ಮುನ್ನುಡಿಯಲ್ಲಿನ ಕೆಲವು ರತ್ನಗಳಿವು :

೧) "....ಆಂಧ್ರರ ಕಾಣಿಕೆ ತೆಲುಗು ಸಾಹಿತ್ಯಕ್ಕಿಂತ ದೊಡ್ಡದು. ಅದು ಸಂಸ್ಕೃತ, ಪಾಲಿ ಭಾಷೆಗಳಲ್ಲಿ ದುಡಿದ ಆಂಧ್ರರನ್ನೂ, ನಾಗಾರ್ಜುನ, ಕುಮಾರಿಲಭಟ್ಟ, **ಬಸವ** ಮೊದಲಾದ ಧರ್ಮಗುರುಗಳನ್ನೂ ಆವಿರ್ಭವಿಸಿದೆ.

ಬಸವ ಆಂಧ್ರದವನೆಂಬ ಶೋಧವನ್ನು ರೆಡ್ಡಿಯವರು ಎಲ್ಲಿಂದ ಹುಡುಕಿ ತೆಗೆದರೆಂಬುದು ತಿಳಿಯಬಂದಿಲ್ಲ. ಬಸವ (ಬಸವಣ್ಣ) ಆರಾಧ್ಯ ಬ್ರಾಹ್ಮಣ ಕುಲಕ್ಕೆ ಸೇರಿದವನೆಂದು ಪ್ರತೀತಿ. ಆರಾಧ್ಯ ಬ್ರಾಹ್ಮಣರು ಆಂಧ್ರದಲ್ಲಿಯೂ ಇದ್ದಾರೆ. ಇಷ್ಟೇ ಆಧಾರದಿಂದ ರೆಡ್ಡಿಯವರಂಥವರು ಕೂಡ ಬಸವಣ್ಣನನ್ನು ಆಂಧ್ರದವನೆಂದು ಕರೆಯಲು ಹಿಂದೆ ಮುಂದೆ ನೋಡುತ್ತಿಲ್ಲ.

೨) "ಪ್ರಸಿದ್ಧ ಪ್ರಾಕ್ತನ ವಿಮರ್ಶನಾಚಾರ್ಯರು ಜಗತ್ಪ್ರಸಿದ್ಧವಾದ ಅಜಂತೆಯ ಗುಹೆಗಳ ಚಿತ್ರಕಲೆ ಆಂಧ್ರರ ಕಲಾಪ್ರತಿಭೆಯ ಸೃಷ್ಟಿ ಎಂದು ಒಪ್ಪಿಕೊಂಡಿದ್ದಾರೆ."

ಅಜಂತೆ ಆಂಧ್ರರ ಕಲಾಪ್ರತಿಭೆಯ ಫಲವೆಂದು ಯಾವ ಪ್ರಾಕ್ತನ ವಿಮರ್ಶನಾಚಾರ್ಯ ಹೇಳಿದ್ದಾನೋ ರೆಡ್ಡಿಯವರೇ ಬಲ್ಲರು. ಇತಿಹಾಸ ಒಪ್ಪಿರುವಂತೆ.

"....ಇದನ್ನು (ಎಲ್ಲೋರ) ಕಟ್ಟಿಸಿದವನು ಕನ್ನಡ ದೇಶಕ್ಕೆ ಕೀರ್ತಿಯನ್ನು ತಂದ ರಾಷ್ಟ್ರಕೂಟವಂಶಕ್ಕೆ ಸೇರಿದ ಮೊದಲನೆಯ ಕೃಷ್ಣನೆಂದು ಇನ್ನೊಂದು ಗವಿಯಲ್ಲಿರುವ ಶಾಸನದಿಂದ ತಿಳಿಯುಬರುತ್ತದೆ."

—ಡಾ. ಎಂ. ಎಚ್. ಕೃಷ್ಣ, "ಅಜಂತ ಮತ್ತು ಎಲ್ಲೋರ" (ಪುಟ ೪೭.)

"ಚಾಳುಕ್ಯರ ಕಾಲದಲ್ಲಿ ವಾಸ್ತು, ಶಿಲ್ಪ, ಚಿತ್ರಕಲೇತ್ಯಾದಿ ಲಲಿತ ಕಲೆಗಳಿಗೆ ಪೂರ್ಣ ಪ್ರೋತ್ಸಾಹವಿತ್ತು. ಲೋಕ ವಿಖ್ಯಾತವಾದ ಅಜಂತದ ಕೆಲಸವು ಇಮ್ಮಡಿ ಪುಲಕೇಶಿಯ ಕಾಲದಲ್ಲೇ ಪೂರೈಸಲ್ಪಟ್ಟಿತು."

—ಕರ್ನಾಟಕದ ಕೈಪಿಡಿ (ಪುಟ ೫೧)

"ಜಗದ್ವಿಖ್ಯಾತವಾದ ಅಜಂತದ ಚಿತ್ರಕಲೆಯ ಮೇಲೆ ಕರ್ನಾಟಕಕ್ಕೆ ಹಕ್ಕುಂಟು. ಅಲ್ಲಿನ ಅನೇಕ ಚಿತ್ರಕೆಲಸಗಳು ಬಾದಾಮಿಯ ಚಾಳುಕ್ಯರ ಕಾಲದಲ್ಲಿ ಮುಗಿದುವು. (ಕ್ರಿ. ಶ. ೭ನೆಯ ಶತಮಾನ.) ಒಂದು ಚಿತ್ರದಲ್ಲಿ ಇಮ್ಮಡಿ ಪುಲಕೇಶಿಯ ರೂಪವೂ ಕೂಡ ಕಾಣಬರುತ್ತದೆ. ಅಲ್ಲದೆ ಅಜಂತದ ಬಳಿಯಿರುವ ಇಂದುಕಾಂತವು ಮೊದಲನೆಯ ಪುಲಕೇಶಿಯ ರಾಜಧಾನಿಯಾಗಿತ್ತು."

—ಕರ್ನಾಟಕದ ಕೈಪಿಡಿ (ಪುಟ ೧೯೭.)

೩) "ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಆಂಧ್ರರು ಬಹಳ ಮುಖ್ಯಪಾತ್ರ ವಹಿಸಿದ್ದಾರೆ."

ಎಲ್ಲಿ—ಯಾವಾಗ—ಎಂತು ಎಂದು ಡಾ. ರೆಡ್ಡಿಯವರು ವಿವರಿಸಿಲ್ಲ. ಸೂತ್ರದಂತೆ ಇಂಥ ಅಸತ್ಯದ ಮಾತನ್ನು ಚೆಲ್ಲಿ ಮುಂದೆ ಹೋಗಿದ್ದಾರೆ. ವಿಜಯನಗರದರಸರು ತೆಲುಗು ಸಾಹಿತ್ಯಕ್ಕೆ ಪ್ರೋತ್ಸಾಹಕೊಟ್ಟರು. ಅವರ ಕೃಪಾಶ್ರಯದಿಂದ ಅನೇಕ ಪ್ರಸಿದ್ಧ ತೆಲುಗು ಕವಿಗಳು ಕರ್ನಾಟಕದಲ್ಲಿ ಬಂದು ನೆಲಸಿದರು. ಅವರ ಮೇಲೆ ಯಥಾರ್ಥವಾಗಿ ಕನ್ನಡ ಸಂಸ್ಕೃತಿ ತನ್ನ ಪ್ರಭಾವಮುದ್ರೆಯನ್ನೊತ್ತಿದೆ. ಆದರೆ ರೆಡ್ಡಿಯವರು ಹೇಳುವಂತೆ ಕನ್ನಡ ಸಾಹಿತ್ಯ ತೆಲುಗಿನಿಂದ ಸ್ಫೂರ್ತಿ ತೆಗೆದುಕೊಂಡ ಅಂಶಕ್ಕೆ ಆಧಾರವಿಲ್ಲ.

ಸ್ವಯಂ ತಾವೇ ಇಂಥ ಆಭಾಸಗಳನ್ನು ಮಾಡಿರುವುದಲ್ಲದೆ, ಆಭಾಸ ಕಂತೆಯಾಗಿರುವ ಪ್ರೊ. ರಾಜು ಅವರ ಪುಸ್ತಕವನ್ನು ಪ್ರಮಾಣ ಗ್ರಂಥವೆಂದು ರೆಡ್ಡಿಯವರು ಹೇಳಿದ್ದಾರೆ. ಹೇಗಾದರೂ—ಎಂತಾದರೂ ಪಕ್ಷಸಮರ್ಥನೆ ಮಾಡಬೇಕೆಂದು ಹೋಗುವ ಜಾಣಾಕ್ಷರು ಹೇಗೆ ಮುಗ್ಗರಿಸುತ್ತಾರೆಂಬುದಕ್ಕೆ ಡಾ. ರೆಡ್ಡಿಯವರ ನಿದರ್ಶನವೇ ಸಾಕು.

# ೫. ಕನ್ನಡದ ಮೇಲೆ ಆಂಧ್ರರ ಧಾಳಿ

## ೩

ಪ್ರೊ. ಪಿ. ಟಿ. ರಾಜು ಅವರು ತೆಲುಗು ಸಾಹಿತ್ಯದ ಮೇಲೆ ಬರೆದಿರುವ ಗ್ರಂಥದಲ್ಲಿ ತೆಲುಗು ಸಾಹಿತ್ಯದ ಬಗ್ಗೆ ಬೇಕಾದ್ದು ಹೇಳಿಕೊಳ್ಳಬಹುದು. ಜಗತ್ತಿನಲ್ಲಿ ಅದಕ್ಕೆ ಮಿಗಿಲಾದ ಸಾಹಿತ್ಯವೇ ಇಲ್ಲ ಎಂದು ಬೇಕಾದರೆ ಡಂಗುರ ಸಾರಬಹುದು. ದುರಭಿಮಾನಿಗಳಾದ ಆಂಧ್ರರು ಅದನ್ನು ಕಂಡು ಹಿರಿ ಹಿರಿ ಹಿಗ್ಗಬಹುದು. ಅವರ ದೊಂಬರಾಟಕ್ಕೆ ನಮ್ಮ ಅಭ್ಯಂತರ ವೇನೂ ಇಲ್ಲ. ಆದರೆ ತಮಗೆ ತಿಳಿಯದ ಕನ್ನಡ ಸಾಹಿತ್ಯದ ಬಗ್ಗೆ ಅಪದ್ಧ ವಿಷಯಗಳನ್ನು ಮಂಡಿಸಿರುವುದು ಅಪರಾಧ. ಇದರಿಂದ ಕನ್ನಡಕ್ಕೂ— ಕನ್ನಡನಾಡಿಗೂ ಅವರು ಅಪಮಾನವೆಸಗಿರುವುದು ಮಾತ್ರವೇ ಅಲ್ಲ ; ಇಡಿಯ ವಿದ್ವತ್‌ಲೋಕಕ್ಕೇ ಅಪಮಾನವಮಾಡಿದ್ದಾರೆ. ಭಾರತ ಸಂಸ್ಕೃತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಮನಸ್ಸು ಬಂದಂತೆ ಬರೆದರೆಂದಲ್ಲವೇ ನಾವು ರುಡ್ಯಾರ್ಡ್ ಕಿಪ್ಲಿಂಗ್, ಮಿಸ್ ಮೇಯೋ, ಆಬೆ ಡೂಬ್ವಾ, ಬೆವರ್ಲಿ ನಿಕ್ಲಾಸ್ ಮೊದಲಾದ ಲೇಖಕರನ್ನು ಖಂಡಿಸುವುದು. ಅವರ ಮೇಲ್ಪಂಕ್ತಿಯನ್ನೇ ಅನುಸರಿಸಿ ಭಾರತ ಸಂಸ್ಕೃತಿಯ ಹೃದಯ ದಂತಿರುವ ಕನ್ನಡ ಸಂಸ್ಕೃತಿಯನ್ನು ಹಳಿದಿರುವ ಪ್ರೊ. ಪಿ. ಟಿ. ರಾಜು ತಮ್ಮ 'ಆಂಧ್ರತನ'ದ ಒಳಬಣ್ಣವನ್ನು ಹೊರಗೆಡವಿದ್ದಾರೆ.

ಅವರ ಗ್ರಂಥರತ್ನವನ್ನೇ ಪರಾಮರ್ಶಿಸೋಣ :

೧. "ಬಹಳ ಹಿಂದಿನಿಂದಲೂ ಆಂಧ್ರದೊರೆಗಳು ದೇಶೀ ಸಾಹಿತ್ಯದ ಪುರಸ್ಕರ್ತರಾಗಿದ್ದರು....ವಿಜಯನಗರದ ಚಕ್ರವರ್ತಿಗಳಲ್ಲಿ ಬಹಳ ದೊಡ್ಡವ ನಾದ ಕೃಷ್ಣದೇವರಾಯ 'ಆಮುಕ್ತಮಾಲ್ಯದ'ವನ್ನು ರಚಿಸಿದ."

ಕೃಷ್ಣದೇವರಾಯ ತೆಲುಗಿನಲ್ಲಿ ಆಮುಕ್ತಮಾಲ್ಯದ ರಚಿಸಿದ ನಿಜ. ಇವನು ಆಂಧ್ರನೆನ್ನುವುದಕ್ಕೂ, ವಿಜಯನಗರ ಆಂಧ್ರಸಾಮ್ರಾಜ್ಯ ವೆನ್ನುವುದಕ್ಕೂ ಎಲ್ಲಿಯೂ ಆಧಾರವಿಲ್ಲ. ಡಾ. ಸಾಲತೊರೆ, ರೆವರೆಂಡ್ ಫಾದರ್ ಹೆರಾಸ್, ಡಾ. ಕೃಷ್ಣಸ್ವಾಮಿ ಅಯ್ಯಂಗಾರ್ಯ, ಪ್ರೊ. ಶ್ರೀಕಂಠ ಶಾಸ್ತ್ರಿ, ಮೊದಲಾದ ವಿದ್ವಾಂಸರು ಈ ಅಂಶವನ್ನು ತಮ್ಮ ಗ್ರಂಥಗಳಲ್ಲಿ

ವಿಶದಪಡಿಸಿದ್ದಾರೆ. ಆದರೆ ವಿಜಯನಗರ ನಮ್ಮದು ಎಂಬ ಛಲ ಆಂಧ್ರರು ಬಿಟ್ಟಿಲ್ಲ. ಅವರಿಗೆ ಬೇಕಾದುದು ರಾಜ್ಯವೇ ವಿನಾ ಸತ್ಯವಲ್ಲವಲ್ಲ !

೨. " ರಾಜಕವಿಯಾದ ನನ್ನಿಚೋಡ ತನ್ನ 'ಕುಮಾರ ಸಂಭವ'ದಲ್ಲಿ ಚಾಳುಕ್ಯರು ದೇಶೀ ಮಾರ್ಗದ ಪ್ರತಿಪಾದಕರೆಂದು ಹೇಳುತ್ತಾನೆ....ಹೀಗೆ ಹೆಸರಾದ ಸತ್ಯಾಶ್ರಯ-ಇಮ್ಮಡಿ ಪುಲಕೇಶಿ ಹರ್ಷನ ಸಮಕಾಲೀನ. ಅವನು ಇದ್ದುದು ಆರನೆಯ ಶತಮಾನದ ಕೊನೆಯಲ್ಲಿ....ದೇಶೀಮಾರ್ಗ ಪ್ರತಿಪಾದಕನೆಂದು ಹೆಸರಾಂತ ಪುಲಕೇಶಿ ಒಂದೂ ತೆಲುಗು ಗ್ರಂಥವನ್ನು ಬರೆಯದಿರುವುದು ಊಹಾತೀತವಾಗಿದೆ. ದೇಶೀ ಸಾಹಿತ್ಯ ಹನ್ನೊಂದನೆಯ ಶತಮಾನಕ್ಕೆ ಮುಂಚೆ ತಮಿಳಿನಲ್ಲಿ ಮತ್ತು ತೆಲುಗಿಗೆ ತೀರಾ ಸಮೀಪ ವಾಗಿರುವ ಕನ್ನಡದಲ್ಲಿ ದೊರೆಯುತ್ತವೆ. ಕನ್ನಡದ ಇಬ್ಬರು ಆದಿಕವಿಗಳು ಮಹಾ ಕವಿಗಳು ಪಂಪ, ಪೊನ್ನ ಆಂಧ್ರರಾಗಿದ್ದರು. ಆ ಕಾಲದಲ್ಲಿ ಕನ್ನಡ ತೆಲುಗುಗಳಿಗೆ ಬಹಳ ವ್ಯತ್ಯಾಸವಿರಲಿಲ್ಲ."

ಕನ್ನಡನಾಡಿನ ಪ್ರಧಾನ ಸಾಮ್ರಾಜ್ಯಗಳಲ್ಲಿ ಚಾಳುಕ್ಯ ಚಕ್ರಾಧಿಪತ್ಯವೂ ಒಂದು. ಇಮ್ಮಡಿ ಪುಲಕೇಶಿ ಕಳಿಂಗರು, ಪಲ್ಲವರು, ಚೋಳರು, ಕೇರಳರು ಮತ್ತು ಪಾಂಡ್ಯರನ್ನು ಗೆದ್ದು 'ದಕ್ಷಿಣಾಪಥೇಶ್ವರ' ಎಂದು ಹೆಸರು ಪಡೆದ. ತನ್ನ ವಿಶಾಲ ರಾಜ್ಯವನ್ನು ದಕ್ಷತೆಯಿಂದ ಆಳುವುದಕ್ಕಾಗಿ ಆಂಧ್ರ ದೇಶಕ್ಕೆ ತನ್ನ ತಮ್ಮ ಕುಬ್ಜವಿಷ್ಣುವರ್ಧನನನ್ನು ಸಾಮಂತ ರಾಜನನ್ನಾಗಿ ನೇಮಿಸಿದ. ಕುಬ್ಜವಿಷ್ಣುವರ್ಧನ ಕೆಲವು ಕಾಲಾನಂತರ ಸ್ವತಂತ್ರವಾಗಿ ಆಂಧ್ರ ದೇಶಕ್ಕೆ ಅರಸಾದ. ಅವನ ಸಂತತಿಯವರೇ ಪೂರ್ವ ಚಾಳುಕ್ಯರು. (ಕರ್ನಾಟಕದ ಕೈಪಿಡಿ ಪುಟ ೪೭.) ಅಜಂತೆಯ ಚಿತ್ರಕಲಾ ಕೆಲಸ ಮುಗಿದುದು, ಕನ್ನಡಕ್ಕೆ ವಿಶೇಷ ಪ್ರಾಶಸ್ತ್ಯ ದೊರೆತುದೂ, ಕನ್ನಡದಲ್ಲಿ ಶಿಲಾ ಶಾಸನಗಳು ರಚಿಸಲ್ಪಟ್ಟುದೂ ಅವನ ಕಾಲದಲ್ಲೇ. ಇವನು ಆಂಧ್ರದೊರೆ ಹೇಗಾದ ?

ಪಂಪ ಹುಟ್ಟಿದ್ದು ಬೆಳೆದದ್ದು ಪುಲಿಗೆರೆಯಲ್ಲಿ (ಈಗಿನ ಲಕ್ಷ್ಮೇಶ್ವರ) ಚಾಳುಕ್ಯವಂಶದ ಅರಿಕೇಸರಿಯ ದಂಡನಾಯಕನಾಗಿದ್ದ. 'ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪ' ಇವನಿಗೆ ತೆಲುಗು ಭಾಷೆಯ ಗಂಧ ಕೂಡ ಗೊತ್ತಿರಲಿಲ್ಲ.

ಪೊನ್ನ ರಾಷ್ಟ್ರಕೂಟರ ಮೂರನೆಯ ಕೃಷ್ಣನ ಆಸ್ಥಾನ ಕವಿಯಾಗಿದ್ದ.

ಚಾಳುಕ್ಯ, ರಾಷ್ಟ್ರಕೂಟ ಸಾಮ್ರಾಜ್ಯಗಳು 'ಆಂಧ್ರ ಸಾಮ್ರಾಜ್ಯ' ಗಳೆಂದು ಇದುವರೆಗೂ ಯಾರೂ ಹೇಳಿಲ್ಲ. ಪಂಪ, ಪೊನ್ನರನ್ನು ಆಂಧ್ರ ರೆನ್ನುವ ಪಿ. ಟಿ. ರಾಜು ತಮ್ಮ ವಿಚಿತ್ರ ಸಂಶೋಧನೆಯ ವಿಶದ ಪರಿಚಯ ಮಾಡಿಕೊಡಬೇಕು ಇತಿಹಾಸಪ್ರಿಯರಿಗೆ.

೩. "ಹನ್ನೊಂದನೆಯ ಶತಮಾನ ತಮಿಳು, ಕನ್ನಡ ತೆಲುಗು ಗಳಲ್ಲಿ ಬ್ರಾಹ್ಮಣ ಸಾಹಿತ್ಯದ ಪುನರೋದಯವನ್ನು ಸೂಚಿಸುತ್ತದೆ."

ಹನ್ನೊಂದನೆಯ ಶತಮಾನದಲ್ಲಿ ಬಂದ ಹಿರಿಯ ಬ್ರಾಹ್ಮಣ ಕವಿ ದುರ್ಗಸಿಂಹನೊಬ್ಬನೇ. ಇದು ಜೈನರ ಶತಮಾನ. ಹನ್ನೊಂದನೆಯ ಶತಮಾನ ಜೈನರ ಪ್ರಾಬಲ್ಯವನ್ನೇ ಕನ್ನಡ ಸಾಹಿತ್ಯದಲ್ಲಿ ತೋರುತ್ತದೆ.

೪. "ಕರ್ನಾಟಕದಲ್ಲಿ ಆದಂತೆ ಆಂಧ್ರದಲ್ಲಿ ರಕ್ತಪಾತವಾದುದಕ್ಕೆ ಆಧಾರಗಳಿಲ್ಲ. ಕರ್ನಾಟಕದಲ್ಲಿ ಜೈನರನ್ನು ವೀರಶೈವರು ಮಾರಣ ಹೋಮ ಮಾಡಿದರು."

ಪ್ರಾಯಶಃ ಕಲ್ಯಾಣದ ಕ್ರಾಂತಿಯನ್ನು ಕುರಿತು ರಾಜು ಈ ಮಾತು ಗಳನ್ನು ಬರೆದಿರಬಹುದು. ಆಗಲೂ ಜೈನರ ಮಾರಣಹೋಮವಾಗಲಿಲ್ಲ. ಎಲ್ಲ ಜನಾಂಗಗಳೂ ಕ್ರಾಂತಿಯ ಬೇಗೆಗೆ ಸಿಕ್ಕಿ ನೊಂದವು. ಕನ್ನಡ ನಾಡಿನ ವೀರಶೈವರ ಮುಖಕ್ಕೆ ಮಸಿಬಳಿಯುವ ಯತ್ನ ಗ್ರಂಥಕರ್ತರದು.

೫. "ವಿಜಯನಗರ ಸಾಮ್ರಾಜ್ಯದ ನಿರ್ಮಾಪಕರಾದ ವಿದ್ಯಾರಣ್ಯ ರಿಗಿಂತ ಸುಮಾರು ೪೦ ವರ್ಷಕ್ಕೆ ಮುಂಚೆ ತಿಕ್ಕನ ಬದುಕಿದ್ದ. ಸಾಂಸ್ಕೃತಿಕ ಬುನಾದಿಯ ಮೇಲೆ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂಬ ತಿಕ್ಕನನ ಆಶೆಯನ್ನು ವಿದ್ಯಾರಣ್ಯರು ಸಾರ್ಥಕಗೊಳಿಸಿದರು."

ವಿದ್ಯಾರಣ್ಯರ ತಪಸ್ಸಿನ ಫಲಕ್ಕೆ ರಾಜು ಅವರು ತಿಕ್ಕನ ಕಾರಣ ಕರ್ತನೆಂದು ಸೂಚಿಸಿದ್ದಾರೆ. ಈ ತಿಕ್ಕನ ಇದ್ದುದು ಹೋದುದೂ ವಿದ್ಯಾ ರಣ್ಯರು ಕಾಣರು. ಧರ್ಮಕ್ಕೆ ಬಂದೊದಗಿದ್ದ ಕುತ್ತನ್ನು ಪರಿಹರಿಸಬೇಕೆಂದು ವೇದಾಧ್ಯಯನನಿರತ ವೀರ ಕ್ಷತ್ರಿಯನಾದ, ವಿದ್ಯಾರಣ್ಯರ ತಲೆಯ ಮೇಲೆ ತಿಕ್ಕನನ್ನು ಕೂಡಿಸಿರುವಂತೆ ಆಂಧ್ರರು ಗಾಂಧಿ, ಲೆನಿನ್, ಮಾರ್ಕ್ಸ್

ಎಲ್ಲರ ತಲೆಯಮೇಲೆಯೂ ಒಬ್ಬೊಬ್ಬ ಆಂಧ್ರನನ್ನು ಕೂಡಿಸಬಹುದು. ಅಪದ್ಧಕ್ಕೆ ಯಾರ ಅಪ್ಪಣೆ ಅಗತ್ಯ.

೫. "ಅವನ (ಶ್ರೀನಾಥಕವಿಯ) 'ಹರ ವಿಲಾಸಮು' ಶಿವನ ಬಗ್ಗೆ ನಾಲ್ಕು ಕಥೆಗಳನ್ನು ಹೇಳುವ ಕಥಾ ಪ್ರಬಂಧ. ಶ್ರೀನಾಥ ಕೆಲವು ವಿಚಾರಗಳನ್ನು ಕಾಳಿದಾಸ, ಭಾರವಿ ಮತ್ತು ಯಾವದೋ ಕನ್ನಡ ಕಾವ್ಯದಿಂದ ತೆಗೆದುಕೊಂಡಿದ್ದರೂ ಅದು ಸ್ವತಂತ್ರ ಕೃತಿ."

ಕಾಳಿದಾಸ, ಭಾರವಿ, ಕನ್ನಡ ಕಾವ್ಯದಿಂದ ವಿಚಾರಗಳನ್ನೆತ್ತಿಕೊಂಡಿದ್ದರೂ ಶ್ರೀನಾಥನ ಕೃತಿ ಸ್ವತಂತ್ರ ಕಾವ್ಯವಂತೆ! ಆ ಕನ್ನಡಕಾವ್ಯ ಯಾವದೆಂದು ಹೇಳುವ ಸಹನೆ ರಾಜು ಅವರಿಗಿಲ್ಲ.

೫. "ಆಮುಕ್ತಮಾಲ್ಯದ ಪ್ರಸ್ತಾವನೆಯಲ್ಲಿ ಕೃಷ್ಣದೇವರಾಯ, ತಾನು ಕಳಿಂಗಯಾತ್ರೆ ಹೋಗಿದ್ದಾಗ ಆಂಧ್ರವಿಷ್ಣು ಕನಸಿನಲ್ಲಿ ಬಂದು.... ನಾನು ಆಂಧ್ರರ ಪ್ರಭು-ನೀನು ಕರ್ನಾಟಕದ ವರ ಪ್ರಭು........ಈ ದೇಶ ತೆಲುಗು, ನಾನು ತೆಲುಗರ ಪ್ರಭು. ಎಲ್ಲ ದೇಶದ ದೊರೆಗಳೂ ನಿನಗೆ ಗೌರವ ಸಲ್ಲಿಸುವಾಗ ನೀನು ಅವರೊಂದಿಗೆ ತೆಲುಗಿನಲ್ಲಿ ಮಾತನಾಡಿದಾಗ 'ಎಲ್ಲ ಭಾಷೆಗಳಿಗಿಂತ ತೆಲುಗೇ ಉತ್ತಮುವಾದುದೆಂದು ಕಂಡುಕೊಂಡಿಲ್ಲವೇನು' ಎಂದು ಹೇಳುತ್ತಾನೆ."

ಆಮುಕ್ತಮಾಲ್ಯದಲ್ಲಿ ಇದು ಪ್ರಕ್ಷಿಪ್ತ ಭಾಗ. ಆಂಧ್ರವಿಷ್ಣುವೇ ಕೃಷ್ಣದೇವರಾಯ ಕರ್ನಾಟಕದ ಪ್ರಭುವೆಂದು ಒಪ್ಪಿಕೊಂಡಿರುವಾಗ ಉಳಿದ ಭಾಗವನ್ನು ರಾಜು ಅವರಂತಹ ಯಾವನೋ ಆಂಧ್ರ ಮುಂದೆ ಸೇರಿಸಿರಬೇಕೆಂದು ಸ್ವತಸ್ಸಿದ್ಧವಾಗುತ್ತದೆ.

೬. "ವಿಜಯನಗರದ ನಾಶವಾದ ಮೇಲೆ ಕೃಷ್ಣದೇವರಾಯನ ಸಾಮಂತರು ಸ್ವತಂತ್ರರಾದರು. ಅವರ ಆಸ್ಥಾನಗಳಲ್ಲಿಯೂ ತೆಲುಗು ಸಾಹಿತ್ಯ ವರ್ಧಿಸಿತು—ಸ್ವಲ್ಪ ಮಸಕಾಗಿ. ಪ್ರಧಾನ ಕೃತಿಗಳು ಬಂದುದು ತಂಜಾವೂರು, ಮಧುರೆ, ಪುದುಕೋಟೆ ಮತ್ತು ಮೈಸೂರುಗಳಿಂದ."

ಮೈಸೂರಿನಿಂದ ತೆಲುಗು ಸಾಹಿತ್ಯಕ್ಕೆ ಬಳುವಳಿಯಾಗಿ ಹೋದ ತೆಲುಗಿನ 'ಪ್ರಧಾನ ಕೃತಿಗಳ' ಬಗ್ಗೆ ಇದುವರೆಗೆ ಯಾರೂ ಕಂಡುದಿಲ್ಲ, ಕೇಳಿದುದಿಲ್ಲ. ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆಮಾಡಿದ ಚಿಕ್ಕದೇವರಾಯ,

ಮುಮ್ಮಡಿ ಕೃಷ್ಣರಾಜವೊಡೆಯರ್ ಇವರ ಆಸ್ಥಾನಗಳಲ್ಲಿ ಕೂಡ ಯಾವ ಹೆಸರಾಂತ ತೆಲುಗು ಕವಿಯೂ ಇರಲಿಲ್ಲ.

೭. "ಆರಂಭಕಾಲದ ನಾಟಕಕಾರರಲ್ಲಿ (ತೆಲುಗು ನಾಟಕಕಾರರು) ಧರ್ಮಾವರಂ ಕೃಷ್ಣಮಾಚಾರಿ, ಕೋಲಾಚಲಂ ಶ್ರೀನಿವಾಸರಾನ್ ಪ್ರಧಾನ ವ್ಯಕ್ತಿಗಳಾಗಿದ್ದಾರೆ."

ಇವರಿಬ್ಬರೂ ಬಳ್ಳಾರಿಯವರು, ಕನ್ನಡಿಗರು. 'ಆಂಧ್ರ ನಾಟಕ ಪಿತಾಮಹ'ನೆಂದು ಹೆಸರಾಂತ ಕೃಷ್ಣಮಾಚಾರ್ಯರು ಮೊದಲು ಬರೆದುದು ಕನ್ನಡ ನಾಟಕ. ಇವರು ಅನಂತರದಲ್ಲಿ ತೆಲುಗಿನ ಮೋಹಕ್ಕೆ ಬಲಿಬಿದ್ದು ಕನ್ನಡ ನಾಟಕ ಬರೆಯುವುದನ್ನು ಬಿಟ್ಟರು.

ಆಂಧ್ರ ವಿಶ್ವವಿದ್ಯಾನಿಲಯದಂಥ ಒಂದು ಹಿರಿಯ ಶೈಕ್ಷಣಿಕ ಸಂಸ್ಥೆಯಲ್ಲಿ ತೆಲುಗು ವಿದ್ವಾಂಸರಾಗಿರುವ ಡಾ. ರಾಜು. (ಶಾಸ್ತ್ರಿ) ಅವರು ಬರೆದಿರುವ ಗ್ರಂಥದಲ್ಲಿನ ಅಪದ್ಧ ಕಂತೆಯಿದು. ರಾಜು ಅವರು ತಮ್ಮ ಅಪಕ್ವ ಪಾಂಡಿತ್ಯವನ್ನು ವ್ಯಕ್ತಗೊಳಿಸಿರುವ ಮಾತು ಹಾಗಿರಲಿ. ಇದನ್ನು ಮರುಮಾತಾಡದೆ ಜೀರ್ಣಿಸಿಕೊಳ್ಳುತ್ತಿರುವ ಕನ್ನಡಿಗರ ಕ್ಲೈಬ್ಯಕ್ಕೆ ಏನೆಂದು ಹೇಳೋಣ. ಈಗ್ರಂಥ ಪ್ರಕಟವಾಗಿ ಈಗಾಗಲೆ ಮೂರು ವರ್ಷಗಳಾದವು. ಕನ್ನಡ ಸಾಹಿತ್ಯ ಪರಿಷತ್ತಾಗಲಿ, ಕರ್ನಾಟಕದ ವಿದ್ಯಾವರ್ಧಕ ಸಂಘವಾಗಲಿ ರಾಜು ಅವರ ತಪ್ಪನ್ನು ಖಂಡಿಸುವುದಕ್ಕೆ ಮುಂದುವರಿಯಲಿಲ್ಲ.* ಇಂಗ್ಲಿಷಿನಲ್ಲಿ, ಇತರ ದೇಶಭಾಷೆಗಳಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಇಲ್ಲದಿರುವುದು ಒಂದು ದೊಡ್ಡ ಕುಂದು. ಸದ್ಯದೊರಕುವ ಕೆಲವು ಇಂಗ್ಲಿಷ ಗ್ರಂಥಗಳನ್ನಾದರೂ‡ ರಾಜು ಅವರು ನೋಡುವ ಶ್ರಮವಹಿಸಿದ್ದರೆ ಅವರು

---

* ಈ ಬಗ್ಗೆ ಪರಿಷತ್ತಿನ ಉಪಾಧ್ಯಕ್ಷರಲ್ಲಿ ನಾನೇ ಪ್ರಸ್ತಾಪಿಸಿದೆ. ಅವರ ಲಕ್ಷ್ಯವೂ ಇತ್ತ ಬೀಳದಿದ್ದುದು ಶೋಚನೀಯ.

‡ 1) Kanarese Literature: E. P. Rice, 2) History of the Kannada Literature: R. Narasimhacharya. 3) History of Kannada Language: R. Narasimhacharya. 4) An Essay on Canarese Literature: Rev. F. Kittel. 5) Kannada Literature Lewis Rice (Introduction to Karnataka Bhasha Bhushana, 6) Karnataka Handbook. Ed. D. K. Bharadvaj.

ಖಂಡಿತವಾಗಿ 'ತೆಲುಗು ಸಾಹಿತ್ಯ' ಚರಿತ್ರೆಯನ್ನು ಹೀಗೆ ಬರೆದು ಕನ್ನಡಿಗರ ಮುಖಕ್ಕೆ ಮಸಿಬಳಿಯುವ ಯತ್ನ ಮಾಡುತ್ತಿರಲಿಲ್ಲ.

ಕನ್ನಡಿಗರು ಮುನ್ನೆಚ್ಚರಿಕೆ ತೆಗೆದುಕೊಂಡು ಇಂಥ ಅಪಪ್ರಚಾರವನ್ನು ತಡೆಗಟ್ಟಬೇಕು. ಪಿ. ಇ. ಎನ್. ಅಂಥ ಶ್ರೇಷ್ಠ ಸಂಸ್ಥೆಯ ಆಶ್ರಯದಲ್ಲಿ ಬರುವ ಗ್ರಂಥದಲ್ಲಿನ ವಿಷಯಗಳು—ಸಿದ್ಧಾಂತಗಳು—ಅಂಕಿ ಅಂಶಗಳು ಆಧಾರವಾಗಿ ಕನ್ನಡನಾಡಿಗೆ ವ್ಯತ್ಯಪ್ರಾಯವಾಗುತ್ತದೆಂಬುದನ್ನು ಎಚ್ಚೆತ್ತ ಕನ್ನಡಿಗರು ಮರೆಯಬಾರದು.

# ೬. ಮಹಿಳೆಯರ ಪ್ರಗತಿ (?)

ವಿಶ್ವವಿಂದು ಪ್ರಗತಿಮುಖವಾಗಿದೆ. ಶ್ರಮಜೀವಿಗಳು, ವಿದ್ಯಾರ್ಥಿಗಳು, ಮಹಿಳೆಯರು ನೂತನ ವಿಶ್ವದಲ್ಲಿ ತಮ್ಮ ಸ್ಥಾನಮಾನಗಳನ್ನು ನಿರ್ದೇಶಿಸಿಕೊಳ್ಳಲು ಹವಣಿಸುತ್ತಿದ್ದಾರೆ. ವೃತ್ತಿ ಸಮ್ಮೇಳನ, ವಿದ್ಯಾರ್ಥಿ ಸಮ್ಮೇಳನ, ಮಹಿಳಾ ಸಮ್ಮೇಳನಗಳು ಅಸಂಖ್ಯಾತವಾಗಿ ನಡೆಯುತ್ತಿವೆ. ಇಂಥ ಚಟುವಟಿಕೆ ಇಂದಿನ ಕರ್ನಾಟಕದಲ್ಲಿಯೂ ನಡೆದಿದೆ.

ಸ್ವಭಾವ ಕೋಮಲೆಯರಾದ ಮಹಿಳೆಯರು ತಮ್ಮ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸಲು ಹೋರಾಡುತ್ತಿದ್ದಾರೆ. ಯಾವದೋ ಕಾಲದಲ್ಲಿ ಯಾವದೋ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ವ್ಯವಸ್ಥಿತವಾದ ನ್ಯಾಯ ಸೂತ್ರಗಳು, ಧರ್ಮ ಸೂತ್ರಗಳು ಇಂದು ಪುನರ್-ವಿಮರ್ಶೆಗೊಳಗಾಗಿವೆ. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮಾತು ಗಾಳಿಗೆ ಹಾರಿ ಹೋಗಿದೆ. ಹೆಣ್ಣು ಗಂಡಿನ ಜತೆಗೆ, ರಾಷ್ಟ್ರದ ಪುನರ್ನಿರ್ಮಾಣ ಕಾರ್ಯದಲ್ಲಿ ತೊಡಗಲು, ಅವನಿಗಿಂತಲೂ ಹೆಚ್ಚು ಸಾಧಿಸಲು ತವಕ ಪಡುತ್ತಿದ್ದಾಳೆ.

ಇಂಥ ಆಶಯಗಳನ್ನಿಟ್ಟುಕೊಂಡೇ ಮಹಿಳಾ ಸಮ್ಮೇಳನ-ಪರಿಷತ್ತುಗಳು ಕೆಲಸ ಮಾಡಹೊರಟಿವೆ. ಮೈಸೂರು ಸಂಸ್ಥಾನದಲ್ಲಿ 'ಲೇಡೀಸ್ ಕಾನ್‌ಫರೆನ್ಸ್', ಉತ್ತರ ಕರ್ನಾಟಕದಲ್ಲಿ 'ಕರ್ನಾಟಕ ಮಹಿಳಾ ಪರಿಷತ್ತು' ಪ್ರತಿ ವರ್ಷ ಸೇರಿ ಮಹತ್ತ್ವದ ನಿರ್ಣಯಗಳನ್ನು ಮಾಡುತ್ತಿವೆ. ನವೆಂಬರ್ ೧೬-೧೭ ರಲ್ಲಿ ಸೇರಿದ ಮೈಸೂರು ಸಂಸ್ಥಾನದ ೯ ನೆಯ ಮಹಿಳಾ ಸಮ್ಮೇಳನದಲ್ಲಿ ಸಮ್ಮೇಳನದ ಕಾರ್ಯಕಲಾಪಗಳನ್ನು ಕನ್ನಡದಲ್ಲಿಯೇ ನಡೆಸಬೇಕೆಂಬ ಒಂದು ನಿರ್ಣಯ ಮಂಡಿಸಲ್ಪಟ್ಟಿತು; ಅದರ ಸಂಬಂಧವಾಗಿ ಸೌ|| ಬಿ. ಎಲ್. ಸುಶೀಲಮ್ಮ, ಎಂ. ಎಸ್‌ಸಿ. ಅವರು 'ಕನ್ನಡನುಡಿ' ಯಲ್ಲಿ (೧೩-೧೨-೪೬) ಹೀಗೆ ಬರೆದಿದ್ದಾರೆ.

"ಕರ್ನಾಟಕಕ್ಕೆ ಈಗ ಮೈಸೂರು ಹೃದಯವಾಗಿದೆ. ಇಲ್ಲಿಯ ಮಹಿಳೆಯರ ಸಮ್ಮೇಳನದ ಕಾರ್ಯಭಾರ ಕನ್ನಡದಲ್ಲಿ ನಡೆಯುವುದಲ್ಲದೆ ಮತ್ತಾವ ಭಾಷೆಯಲ್ಲಿ ನಡೆಯಿಸಲು ಶಕ್ಯ?....ಆದರೆ ಇಲ್ಲಿ ನ್ಯಾಯವಾಗಿ ಕನ್ನಡಕ್ಕೆ ಸಲ್ಲಬೇಕಾದ ಸ್ಥಾನಮಾನಗಳಿಗೆ ಇಂಗ್ಲೀಷ್ ಭಾಷೆಯು ಅಡ್ಡಿ

ಬರುತ್ತಿದೆ........ಮೈಸೂರು ಮಹಿಳೆಯರ ಒಲವು ಕನ್ನಡಕ್ಕೆ ಇದ್ದರೂ, ಸಮ್ಮೇಳನದ ಕೆಲವು ಅಧಿಕಾರಿಗಳ ಇಂಗ್ಲೀಷ್ ಭಾಷಾಭಿಮಾನ ಈ ಸಂಸ್ಥೆಯಲ್ಲಿ ಕನ್ನಡಕ್ಕಿರಬೇಕಾದ ಗೌರವ, ಪ್ರತಿಷ್ಠೆಗಳಿಗೆ ಕುಂದನ್ನು ತರುತ್ತಿದೆ. ಹೋದ ವರ್ಷ ಬೆಂಗಳೂರಿನಲ್ಲೇ ನೆರೆದ ಮೈಸೂರಿನ ಮಹಿಳಾ ಸಮ್ಮೇಳನದ ಪ್ರಾರಂಭೋತ್ಸವದಲ್ಲಿ ಪ್ರದರ್ಶಿತವಾದ ಇಂಗ್ಲೀಷ್ ವ್ಯಾಮೋಹ ಮೇರೆ ಮೀರಿ ಹೋಯಿತು. ಉತ್ಸವದ ಕಾರ್ಯಕ್ರಮ ಪೂರ್ಣವಾಗಿ ಇಂಗ್ಲೀಷಿನಲ್ಲೇ ನಡೆಯಿತು. ಇಂಗ್ಲೀಷಿನ ಗಂಧವನ್ನೇ ಅರಿಯದ ಸಾವಿರಾರು ಮಹಿಳೆಯರು ಒಂದು ವಿಷಯವನ್ನೂ ಅರ್ಥಮಾಡಿಕೊಳ್ಳದೆ ಸಭೆಯಲ್ಲಿ ಕುಳಿತಿದ್ದರು. ಇವರಿಗಾಗುತ್ತಿದ್ದ ವಂಚನೆಯನ್ನೂ ಕನ್ನಡಕ್ಕಾಗುತ್ತಿದ್ದ ಅವಮಾನವನ್ನೂ ನೋಡಿ ಸಹಿಸದೆ ಹಲವು ಸದಸ್ಯೆಯರು ಈ ಮರುಳಾಟಕ್ಕೆ ಸೂತ್ರಧಾರರಾದವರನ್ನು ತೀಕ್ಷ್ಣವಾಗಿ ಖಂಡಿಸಿದರು.

"ಈತರದ ಅಪಚಾರಗಳು ಸಮ್ಮೇಳನದಲ್ಲಿ ಮತ್ತೆ ತಲೆ ಎತ್ತದಂತೆ ಮಾಡಲು ಮೇಲೆ ಉಲ್ಲೇಖಿಸಿರುವ ನಿರ್ಣಯವನ್ನು ಕೋಲಾರದ ಮಹಿಳಾ ಸಮಾಜದವರು ಈ ಸಲದ ಸಮ್ಮೇಳನದಲ್ಲಿ ಮಂಡಿಸಿದರು. ಈ ನಿರ್ಣಯಕ್ಕೆ ಸರ್ವಾನುಮತದಿಂದ ಒಪ್ಪಿಗೆ ದೊರೆಯಿತು. ಸಭೆಯಲ್ಲಿದ್ದವರು ಕನ್ನಡಿತಿಯರು, ಇಲ್ಲವೆ ಮನೆಯ ಮಟ್ಟಿಗೆ ತೆಲುಗು, ತಮಿಳು, ಮರಾಟಿ ಭಾಷೆಗಳನ್ನಾಡಿಕೊಂಡು ಕರ್ನಾಟಕಸ್ಥರಾದವರು. ಇವರು ಕನ್ನಡ ಬೇಡ, ಇದರ ಬದಲು ಇಂಗ್ಲೀಷೋ, ಫ್ರೆಂಚೋ ಅಥವಾ ಬೇರೊಂದು ದೇಶ ಭಾಷೆಯೋ ಇರಲಿ ಎಂದು ಅನ್ನುವುದಕ್ಕೆ ಇವರಿಗೆ ಮನಸ್ಸೆಲ್ಲಿಂದ ಬರಬೇಕು? ಈ ಸಂದರ್ಭದಲ್ಲಿ ಸಮ್ಮೇಳನದ ಕಾರ್ಯದರ್ಶಿನಿಯವರಾದ ಶ್ರೀಮತಿ ಕಮಲಮ್ಮ ದಾಸಪ್ಪ, ಎಂ. ಎ. ಅವರು ಒಂದು ವಿಚಿತ್ರ ಮಾತನ್ನು ಅಪ್ಪಣೆ ಕೊಡಿಸಿದರು. " ಸಮ್ಮೇಳನದ ಕೆಲಸ ಕನ್ನಡದಲ್ಲಿಯೇ ನಡೆಯುತ್ತಿದೆ. ಆದರೆ ನಮಗೆ ಯಾವ ಭಾಷೆಯಾದರೆ ಏನು? ಮುಂದಿನ ವರ್ಷದ ಸಮ್ಮೇಳನವನ್ನು ತಮಿಳಿನಲ್ಲೇ ನಡಸಿಬಿಡೋಣ "ಎಂದರು. ಸಮ್ಮೇಳನದಲ್ಲಿ ಇನ್ನೂ ಕನ್ನಡಕ್ಕೆ ಸಂಪೂರ್ಣ ಮನ್ನಣೆ ದೊರೆತಿಲ್ಲ. ಮುಂದಿನ ವರ್ಷ ಆಗುವ ಸಮ್ಮೇಳನದಲ್ಲಿ ತಮಿಳು ಭಾಷೆಗೆ ಯಾಕಿವರು ಮಣೆಯನ್ನು ಸಜ್ಜುಮಾಡುತ್ತಿರುವುದು. ಆ ಹೊತ್ತಿಗೆ ಏನಾದರೂ ಯಕ್ಷಿಣಿ ನಡೆದು

ಮೈಸೂರು ತಮಿಳು ನಾಡಾಗಿ ಪರಿವರ್ತಿತವಾಗುವ ಸಂಭವವಿದೆಯೇ? ಕನ್ನಡದ ಕಾವು, ಕೆಚ್ಚು ಮೈಸೂರಿನವರಲ್ಲಿ ಇರುವವರೆಗೆ ತಮ್ಮ ಬಾಳಿನ ಉಸಿರಾದ ರನ್ನಗನ್ನಡದ ವಿಚಾರದಲ್ಲಿ ಇವರ್ಯಾರು? ಈ ತಾಯಿಯವರು ಬೋಧಿಸುವ ವೈರಾಗ್ಯವನ್ನು ತಾಳುವುದು ಸಾಧ್ಯವೇ. ಇಲ್ಲ. ಜ್ಞಾನ ವೃದ್ಧರೂ ವಯೋವೃದ್ಧರೂ ಕರ್ನಾಟಕ ಮಹಿಳೆಯರಲ್ಲಿ ಗಣ್ಯರಾದವರೂ ಇಂತಹ ಅಸಂಬದ್ಧವಾದ ಮಾತುಗಳನ್ನು ಆಡಬಾರದು. ಈ ತರದ ಇಲ್ಲದ ಸಲ್ಲದ ಮಾತುಗಳು ಸಮಸ್ಯೆಗಳೇ ಇರದ ಕಡೆ ಅಕ್ಷತೆ ಕೊಟ್ಟು ತೊಡಕು ಗಳನ್ನು ಬರಮಾಡಿಕೊಳ್ಳುವುದಕ್ಕೆ ಆಸ್ಪದವಾಗುವುವು. ಅಷ್ಟೆ.

"ಮೈಸೂರು ಸಮ್ಮೇಳನದ ಕಾರ್ಯದರ್ಶಿನಿಯವರಿಗೆ ಕನ್ನಡದ ಮೇಲೆ ಅನಾದರ ಅನಾಸಕ್ತಿ ಇರಬಹುದು. ಆದರೆ ತಮಿಳು ಭಾಷೆ ತಿಳಿಯದ ಇವರಿಗೆ ತಮಿಳಿನ ಭ್ರಮೆ ಎಲ್ಲಿಂದ ಅಂಟಿಕೊಂಡಿತು? ಇವರನ್ನು ಬೆನ್ನು ಹತ್ತಿರುವುದು ತಮಿಳಿನ ಪ್ರೇಮವಲ್ಲ. ಇಂಗ್ಲೀಷಿನ ಮೋಹವೇ! ಕಳೆದ ವರ್ಷ ಬಹು ಮಂದಿ ಅಕ್ಕತಂಗಿಯವರಿಗೆ ಬಾರದ ಇಂಗ್ಲೀಷ್ ಭಾಷಾ ಪ್ರಯೋಗ ಸಮ್ಮೇಳನದಲ್ಲಿ ಬೇಡವೆಂದು ಸಾಕಷ್ಟು ಹಗರಣ ಆದರೂ ಇವರ ಪ್ರಭಾವದಿಂದ ಈ ವರ್ಷದ ಸಮ್ಮೇಳನದ ಆಹ್ವಾನ ಪತ್ರಿಕೆಗಳು, ಸಮ್ಮೇಳನ ಏರ್ಪಡಿಸಿದ ಸಂತೋಷಕೂಟದ ಕರೆಗಳು ಇಂಗ್ಲೀಷಿನಲ್ಲೇ ಹೊರಬಿದ್ದುವು. ಅಲ್ಲದೆ ಸಮ್ಮೇಳನದ ಹೆಬ್ಬಾಗಿಲಿನ ಮೇಲೆ ಇವರ ಇಂಗ್ಲೀಷ್ ಮಮತೆಗೆ ಸಾಕ್ಷಿಯಾಗಿ "Welcome" "Ladies Conference" ಎಂದು ಕನ್ನಡಿಗರ ಕಣ್ಣಿಗೆ ಒತ್ತುವಂತೆ ದಪ್ಪ ದಪ್ಪ ಇಂಗ್ಲೀಷ್ ಅಕ್ಷರಗಳಲ್ಲಿ ಬರವಣಿಗೆ ಮೆರೆಯುತ್ತಿತ್ತು. ಸಮ್ಮೇಳನದಲ್ಲಿ ಹುಡುಕಿದರೂ ಒಬ್ಬ ಆಂಗ್ಲ ಮಹಿಳೆಯೂ ಇರಲಿಲ್ಲ. ಮತ್ತಿನ್ನಾರ ಸಂತೋಷಕ್ಕೆ ಇಂಗ್ಲೀಷಿನಲ್ಲಿ ತೋರಣ ಶೃಂಗಾರ ಏರ್ಪಟ್ಟಿತೋ ತಿಳಿಯದು. ಕನ್ನಡ ಬಾರದ ಅಧ್ಯಕ್ಷರ ಭಾಷಣ ಇಂಗ್ಲೀಷಿನಲ್ಲಿ ನಡೆಯಿತು. ಇದು ಕನ್ನಡಕ್ಕೆ ಕೂಡಲೇ ಭಾಷಾಂತರವಾಯಿತು. ಆದರೆ ಸಮ್ಮೇಳನದ ನಿರ್ಣಯಗಳನ್ನು ಇಂಗ್ಲೀಷಿ ನಲ್ಲಿ ಅಚ್ಚುಹಾಕಿಸಿ ಅವನ್ನು ಕಾರ್ಯದರ್ಶಿನಿಯವರು ಮೊದಲು ಇಂಗ್ಲೀಷಿ ನಲ್ಲೇ ಓದಿ ಅನಂತರ ಕನ್ನಡಕ್ಕೆ ಭಾಷಾಂತರ ಮಾಡುತ್ತಿದ್ದ ವೈಖರಿಯು ಬಣ್ಣನೆಗೆ ಅತೀತವಾಗಿದ್ದಿತು."

ಇದೇ ಬಗೆಯ ಕನ್ನಡ ದ್ರೋಹ ಮಹಿಳೆಯರಿಂದ ಬೆಳಗಾಂವಿಯಲ್ಲಿ ನಡೆಯಿತು. ಸೌ. ಪದ್ಮಾವತಿ ಅಂಗಡಿಯವರು ಕನ್ನಡವನ್ನು ಎತ್ತಿ ಹಿಡಿಯಲು ಬೆಳಗಾಂವಿಯಲ್ಲಿ ಸಾಹಸ ಮಾಡುತ್ತಿದ್ದಾರೆ. ಆದರೆ ಅಲ್ಲಿನ ಮಹಿಳಾ ಪರಿಷತ್ತು ಶ್ರೀಮತಿ ಉಮಾಬಾಯಿ ಕುಂದಾಪುರ ಅವರ ಕೈಗೊಂಬೆ. ಹುಟ್ಟು ಕನ್ನಡಿತಿಯಾದ ಶ್ರೀಮತಿ ಉಮಾಬಾಯಿಯವರಿಗೆ ಮಹಾರಾಷ್ಟ್ರ ಭೇತಾಳ ಬೆನ್ನು ಬಿದ್ದಿದೆ.

ಮಹಿಳಾ ಪರಿಷತ್ತು, ಸ್ತ್ರೀ ಸಮ್ಮೇಳನಗಳು ವರ್ಷ ವರ್ಷ ಸೇರಿ ಜಾರ್ಜೆಟ್ ಸೀರೆ, ಅಮರ ಜ್ಯೋತಿ ಬಳೆ, ಮಾವಿನಕಾಯಿ ಸರ, ರತನ್ ಚಿತ್ರದ ಹಾಡುಗಾರಿಕೆ ಚರ್ಚಿಸಿದರೆ ಸಾಲದು. ಪುರುಷರು ನಡೆಸುತ್ತಿರುವ ಸಮ್ಮೇಳನಗಳ ಕೃತಕಜೀವನದ ಪಡಿನೆಳಲಾಗಿ ಸ್ತ್ರೀಯರ ಸಮ್ಮೇಳನಗಳೂ ಬಾಳುವುದು ನಾಚಿಗೆಗೇಡು.

ಮಹಿಳೆಯರನ್ನಿಂದು ಹಲವು ಪ್ರಬಲ ಸಮಸ್ಯೆಗಳೆದುರಿಸುತ್ತಿವೆ. ಆತ್ಮರಕ್ಷಣೆ, ಮಾನರಕ್ಷಣೆಗಳಿಗವಶ್ಯಕವಾದ ಹಂಚಿಕೆಗಳನ್ನು ಅವರು ಹುಡುಕಬೇಕಾಗಿದೆ. ಲೀಗಿನ ಡೈರೆಕ್ಟ್ ಆ್ಯಕ್ಷನ್ ಚಳುವಳಿ ನೌಖಲಿ, ಮುಂಬಯಿಗಳನ್ನು ಮಾತ್ರವೇ ಅಲ್ಲ, ಇಡೀ ಹಿಂದೂಸ್ಥಾನವನ್ನು ಕಬಳಿಸಲು ಯತ್ನಿಸುತ್ತಿದೆ. ಇದಕ್ಕೆ ಪ್ರಥಮಾಹುತಿ ಮಹಿಳೆಯರು. ಮಹಿಳೆಯರಲ್ಲಿ ಕ್ಷಾತ್ರ ಶಕ್ತಿಯನ್ನು ಕೆರಳಿಸಿ ಅವರು ತಮ್ಮ ಆತ್ಮರಕ್ಷಣೆಗೆ ಹೋರಾಡುವಂತೆ ಹುರಿಗೊಳಿಸುವ ಕಾರ್ಯಕ್ರಮ ಅತ್ಯಗತ್ಯ. ದುರ್ಗಿ, ಕಾಳಿ, ಚಂಡಿಯರು ಮಹಿಳೆಯರೆಂಬುದನ್ನು ಇಂದಿನ ಮಹಿಳೆಯರು ಮರೆಯಬಾರದು.

ಕನ್ನಡವಿಂದಿಗೂ ಮುಸಲ್ಮಾನ ಸಾಮ್ರಾಜ್ಯಗಳ ದಬ್ಬಾಳಿಕೆ, ಬ್ರಿಟಿಷರ ಅತ್ಯಾಚಾರಗಳನ್ನು ಸಹಿಸಿ ಬದುಕಿರುವುದು, ಹೆಣ್ಣುಮಕ್ಕಳಿಂದ. ಅವರು ಶ್ರೀಮತಿ ಕಮಲಮ್ಮ ದಾಸಪ್ಪನವರ ರೀತಿ ನೀತಿಯನ್ನು ಅನುಸರಿಸಲು ಮೊದಲಿಟ್ಟರೆ ಕನ್ನಡ ನಾಶವಾದಂತೆಯೇ. ಇಂಥ ಪ್ರತಿಗಾಮಿ, ಕನ್ನಡ ಕಂಟಕರನ್ನು ಮಹಿಳಾ ಪರಿಷತ್ತುಗಳು ಹೊರಗೆ ನಿಲ್ಲಿಸಬೇಕು. ಅನಕ್ಷರಜ್ಞೆಯರಾದ ಲಕ್ಷಾಂತರ ಕನ್ನಡ ಹೆಣ್ಣು ಮಕ್ಕಳು ಅಂಧಕಾರದಲ್ಲಿ ಬಿದ್ದಿದ್ದಾರೆ. ಅವರಿಗೆ ವಿದ್ಯೆಬೇಕು-ಜ್ಞಾನಬೇಕು-ಮನುಷ್ಯರಂತೆ ಬಾಳುವ

ಮಾರ್ಗದರ್ಶನಬೇಕು. ಅಂಥ ಜನರ ನಿರಕ್ಷರತೆಯನ್ನು ನಿರ್ಮೂಲ ಮಾಡುವ ಕೆಲಸವನ್ನು ಮಹಿಳಾ ಸಮ್ಮೇಳನಗಳು ಕೈಗೊಳ್ಳಬೇಕು.

ಹಿಂದೂ ಕಾನೂನಿನಲ್ಲಿ ಮಹಿಳೆಯರಿಗಿರುವ ಗೌಣಸ್ಥಾನದ ನಿರ್ಮೂಲನದ ಕಡೆಗೆ ಸಮ್ಮೇಳನಾಧಿಕಾರಿಗಳು ಗಮನಕೊಡಬೇಕು. ಪ್ರಾಗತಿಕ ಜಗತ್ತಿನಲ್ಲಿ ಸ್ತ್ರೀಗೆ ಸಮಾನಾಧಿಕಾರ, ಹಕ್ಕು ಸ್ಥಾಪಿತವಾಗಬೇಕು.

ಹಿಂದೂ ಸಮಾಜವನ್ನು ಶೋಷಿಸಿ ಅದನ್ನು ನಿರ್ವೀರ್ಯಮಾಡಿರುವುದು 'ಅಸ್ಪೃಶ್ಯತೆ'ಯ ಪಿಡುಗು. ಅದರ ಆಧಾರಸ್ತಂಭ ಹಿಂದೂ ಹೆಣ್ಣುಮಕ್ಕಳೇ. ಕನ್ನಡನಾಡಿನ ದೇವಾಲಯಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶಾಧಿಕಾರ ಕೊಡಿಸಿಕೊಡಬೇಕಾದುದೂ, ಅಸ್ಪೃಶ್ಯ ಸ್ತ್ರೀಯರ ಸಂಪರ್ಕ, ಸಹವಾಸ ಬೆಳಸಿಕೊಂಡು ಅವರ 'ದಾಸೋಹಂಭಾವನೆ' ತೊಡೆದುಹಾಕಬೇಕಾದುದೂ ಮಹಿಳಾ ಸಮ್ಮೇಳನಗಳ ಪವಿತ್ರ ಕರ್ತವ್ಯ. ಎಂದಿನವರೆಗೆ ಭಾರತ ಹಾಗೂ ಹಿಂದೂ ಸಮಾಜ ಅಸ್ಪೃಶ್ಯತೆಯನ್ನು ಮಾನಿಸುವುದೋ ಅಂದಿನವರೆಗೆ ಪೂರ್ಣ ಸ್ವರಾಜ್ಯ ಕನಸಿನ ಗಂಟು. ಹಿಂದೂಧರ್ಮ ಉಳಿಯಬೇಕಾದರೆ ಅಸ್ಪೃಶ್ಯತೆ ಬುಡಸಹಿತ ನಾಶವಾಗಬೇಕು. ಆ ಕೆಲಸಕ್ಕೆ ಮಹಿಳೆಯರು ಹೆಗಲುಗೊಟ್ಟ ಹೊರತೂ ಗತ್ಯಂತರವಿಲ್ಲ.

ಇಂದಿನ—ಹಾಗೂ ನಾಳೆಯ ಜಗತ್ತಿನಲ್ಲಿ ರಾಮಾಯಣ, ಭಾರತ ಕಾಲಗಳನ್ನು ಅನುಕರಿಸುವುದು ಸಾಧ್ಯವಿಲ್ಲ. ಸ್ತ್ರೀಯರ ಸಮಸ್ಯೆಗಳು ಪರಿಸ್ಥಿತಿಗನುಗುಣವಾಗಿ ಚಿತ್ರ ವಿಚಿತ್ರ ಸ್ವರೂಪಗಳನ್ನು ತಳೆಯುತ್ತಿವೆ. ಸ್ತ್ರೀಯರಲ್ಲಿ ಸಂತಾನಸಂಯಮ ಸಾಧನೋಪಾಯಗಳ ಶಾಸ್ತ್ರೀಯ ಪ್ರಸಾರವಾಗಬೇಕು. ಕಾಮ ವಿಜ್ಞಾನ ಹೆಣ್ಣುಮಕ್ಕಳ ಶಾಲೆಗಳಲ್ಲಿ ಪಠ್ಯ ವಿಷಯವಾಗಬೇಕು. ಸ್ತ್ರೀಯರಿಗೆ ದಾಂಪತ್ಯ ವಿಚ್ಛೇದನದ ಹಕ್ಕು ಇರಬೇಕು. ಹೆಣ್ಣು ಮಕ್ಕಳ ವಿವಾಹ ಸಮ್ಮತಿ (Age of Consent)ಯ ವಯಸ್ಸು ೧೮ಕ್ಕೇರಬೇಕು. ಕನ್ನಡ ನಾಡಿನ ಮಹಿಳಾ ಸಮ್ಮೇಳನಗಳು, ಸ್ತ್ರೀಯರ ಸಂಸ್ಥೆಗಳು ಕನ್ನಡ ಹೆಣ್ಣುಮಕ್ಕಳ ಯಾಜಮಾನ್ಯದಲ್ಲಿ ನಡೆಯಬೇಕು. ಅವುಗಳಲ್ಲಿ ಹೊರಗಿನವರ ಕೈವಾಡವಿರುವ ತನಕ ಹೆಚ್ಚು ಫಲವನ್ನು ದೇಶಕ್ಕೆ ಪ್ರಯೋಜನವಾಗುವ ಕೆಲಸವನ್ನು ನಿರೀಕ್ಷಿಸುವುದು ನಿರರ್ಥಕ.

ಸಮ್ಮೇಳನಗಳು ಎಂದಿನವರೆಗೆ ದಿವಾನರ, ಮಂತ್ರಿಗಳ, ದೊಡ್ಡ ಸರ್ಕಾರಿ ಅಧಿಕಾರಿಗಳ, ಯುದ್ಧದಲ್ಲಿ ಬಿ. ಎಂ. ಮಾಡಿ ಶ್ರೀಮಂತರಾದವರ ಸಂಸಾರಗಳಿಗೆ ಗಂಟುಬಿದ್ದಿರುತ್ತವೆಯೋ ಅಂದಿನವರೆಗೆ ಅವುಗಳ ಧೋರಣೆ ಸ್ವಾಭಾವಿಕವಾಗಿ ಪ್ರತಿಗಾಮಿಯಾಗಿರುತ್ತದೆ. ಸ್ತ್ರೀಯರ ಅಭ್ಯುದಯಕ್ಕೆ ಹಗಲಿರುಳೂ ದುಡಿಯುವ ಕರ್ಮಯೋಗಿನಿಯರ ಕೈವಶವಾಗಬೇಕು ಇಂಥ ಸಂಸ್ಥೆಗಳು.

ಇಂಗ್ಲಿಷಿನಲ್ಲಿ ಹೆಣ್ಣು ಶಬ್ದಕ್ಕೆ ಕೆಲವು ಪರ್ಯಾಯ ವಚನಗಳಿವೆ.... Lady, Female ಮತ್ತು Woman. ಲೇಡಿಯೆಂದರೆ ತನಗೂ ಪ್ರಯೋಜನವಿಲ್ಲದ, ಮನೆ, ಸಮಾಜ, ದೇಶಕ್ಕೂ ಪ್ರಯೋಜನವಿಲ್ಲದ ಒಂದು ಬಣ್ಣದ ಗೊಂಬೆ. ಫೀಮೇಲ್‌ಯೆಂದರೆ ಸ್ತ್ರೀಲಿಂಗಕ್ಕೆ ಸೇರಿದ ಕ್ರಿಮಿಕೀಟ, ಪ್ರಾಣಿ ಮೃಗ. ಉಮನ್ ಎಂದರೆ ಆದರ್ಶ ಸ್ತ್ರೀ, ಆದರ್ಶ ತಾಯಿ, ಪತ್ನಿ, ಸೋದರಿ, ನಾಗರಿಕೆ.

ಲೇಡಿ ಕಾನ್‌ಫರೆನ್ಸ್‌ಗಳೂ, ಫೀಮೇಲ್ ಸಮ್ಮೇಳನಗಳೂ ಇನ್ನು ಮುಂದಾದರೂ ಉಮನ್ ಕಾನ್‌ಫರೆನ್ಸ್, ಸಮ್ಮೇಳನಗಳಾಗಲೆಂದೂ ಎಲ್ಲ ಪ್ರಗತಿಶೀಲರ ಬಯಕೆ.

## ೭. ನಮಗೆ ಬೇಕು—ಸಜೀವ ಸಂಗೀತ

ಈಚೆಗೆ ಮದರಾಸಿನಲ್ಲಿ ಎರಡು ಸಂಗೀತ ಹಬ್ಬಗಳು ನೆರವೇರಿದವು. ಒಂದು ಅಕೆಡಮಿಯವರು ಪ್ರತಿ ವರ್ಷವೂ ನಡೆಸುವ ಹಬ್ಬ ; ಇನ್ನೊಂದು ತಮಿಳು ಸಂಗೀತ ಹಬ್ಬ. ತಮಿಳು ಈಸೈ ಸಂಘದವರು ತಮಿಳು ನಾಡಿನಲ್ಲಿ ತಮಿಳು ಭಾಷೆಯಲ್ಲಿಯೇ ಸಂಗೀತ ಕಛೇರಿಗಳಾಗಬೇಕೆಂದು ಈಗ ಏಳು ವರ್ಷಗಳಿಂದ ಚಳುವಳಿ ಹೂಡಿದ್ದಾರೆ. ಇದರ ಪರಿಣಾಮವಾಗಿ ತಮಿಳಿನಲ್ಲಿ ಒಂದು ನವೋದಯ ತಲೆದೋರಿ ಹತ್ತಾರು ಹೊಸ ವಾಗ್ಗೇಯಕಾರರು ಪ್ರಸಿದ್ಧಿಗೆ ಬಂದಿದ್ದಾರೆ. ತಿರುಚನಾಪಳ್ಳಿ ವಿಸರಣಾಲಯದಲ್ಲಿ ಇವರ ಕೃತಿ ಪ್ರಸಾರ ಪ್ರತಿದಿನವೂ ಆಗುತ್ತಿದೆ.

ಸಂಗೀತಕ್ಕೆ ಭಾಷೆ ಯಾವುದಾದರೇನು ? ತೆಲುಗಿನಲ್ಲಿ ಹಾಡಿದರೆ—ಶ್ರಾವ್ಯವಾಗಿ ಹಾಡಿದರೆ—ಅದು ಸಂಗೀತವಾಗುವುದಿಲ್ಲವೇ ? ಪ್ರಾಂತಾಭಿಮಾನದಿಂದ ಸ್ವಭಾಷೆಯನ್ನು ಸಂಗೀತದಲ್ಲಿಯೂ ನುಂದೊತ್ತುವುದು ಕಲೆಯ ಬೆಳವಳಿಗೆಗೆ ವಿಘಾತಕವೆಂದು ಒಂದು ವಾದ.

ಸಂಗೀತದ ಶುದ್ಧ— ಕೇವಲ ಸ್ವರೂಪವನ್ನು ಗಣನೆಗೆ ತೆಗೆದುಕೊಂಡರೆ ಅದಕ್ಕೆ ಯಾವ ಭಾಷೆಯ ನೆರವೂ ಬೇಡ ; ಮಾನವನ ಸುಪ್ತ ರಸವಂತಿಗಳನ್ನು ಸಂಗೀತ ತನ್ನ ನಾದವಿಲಾಸದಿಂದ ಕೆರಳಿಸುತ್ತದೆ ಅವನ ಮನಸ್ಸಿಗೆ ಬೇಕಾದ ಮುದ, ಶಾಂತ, ಕೆಚ್ಚು ಕಾವುಗಳನ್ನು ಭಾಷೆಯ ಮರೆ ಹೋಗದೆ ಸಂಗೀತ ಮಾಡಬಲ್ಲುದು. ಅದಕ್ಕೇ ಸಂಗೀತವನ್ನೇ 'ಪೂರ್ಣ ಕಲೆ' ಎಂದು ಬಲ್ಲವರು ಕರೆಯುವುದು.

ಆದರೆ ಇಂಥ ಸಂಗೀತ ಎಷ್ಟು ಜನಕ್ಕೆ ಅರ್ಥವಾಗಬಲ್ಲುದು ? ಪರಿಪೂರ್ಣ ಕಲೆಯಾದ ಸಂಗೀತ ಮಾನವನನ್ನು ಪರಿಪೂರ್ಣತೆಗೊಯ್ಯಬೇಕಾದುದು ಅಗತ್ಯ. ಅವನ ಸಂಸ್ಕೃತಿಯ ಮಟ್ಟವನ್ನು ಮೇಲಕ್ಕೆತ್ತಬೇಕಾದರೆ, ಅವನ ರುಕ್ಷ ಮನಸ್ಸನ್ನು ತಿದ್ದಬೇಕಾದರೆ ಅವನಿಗರ್ಥವಾಗುವ ಭಾಷೆಯನ್ನು ಅದು ಬಳಸಿಕೊಳ್ಳಬೇಕು. ತಾನ್‌ಸೇನ್, ತ್ಯಾಗರಾಜ, ಪುರಂದರದಾಸ, ಬೀಥೋವನ್, ಬಾಕ್, ಚೊಪಿನ್ ಮೊದಲಾದವರು ಈ ತತ್ವವನ್ನರಿತೇ ಭಾಷೆಯ ನೆರವು ಪಡೆದರು. ಜನತೆಯಲ್ಲಿ ಚೇತನವನ್ನು

ಮೊಳಗಿಸಬೇಕಾದರೆ ಸಂಗೀತ ಆಯಾ ದೇಶಭಾಷೆಯನ್ನು ಅನುಸರಿಸ ಬೇಕಾದುದವಶ್ಯಕ.

ಇಂಥ ಉದ್ದೇಶದಿಂದಲೇ ತಮಿಳು ಈಸ್ಸೈ ಚಳುವಳಿ ಹುಟ್ಟಿರುವುದು. ತಮಿಳು ನಾಡಿನ ಹಲವು ವಾಗ್ಗೇಯಕಾರರು, ಸಂಗೀತ ವಿದ್ವಾಂಸರ ಸಂಕು ಚಿತ ಮನಸ್ಸು ಹಾಗೂ ಅನಾದರಗಳಿಂದ ಕೊರಗುತ್ತಿದ್ದರು. ಅವರ ಕೃತಿಲಾಭ ಜನತೆಗಾಗಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಈಸ್ಸೈ ಚಳುವಳಿ ಕೆಲಸಮಾಡಿದೆ.

ಈಸ್ಸೈ ಚಳುವಳಿಯು ಮೇಲೆ ಎರಡು ಪ್ರಬಲ ಆಪಾದನೆಗಳು ಹೊರಸ ಲ್ಪಟ್ಟವು. ೧. ಅದು ಬ್ರಾಹ್ಮಣೇತರ ಚಳುವಳಿ ೨. ಅದು ತ್ಯಾಗರಾಜನ ವಿರುದ್ಧ ಹೊರಟಿರುವ ಚಳುವಳಿ. ಪ್ರತಿಯೊಂದು ಪ್ರಾಗತಿಕ ಚಳುವಳಿ ಯನ್ನೂ ಕೋಮುವಾರು ಕನ್ನಡಕ ಹಾಕಿಕೊಂಡು ನೋಡುವವರಿಗೆ ಚಿಕಿತ್ಸೆಯೇ ಇಲ್ಲ. ಈಸ್ಸೈ ಚಳುವಳಿಗೆ ಬೆಂಬಲ ಕೊಟ್ಟಿರುವವರು ಕೇವಲ ಬ್ರಾಹ್ಮಣೇತರರಲ್ಲ—ಬ್ರಾಹ್ಮಣರೂ ಆಗಿದ್ದಾರೆ. ತಮಿಳು ಸಂಸ್ಕೃತಿಯು ರಕ್ಷಣೆ, ಘೋಷಣೆ, ಬ್ರಾಹ್ಮಣೇತರರಿಬ್ಬರ ಕರ್ತವ್ಯವಾಗಿದೆ. ಹೊಸದಾಗಿ ಕೃತಿಗಳನ್ನು ರಸಿ ಸಂಗೀತದಲ್ಲಿ ವಿವಿಧ ಪ್ರಯೋಗ ನಡೆಸುತ್ತಿರುವ ವಿದ್ವನ್ಮಣಿ ಗಳನ್ನು ಪ್ರೋತ್ಸಾಹಿಸುವುದು ತ್ಯಾಗರಾಜನ ವಿರುದ್ಧ ಚಳುವಳಿಯಾದರೆ ನಾಡಿನ ಸಂಸ್ಕೃತಿ ನಿಂತಲ್ಲಿ ನಿಂತು ಕೊಳಚೆ ನೀರಿನಂತೆ ನಾರಬೇಕಾಗು ತ್ತದೆ. ಅಂಥ ದುರ್ದೆಶೆಯಿಂದ ತಮಿಳು ನಾಡನ್ನು ಪಾರು ಮಾಡಬೇಕೆಂದು ಈಸ್ಸೈಗಾರರ ಉದ್ದೇಶ.

ಕನ್ನಡನಾಡಿನಲ್ಲಿಯೂ ಇಂಥ ನವೋದಯವಾಗಬೇಕು. ಕನ್ನಡ ಜನತೆಯ ಭಾಷೆಯಲ್ಲಿ ಅವರ ಸಂಗೀತ ಅಳವಡಬೇಕೆಂಬ ವಾದವನ್ನು ನಾವು ಹೂಡಿದಾಗ ನಮ್ಮಮೇಲೆ ಬಂದ ಆಕ್ಷೇಪಣೆಗಳಾದರೂ ಇವೇ.

ಇಂದಿಗೂ ಹಿಂದೂಸ್ಥಾನದ ಪ್ರಧಾನ ಸಂಗೀತ ಸಂಪ್ರದಾಯಗಳಲ್ಲಿ ಒಂದಾದ ದಾಕ್ಷಿಣಾತ್ಯ ಪದ್ಧತಿಯನ್ನು 'ಕರ್ನಾಟಕ ಪದ್ಧತಿ' ಎಂದು ಕರೆಯುತ್ತಾರೆ. ಈ ಸಂಪ್ರದಾಯವನ್ನು ಬೆಳಸಿದವರು ಕನ್ನಡಿಗರು. ಆದರೆ, ಕರ್ನಾಟಕ ಪದ್ಧತಿಯೆಂದರೆ ತ್ಯಾಗರಾಜನ ಕೀರ್ತನೆಗಳು, ತಮಿಳು

ಗಾಯಕರು. ಕರ್ನಾಟಕ ಪದ್ಧತಿಯಲ್ಲಿ 'ಕರ್ನಾಟಕತನ' ಎಲ್ಲಿ ಉಳಿದಿದೆ ಎಂದು ಮತಿವಂತರು ಆಲೋಚಿಸಬೇಕು.

ಹರಿಹರದಾಚೆಯಿರುವ ಕನ್ನಡನಾಡಿನ ಸಂಗೀತ ಉತ್ತರಾದಿ ಪದ್ಧತಿಗೆ ಮೀಸಲು. ಅಲ್ಲಿ ಗಾಯಕರು ಸದಾರಂಗ, ತಾನ್‌ಸೇನ್ ಇವರ ಚೀಸು ಗಳನ್ನೂ ಕಬೀರ, ಮೀರಾ, ತುಲಸೀದಾಸ ಇವರ ಹಾಡುಗಳನ್ನೂ ಹಿಂದೀ, ಉರ್ದುಭಾಷೆಗಳಲ್ಲಿ ಹಾಡುತ್ತಾರೆ. ಹರಿಹರದೀಚೆ ಪ್ರಸಾರ ದಲ್ಲಿರುವ ಸಂಗೀತ ತ್ಯಾಗರಾಜ, ದೀಕ್ಷಿತ, ಶಾಮಶಾಸ್ತ್ರಿ ಇವರು ಕೀರ್ತನೆ ಗಳಿಗೆ ಮೀಸಲು. ಎರಡು ಕಡೆಯೂ ಕನ್ನಡ ಕೀರ್ತನೆಗಳನ್ನು ಪರಂಪ ರಾಗತವಾಗಿ ಸಂಗೀತ ವಿದ್ವಾಂಸರು ತುಳಿಯುತ್ತ ಬಂದಿದ್ದಾರೆ. ಕಛೇರಿ, ಬೈಠಕ್ಕುಗಳಿಗೆ ಹೋಗುವ ಶೇಕಡ ೯೯ ಜನಕ್ಕೆ ಕೀರ್ತನೆ ಚೀಸುಗಳ ಅರ್ಥ ಮನವರಿಕೆಯಾಗುವುದಿಲ್ಲ ಒಂದು ಕುರುಡದಾರಿ ಹಿಡಿದು ನಡೆಯುತ್ತಿದೆ ನಮ್ಮ ನಾಡು.

ಕನ್ನಡನಾಡಿನ ದೃಷ್ಟಿಯಲ್ಲಿ ಮಾತ್ರವೇ ಅಲ್ಲ—ಭಾರತೀಯ ಸಂಸ್ಕೃತಿಯ ದೃಷ್ಟಿಯಿಂದಲೂ ಕನ್ನಡ ಕೀರ್ತನೆಗಳು ಪ್ರಸಾರಕ್ಕೆ ಬರಬೇಕು. ವಾಕ್ಚಿತ್ರಗಳ ಅವಾಂತರದಿಂದ ಶಾಸ್ತ್ರೀಯವೂ ಕಲಾಪೂರ್ಣವೂ ಆದ ಸಂಗೀತ ಮೂಲೆಗೆ ಬೀಳುತ್ತಿದೆ. ಮದುವೆ ಮನೆಯನ್ನು ಕೂಡ ಹಿಂದೀ ಚಿತ್ರಗಳ 'ಸಜನೀ ಸಾಜನ್' ಹಾಡುಗಳು ಆಕ್ರಮಿಸಿವೆ. ದಿನದಿನಕ್ಕೆ ಜನತೆಯಂತೂ ಉತ್ತಮ ಕಲೆಯ ಬಗ್ಗೆ ಇಂತು ನಿರಸನಿಗಳಾಗುತ್ತ ಬಂದರೆ ಉತ್ತಮ ಕಲೆ ನಾಮಾವಶೇಷವಾಗುವುದರಲ್ಲಿ ಸಂದೇಹವಿಲ್ಲ.

ಕನ್ನಡ ನಾಡಿನ ಸಂಗೀತದ ಪರಿಸ್ಥಿತಿ ಸ್ವಲ್ಪವೂ ತೃಪ್ತಿಕರವಾಗಿಲ್ಲ. ಸಂಗೀತ ವಿದ್ವಾಂಸರು, ಸಂಗೀತ ಸಭೆಗಳು, ಕನ್ನಡನಾಡಿನ 'ಪಂಚಮ ದಳ'ಗಳಾಗಿವೆ. ಕನ್ನಡನಾಡಿನ ಹಣ ಹೊರಗಿನವರ ಬೊಕ್ಕಸ ತುಂಬಲು ಹುರಿದುಹೋಗುತ್ತಿದೆ. ಕಲಾಭಿಮಾನಿಗಳೆಂದು ಸೋಗು ಹಾಕುವವರು ತ್ಯಾಗರಾಜ ಸಾಹಿತ್ಯದ ಪ್ರಸಾರಕರಾಗಿದ್ದಾರೆ. ಅವರ ಕಣ್ಣಲ್ಲಿ ಕನ್ನಡದ ಹೆಸರೆತ್ತುವುದು ಪರಮದ್ರೋಹ.

ಕನ್ನಡ ನಾಡಿನ ಸಾಹಿತಿಗಳು, ಸಂಗೀತಗಾರರು, ಸಂಗೀತ ಸಂಸ್ಥೆಗಳ ಮೇಲೆ ದೊಡ್ಡ ಜವಾಬ್ದಾರಿ ಬಿದ್ದಿದೆ. ಅವರು ಸಂಘಟಿತರಾಗಿ ಕನ್ನಡ

ಸಂಗೀತ ಸಮ್ಮೇಳನ ಕರೆಯಬೇಕು. ಕನ್ನಡ ಸಂಗೀತಜ್ಞರ ಒಂದು ಪರಿಷತ್ತನ್ನು ಸ್ಥಾಪಿಸಬೇಕು. ಕನ್ನಡ ಜನತೆಯ ಅಭಿರುಚಿಯನ್ನು ಸುಧಾರಿಸುವ ಕನ್ನಡ ಕೀರ್ತನೆಗಳನ್ನು ಊರು ಊರು ಹಳ್ಳಿ ಹಳ್ಳಿಗಳಲ್ಲಿ ಹಾಡಿ ಕನ್ನಡದ ದೀಧಿತಿಯನ್ನು ಬೆಳಗಿಸಬೇಕು.

ಕನ್ನಡದಲ್ಲಿ ತ್ಯಾಗರಾಜನಿಗೆ ಆರು ಶತಮಾನ ಪೂರ್ವದಿಂದ ಅಪೂರ್ವ ಹಾಡುಗಬ್ಬ ಪರಂಪರೆ ಬೆಳೆಯಿತು ಲಕ್ಷಾಂತರ ಹಾಡುಗಬ್ಬಗಳು ಪುಸ್ತಕಗಳಲ್ಲಿ ಅಡಕವಾಗಿವೆ. ಪ್ರಾಚೀನ ಸಂಸ್ಕೃತಿಯ ಪರಿಪೋಷಣೆಯ ದೃಷ್ಟಿಯಿಂದ ಅವುಗಳನ್ನು ಪುನರುಜ್ಜೀವನಗೊಳಿಸಬೇಕು.

ನಮ್ಮ ಇಂದಿನ ಜೀವನಕ್ಕೆ ತ್ಯಾಗರಾಜ, ಪುರಂದರರ ಕೀರ್ತನೆಗಳು ಸಾಕೇ? ಖಂಡಿತ ಸಾಲದು. ಅವರ ದಾಸೋಹಂಭಾವದ ದೈವಾರಾಧನೆ ನಮಗೆ ಸಲ್ಲದು. ಇಂದು ನಾವು ಪೂಜಿಸಬೇಕಾದುದು ಕಾಣಿಸದ ದೇವರನ್ನಲ್ಲ; ಕಾಣುವ ದೇವರನ್ನು. ನಮ್ಮ ಪೂಜೆ ಸಲ್ಲಬೇಕಾದುದು ಆಕಾಶದ ಹಿಂದೆ ಅಡಗಿ ಕುಳಿತಿರುವ ಹಿರಣ್ಯಗರ್ಭನಿಗಲ್ಲ; ದಾರಿದ್ರ್ಯದ ದವಡೆಯಲ್ಲಿ ಸಿಕ್ಕಿರುವ ದಲಿತ, ದೀನ, ದರಿದ್ರ ಜೀವಿಗೆ. ನಮ್ಮ ಸಂಗೀತದ ಗುರಿ ನಾಲ್ಕು ಜನ ವಿರಾಮ ವೇತನಿಗಳನ್ನು, ಶ್ರೀಮಂತರನ್ನು ಆಲಸಿಗಳನ್ನು ಸಂತೋಷಪಡಿಸುವುದಲ್ಲ; ಸಹಸ್ರಾರು ಜನ ನಿರಾಶ್ರಿತ ಬಾಳ ಸೇನಾನಿಗಳನ್ನು. ಇಂದು ಆಲಸಿಗಳ ಹುಕ್ಕಾ ಆಗಿರುವ ಸಂಗೀತ ಶ್ರಮಜೀವಿಗಳ ಕರವಾಳವಾಗಬೇಕು.

———

# ೮. ಕನ್ನಡ ಸಂಗೀತ ಕಛೇರಿ

ಕಳೆದ ಮಹಾಯುದ್ಧ ಭಾರತವರ್ಷದ ಹಾಗೂ ಕರ್ನಾಟಕದ ಮೇಲೆ ಬಗೆಬಗೆಯ ಪರಿಣಾಮವನ್ನು ಬೀರಿತು. ದೇಹಧಾರಣೆಗೆ ಅವಶ್ಯಕವಾದ ಆಹಾರ ಸಾಮಗ್ರಿಗಳ ಏರುಬೆಲೆ ಜನತೆಯ ಆರ್ಥಿಕ ಜೀವನದಲ್ಲಿ ಒಂದು ಕ್ರಾಂತಿಯನ್ನುಂಟುಮಾಡಿತು. ಜೀವನದ ಮಟ್ಟ ಮೇಲಕ್ಕೆ ಹೋಯಿತು. ಬಂದುದರಲ್ಲಿಯೆ ತೃಪ್ತಿಪಟ್ಟುಕೊಂಡು ಕಾರ್ಪಣ್ಯ ಜೀವನ ಮಾಡಿದರಾಯಿ ತೆನ್ನುತ್ತಿದ್ದ ಜನ ಹೆಚ್ಚು ಗಳಿಸುವುದಕ್ಕೂ ವ್ಯಯಮಾಡುವುದಕ್ಕೂ ಸಿದ್ಧ ರಾದರು. ಹಣಕ್ಕಿದ್ದ ಸರ್ವಸ್ವಾಮ್ಯ ಸಡಲಿ, ಜನತೆಯ ಲಕ್ಷ್ಯ ಬೇರೆ ಬೇರ ಕಡೆ ಹೋಗಲಾರಂಭವಾಯಿತು.

ಸಂಗೀತ ಪ್ರಪಂಚದ ಮೇಲೂ ಯುದ್ಧದ ಆರ್ಥಿಕ ಪರಿಣಾಮ ತನ್ನ ಪ್ರಭಾವವನ್ನು ಬೀರಿತು. ಆರೆಂಟು ವರ್ಷಗಳ ಹಿಂದೆ ದೊಡ್ಡ ದೊಡ್ಡ ವಿದ್ವಾಂಸರು ನಿರ್ಜನ ಸಭಾ ಮಂದಿರಗಳಲ್ಲಿ ಹಾಡಿ ಹೋಗುತ್ತಿದ್ದರು. ಈಗ ಅವರ ಕಛೇರಿಗಳಿಗೆ ಬರುವ ಜನರನ್ನು ಕೂಡಿಸಲು ತಕ್ಕುದಾದ ಸಭಾ ಮಂದಿರವೇ ಇಲ್ಲದಾಗಿದೆ. ಹಿಂದೆ ನೂರು ರೂಪಾಯಿಯ ಘನ ದರ್ಜೆ ಯಲ್ಲಿದ್ದ ಸಂಗೀತ ವಿದ್ವಾಂಸ, ವಿದುಷಿಯರು ಈಗ ಸಾವಿರಾರು ರೂಪಾಯಿ ಗಳನ್ನು ಬೇಡುತ್ತಾರೆ. ಬೆಂಗಳೂರಿನಲ್ಲಿ ನಾಲ್ಕು, ಮೈಸೂರಿನಲ್ಲಿ ಎರಡು, ಭದ್ರಾವತಿ, ಶಿವಮೊಗ್ಗೆ, ಕೋಲಾರಗಳಲ್ಲಿ ಒಂದೊಂದು ಗಾಯನ ಸಮಾಜಗಳು ಹೊಸದಾಗಿ ಹುಟ್ಟಿಕೊಂಡಿವೆ.

ಇದನ್ನು ನೋಡಿದರೆ ಜನತೆಯಲ್ಲಿ ಸಂಗೀತದ ಬಗ್ಗೆ ಹೆಚ್ಚಿನ ಆದರ ಗೌರವಗಳು ಹುಟ್ಟಿದೆಯೆಂದು ಸ್ವಾಭಾವಿಕವಾಗಿ ಭಾವಿಸಬೇಕಾಗುತ್ತದೆ. ಆದರೆ ಆ ಸಿದ್ಧಾಂತಕ್ಕೆ ಬರಲು ನಾವು ಸಿದ್ಧರಾಗಿಲ್ಲ. ಕೈಯಲ್ಲಿ ಓಡಿಯಾಡುವ ಬಿಡಿ ಹಣದ ಕೆಲಭಾಗವನ್ನು ಜನ ಸಂಗೀತಕ್ಕಾಗಿ ವ್ಯಯಮಾಡುತ್ತಾರೆಂದ ಮಾತ್ರಕ್ಕೆ ಅವರ ಅಭಿರುಚಿ ಸುಧಾರಿಸಿದೆಯೆಂದು ಭಾವಿಸಲು ಸಾಧ್ಯವಿಲ್ಲ. ಅವರ ಅಭಿರುಚಿಯನ್ನು ಸುಧಾರಿಸುವ ಹೊಣೆಹೊತ್ತ ಸಂಗೀತ ಸಮಾಜಗಳು ತಮ್ಮ ಹೊಣೆಗಾರಿಕೆಯನ್ನು ಯುಕ್ತರೀತಿಯಲ್ಲಿ ನಿರ್ವಹಿಸುವ ಗೋಜಿಗೆ ಹೋಗಿಲ್ಲ.

ಈ ಗಾಯನ ಸಮಾಜಗಳನ್ನು ನಡೆಸುವ ಜನ ಕನ್ನಡಿಗರು. ಅವರ ಸಾಧನ, ಸಾಹಸಗಳಿಂದ ಕನ್ನಡ ಕಲಾವಿದರ ಸ್ಥಿತಿಗತಿಗಳು ಸುಧಾರಿಸ ಬೇಕಾಗಿತ್ತು. ಕಾಲ ಒದಗಿಸಿದ ಅನುಕೂಲ ಪರಿಸ್ಥಿತಿಯಿಂದ ಕನ್ನಡ ಸಂಗೀತ ವಿದ್ವಾಂಸರಿಗೆ ಅಪೂರ್ವ ಪ್ರೋತ್ಸಾಹ ದೊರೆಯಬೇಕಾಗಿತ್ತು. ಆದರೆ ಆಗಿರುವುದೇನು ? ಈ ಗಾಯನ ಸಮಾಜಗಳು ವ್ಯಾಪಾರ ಕ್ಷೇತ್ರ ಗಳಾಗಿ ಪರಿಣಮಿಸಿವೆ. ಹೊರಗಿನಿಂದ ಸಂಗೀತಗಾರರನ್ನು ಬರಮಾಡಿ ಕೊಂಡು, ಇಲ್ಲಿ ವಿಶೇಷ ಪ್ರಕಟನೆಗಳಿಂದ ಅವರ ಹೆಸರನ್ನು ಮೇಲಕ್ಕೆತ್ತಿ ಹಲವು ವಿಧದಲ್ಲಿ ಹಣ ಸಂಗ್ರಹಿಸಿ 'ಅವರ ಮಡಿಲು ತುಂಬು'ವ ಕೆಲಸವನ್ನು ಗಾಯನ ಸಮಾಜಗಳು ನಿರ್ವಹಿಸುತ್ತಿವೆ. ಸಮಾಜಗಳ ವ್ಯವಸ್ಥಾಪಕರು, ಇತರ ಅಧಿಕಾರಿಗಳು ತಾವೇ ಕನ್ನಡಿಗರಾದರೂ ಮೈಸೂರಿನವರಿಗೆ ಸಂಗೀತ ಬರುವುದಿಲ್ಲ ಎನ್ನುವ ಅಪಪ್ರಚಾರವನ್ನು ಕೈಗೊಂಡಿದ್ದಾರೆ. ಮೈಸೂರಿ ನಲ್ಲಿರುವ ಗಾಯನ ಸಮಾಜದ ಅಧಿಕಾರಿಗಳ ಪ್ರಚಾರ ಹಾಗೂ ದಕ್ಷಿಣದಲ್ಲಿ ಕೀರ್ತಿಗಳಿಸಿರುವ ಕೆಲವು ಮೈಸೂರು ಸಂಗೀತ ವಿದ್ವಾಂಸರ ಅಪಪ್ರಚಾರ ಗಳಿಂದ ಮೈಸೂರು ಸಂಗೀತ ವಿದ್ವಾಂಸರು ತಲೆ ಎತ್ತದ ಹಾಗಾಗಿದೆ. ಸಂಗೀತ ವಿದ್ವಾನ್ ಡಿ. ಸುಬ್ಬರಾಮಯ್ಯನವರು ಸ್ಥಾಪಿಸಿರುವ 'ಮೈಸೂರು ಸಂಗೀತ ಸಭೆ'ಯೊಂದೇ ತಕ್ಕ ಮಟ್ಟಿಗೆ ಮೈಸೂರು ಕಲಾವಿದರಿಗೆ ನೆರವು ನೀಡುತ್ತಿರುವುದು.

ಹೊರಗಿನ ಸಂಗೀತಗಾರರ ಕರ್ಕಶ ಸಂಗೀತವನ್ನು ಕೇಳಿ ಕೇಳಿ ನಾವು ಬೇಸತ್ತಿದ್ದೇವೆ. ಕಣಿವೆ ಕೆಳಗಿನ ಸಂಗೀತಗಾರರೆಂದರೆ ಕಲಾಪರಮೇಷ್ಠಿ ಗಳೆನ್ನುವ ಭಾವನೆ ಶುದ್ಧ ತಪ್ಪು ಭಾವನೆ. ಲಲಿತಕಲೆಗವಶ್ಯಕವಾದ ನಯ, ಮಾರ್ದವತೆ ಅವರಲ್ಲಿ ಶೂನ್ಯ. ಕೀರ್ತನೆಗಳ ಸಾಹಿತ್ಯಕ್ಕೂ ಅವರ ಹಾಡಿಕೆಗೂ ಸಂಬಂಧವಿಲ್ಲ. ಸಾಹಿತ್ಯ ಸಂಹಾರ ಮಾಡದೆ ಕೀರ್ತನೆ ಹಾಡುವುದನ್ನು ಇಂದಿಗೂ ಅವರು ಮೈಸೂರು ಸಂಗೀತಗಾರರಿಂದ ಕಲಿಯ ಬೇಕಾಗಿದೆ.

ಮೈಸೂರಿನ ಮೇಲೆ ಅಪಪ್ರಚಾರಮಾಡುವ ಎಲ್ಲ ಮಹನೀಯರಿಗೂ ನಮ್ಮದೊಂದು ಅರಿಕೆ. ಹೊರಗಿನ ಹಾಡುಗಾರರಿಗೆ ಮೈಸೂರಿನ ವಿದ್ವಾಂಸರ ಪಕ್ಕವಾದ್ಯ, ಮೈಸೂರಿನ ಹಾಡುಗಾರರಿಗೆ ಹೊರಗಿನವರ ಪಕ್ಕವಾದ್ಯ—

ಹೀಗೆ ಅಳವಡಿಸಿ ಕೆಲವು ಸಂಗೀತ ಕಛೇರಿಗಳು ಏರ್ಪಾಡಾಗಲಿ. ಹಾಗಾದಾಗ ಹೊರಗಿನ ಹಾಗೂ ಮೈಸೂರಿನ ವಿದ್ವಾಂಸರ ಯೋಗ್ಯತೆಯನ್ನು ಪರೀಕ್ಷಿಸುವ ಸುಸಂಧಿ ರಸಿಕರಿಗೊದಗುತ್ತದೆ. ವ್ಯಾಪಾರ ದೃಷ್ಟಿಯುಳ್ಳ ಸಂಗೀತ ಸಮಾಜಗಳೇ ಈ ಕೆಲಸವನ್ನು ನಿರ್ವಹಿಸಬಹುದು.

ಇಡೀ ದಕ್ಷಿಣ ಹಿಂದೂಸ್ಥಾನದಲ್ಲಿ ವ್ಯಾಪಿಸಿರುವ ಸಂಗೀತ ಪದ್ಧತಿ 'ಕರ್ನಾಟಕ ಸಂಗೀತ ಪದ್ಧತಿ.' ಈ ಹೆಸರನ್ನು ಕೂಡ ತೊಡೆದು ಹಾಕುವ ಪ್ರಯತ್ನ ಅವ್ಯಾಹತವಾಗಿ ಸಾಗಿದೆ. ಕರ್ನಾಟಕ ಪದ್ಧತಿ ಇಂದು ದಕ್ಷಿಣಾದಿ ಪದ್ಧತಿ ಆಗುತ್ತಿದೆ. ಕನ್ನಡ ಸಂಗೀತ ಶಾಸ್ತ್ರಜ್ಞರು, ವಿದ್ವಾಂಸರು ತಮ್ಮ ಆಲಸ್ಯವನ್ನು ಬದಿಗೊತ್ತಿ ಈ ಬಗ್ಗೆ ವಿಶೇಷ ಚಳುವಳಿ ಹೂಡಬೇಕು. ಹುಬ್ಬಳ್ಳಿಯ ಪ್ರಸಿದ್ಧ ವಿದ್ವಾಂಸರಾದ ಶ್ರೀ ಹುಲುಗೂರು ಕೃಷ್ಣಾಚಾರ್ಯರು ೧೯೩೮ರಲ್ಲಿಯೇ ಈ ವಿಷಯವನ್ನು ಪ್ರಸ್ತಾಪಿಸಿ 'ಜಯಕರ್ನಾಟಕ'ದಲ್ಲಿ ಕೆಲವು ಲೇಖನಗಳನ್ನು ಬರೆದರು. ಮದರಾಸಿನ 'ಮ್ಯೂಸಿಕ್ ಅಕೆಡಮಿ'ಯ ಸಭೆಗಳಿಗೆ ಹೋಗಿ ಕರ್ನಾಟಕದ ಕೀರ್ತಿಯನ್ನು ಹಿಡಿದೆತ್ತಿ ಬಂದರು. ಅವರ ಮೇಲ್ಪಂಕ್ತಿಯನ್ನು ಇತರ ವಿದ್ವಾಂಸರು ಅನುಸರಿಸಬೇಕಾಗಿತ್ತು. ಸ್ವಭಾವತಃ ಆಲಸಿಗಳಾದ ಮೈಸೂರು ಸಂಗೀತ ವಿದ್ವಾಂಸರಿಗೆ ಇಂತಹ ಮುಖ್ಯ ವಿಷಯವೂ ಗೌಣವಾಯಿತು.

'ಕರ್ನಾಟಕ ಸಂಗೀತ'ದ ಹೆಸರನ್ನು ಸ್ಥಾಪಿಸಿ, ಉಳಿಸಿಕೊಳ್ಳುವ ಕೆಲಸವಲ್ಲದೆ, ಕರ್ನಾಟಕ ಸಂಗೀತವನ್ನು ನಿಜವಾಗಿಯೂ ಕರ್ನಾಟಕ ಸಂಗೀತ ಮಾಡುವ ಕೆಲಸ ಸಂಗೀತಗಾರರಿಗೆ ಕಾದಿದೆ. ಈ ವಿಷಯವನ್ನು ಪ್ರಸ್ತಾಪಿಸುತ್ತಾ 'ಕರ್ನಾಟಕ ಕಲಾವಿದರು' ಗ್ರಂಥದ ಮುನ್ನುಡಿಯಲ್ಲಿ ನಾನು ಹೇಳಿರುವ ಮಾತುಗಳನ್ನು ಗಮನಿಸಬೇಕು.

"ಕನ್ನಡ ಸಂಗೀತ ಕನ್ನಡ ಭಾಷೆಯಲ್ಲಿ ಆಗಬೇಕು—ಇದೇ ಕನ್ನಡ ನಾಡಿನಲ್ಲಿ ಪ್ರಸಾರದಲ್ಲಿರಬೇಕಾದ ಸಂಗೀತ ಎಂಬುದು ನಮ್ಮ ನಿರ್ದಿಷ್ಟ ಅಭಿಪ್ರಾಯ. ಆದರೆ ನಮ್ಮ ಸಂಗೀತ ಬರೀ ಭಕ್ತಿಬೋಧನೆಯಾಗಿರಬಾರದು. ತ್ಯಾಗರಾಜ ಕೀರ್ತನೆಗಳ ಈ 'ಏಕತಾನ'ವನ್ನು ಕೇಳಿ ನಾವು ಬೇಸತ್ತಿದ್ದೇವೆ. ನಮ್ಮ ಜನಾಂಗದ ಮುನ್ನಡೆಗೆ ನೆರವಾಗುವ ಭಾವರಸಗಳು ಸಂಗೀತದಲ್ಲಿ ಆವಿರ್ಭೂತವಾಗಬೇಕು. ಭಕ್ತಿಯೊಂದೇ ಸಾಲದು—ಬೇಕು ನಮಗೆ ವೀರ

ಶೃಂಗಾರ ಅದ್ಭುತ ರಸಗಳು. ಕಛೇರಿಗೆ ಬಂದವರು ಭಕ್ತಿ ಗೀತೆಗಳನ್ನು ಕೇಳಿ ಅಪು ತಿಂದವರಂತೆ ಹೋದರೆ ಸಾಲದು. ಅವರಲ್ಲಿ ನವಜೀವನದ ಕಲರವ ಸಂಗೀತದಿಂದ ಹುಟ್ಟಬೇಕು."

ಕನ್ನಡ ಸಂಗೀತ ಕಛೇರಿಗಳ ರೂಪರೇಷೆಯ ಒಂದು ಚಿತ್ರವನ್ನು ಎಳೆದು ನೋಡುವ. ಸಾಮಾನ್ಯವಾಗಿ ಸಂಗೀತ ಕಛೇರಿಗಳ ಅವಧಿ ೩ ಗಂಟೆ (ಅಥವಾ ೪). ಈಗಿನ ಪದ್ಧತಿಯಂತೆ ಕೀರ್ತನೆಗಳಿಗೆ ಅರ್ಧವೇಳೆ ವಿನಿಾಸಲು, ಉಳಿದರ್ಧದಲ್ಲಿ ರಾಗ, ಪಲ್ಲವಿ, ತಿರುಪ್ಪುಗಳ್, ಹಿಂದೂಸ್ತಾನಿ, ದೇವರ ನಾಮ ಬರುತ್ತದೆ. ವೈವಿಧ್ಯವಿರಬೇಕೆಂಬ ಆಕಾಂಕ್ಷೆಯಿದೆಯಾದರೂ ೧೦–೨೦ ಕೀರ್ತನೆಗಳ ಹೊಡೆದಾಟದಲ್ಲಿ ಉಳಿದವುಗಳಿಗೆ ವೇಳೆ ಸಿಕ್ಕುವುದಿಲ್ಲ.

ಕನ್ನಡ ಸಂಗೀತ ಕಛೇರಿಗಳಲ್ಲಿ ಮೊದಲು ಒಂದು ಘಂಟೆಕಾಲ ಕೀರ್ತನೆಗಳ ಹಾಡಿಕೆ—ಹರಿದಾಸರು, ಶಿವಶರಣರು, ಆಧುನಿಕ ಕೀರ್ತನಕಾರರು ಇವರ ಕೃತಿಗಳಿಂದ ಆಯ್ದುಕೊಳ್ಳಬಹುದು. ಒಂದು ಗಂಟೆ ಅವಧಿಯಲ್ಲಿ ೪–೫ ಕೀರ್ತನೆಗಳನ್ನು ಹಾಡಬಹುದು. ಎರಡನೆಯ ಗಂಟೆ ರಾಗ–ಪಲ್ಲವಿಗಳಿಗೆ ವಿನಿಾಸಲಿಡಬೇಕು. ವಿದ್ವಾಂಸರ ಪಾಂಡಿತ್ಯಪ್ರದರ್ಶನಕ್ಕೆ ಇದರಿಂದ ಅವಕಾಶವಾಗುತ್ತದೆ. ಮೂರನೆಯ ಗಂಟೆಯಲ್ಲಿ ರಾಷ್ಟ್ರಗೀತೆಗಳು (ಸೌ. ರಾಜಮ್ಮನವರು, ಶ್ರೀ ವಿ. ಸೀತಾರಾಮಯ್ಯ, ಶ್ರೀ ಬೇಂದ್ರೆ, ಶ್ರೀ ಕೆ. ವಿ. ಪುಟ್ಟಪ್ಪ ಇವರ ಕೃತಿಗಳಿಂದ) ಜಾವಡಿಗಳು, ಲಾವಣಿಯ ಒಂದು ಭಾಗ, ಷಟ್ಪದಿ, ಚಂಪೂ ಕಾವ್ಯಗಳಿಂದ ಕೆಲ ಭಾಗಗಳು ಹಾಡಬಹುದು.

ಈ ನಿಯೋಜನೆಯಿಂದ ಪ್ರಾಚೀನ, ಅರ್ವಾಚೀನ ಸಂಪ್ರದಾಯಗಳೆರಡನ್ನೂ ಆದರಿಸಲು ಸಾಧ್ಯವಾಗುತ್ತದೆ. ಭಕ್ತಿಯನ್ನು ಬಿಡದೆ, ಆದರೆ ಅದನ್ನೇ ಬೆಳಸಿಕೊಂಡು ಬೇಸರಿಸದಂತೆ ಕಛೇರಿ ನಡೆಸಲು ವಿಚಾರ ಮಾಡಲಾಗಿದೆ.

ಕನ್ನಡದಲ್ಲಿಯೇ ಕಛೇರಿಗಳಾಗಬೇಕೆಂದು, ಕನ್ನಡ ವಿದ್ವಾಂಸರು ಉಳಿದ ಭಾಷೆಗಳ ಮೋಹದಿಂದ ವಿಮುಕ್ತರಾಗಬೇಕೆಂದು ಜನ ಚಳುವಳಿ ಹೂಡಬೇಕು. ಕನ್ನಡ ಸಂಸ್ಕೃತಿಯನ್ನು ಹೀಗಳೆದು, ಪರರೆಂಜಲಿಗೆ

ಕೈಯಾನುವ ಸಂಗೀತ ವಿದ್ವಾಂಸರು, ಸಮಾಜಗಳಿಗೆ ಕನ್ನಡ ಜನ ಬಹಿಷ್ಕಾರ ಹಾಕಬೇಕು.

ಸ್ವತಂತ್ರ ಕರ್ನಾಟಕ ಸಾಧನೆಗೆ ಕನ್ನಡ ಸಂಗೀತ ನಿಯೋಜನೆಯೂ ಉಪಷ್ಟಂಭಕವೆಂಬಂಶವನ್ನು ನಮ್ಮ ಜನ ಮರೆಯಬಾರದು.

———

## ೯. ಕರ್ನಾಟಕದಲ್ಲಿ ರಾಷ್ಟ್ರೀಯ ರಂಗಭೂಮಿ

"Theatre should be a factory of thought, a prompter of conscience, an elucidator of social conduct, an armoury against despair and dulness, and a temple of the ascent of Man."

—GEORGE BERNARD SHAW

ಮನುಷ್ಯನ ಹುಟ್ಟುಗುಣಗಳಲ್ಲಿ ನಾಟಕೀಯತೆಯೂ ಒಂದು. ತನ್ನ ಅಭಿಪ್ರಾಯಗಳನ್ನು ವ್ಯಕ್ತಮಾಡುವಾಗ, ಇತರರ ಅಭಿಪ್ರಾಯಗಳನ್ನು ವರ್ಣಿಸುವಾಗ ಮನುಷ್ಯ ನೈಸರ್ಗಿಕವಾಗಿ ಅಭಿನಯವನ್ನು ಬಳಸುತ್ತಾನೆ. ಭಾವೋದ್ರೇಕವಾದಾಗ, ಜೀವಕ್ಕೆ ರಸಸ್ಪರ್ಶವಾದಾಗ ಮನುಷ್ಯ ಮಾತನ್ನು ಮರೆತು ಅಭಿನಯದಲ್ಲಿ ಲೀನವಾಗುತ್ತಾನೆ.

ನಾಟ್ಯ ಹೇಗೆ ಮನುಷ್ಯನ ಹುಟ್ಟುಗುಣವೊ ಹಾಗೆ ನಾಟ್ಯಾಭಿರುಚಿಯೂ ಅವನ ಹುಟ್ಟುಗುಣ. ಸಣ್ಣ ಮಕ್ಕಳು ತಾವೇ ಕೂತುಕೊಂಡು, ಮನಸ್ಸಿಗೆ ಬಂದ ಸಂವಿಧಾನ ಕೂಡಿಸಿಕೊಂಡು, ಬಾಯಿಗೆ ಬಂದ ಸಂಭಾಷಣೆ ಮಾಡಿಕೊಂಡು ಮನೆಯಲ್ಲಿನ ಸೀರೆಧೋತ್ರಗಳನ್ನೇ ತೆರೆಯಾಗಿ ಉಪಯೋಗಿಸಿ ನಾಟಕವಾಡುವುದಿಲ್ಲವೇ ? ದೊಡ್ಡವನಾದ ಮೇಲೂ ತನ್ನ ಹೆಡ್ ಮಾಸ್ತರ ಮುಂದೆ ಹೋಗಿ ಹೇಗೆ ನಿಲ್ಲಬೇಕು— ಹೇಗೆ ಮಾತನಾಡಬೇಕು ; ಕೆಲಸ ಕೇಳುವುದಕ್ಕೆ ಅಧಿಕಾರಿಯ ಮುಂದೆ ಹೇಗೆ ಹೋಗಬೇಕು ; ಅಧಿಕಾರ ಸಿಕ್ಕಿದರೆ ಖುರ್ಚಿಯ ಮೇಲೆ ಕುಳಿತು ಹೇಗೆ ದರ್ಪ ತೋರಿಸಬೇಕೆಂದು ಮನುಷ್ಯ ಸದಾ ನಾಟಕವನ್ನು ಅಭ್ಯಾಸಿಸುತ್ತಲೊ ಅಭಿನಯಿಸುತ್ತಲೊ ಇರುತ್ತಾನೆ.

ಮಾನವನ ಈ ನೈಸರ್ಗಿಕ ಪ್ರವೃತ್ತಿಯನ್ನು ರಾಜಕಾರಣಪಟುಗಳು ಚೆನ್ನಾಗಿ ಬಳಸಿಕೊಂಡೂ ಬಿಡುತ್ತಾರೆ. ಜನ ಮರುಳಾಗಿದ್ದುದು ಹಿಟ್ಲರ್, ಮುಸಲೋನಿ, ಚರ್ಚಿಲ್ಲರ ರಾಜಕಾರಣಪಟುತ್ವಕ್ಕೆ ಅಲ್ಲ. ಅವರ ಅಭಿನಯ, ಮಾತುಗಾರಿಕೆ, ಜನಗಳ ಮನಸ್ಸನ್ನು ಆಕರ್ಷಿಸುವ ಚೇಷ್ಟೆಗಳು ಇವೂ ಅವರ ಪ್ರಾಬಲ್ಯಕ್ಕೆ ನೆರವಾದವು. ವ್ಯಕ್ತಿ ನಾಟ್ಯ ಸಾಧನವನ್ನು ಜನಾಂಗದ ಪ್ರಗತಿ ಅಪಗತಿಗಳಿಗೆ ಬಳಸಿಕೊಂಡಂತೆ ರಾಷ್ಟ್ರವೂ ಬಳಸಿಕೊಳ್ಳಬಹುದು.

ಸ್ವಾತಂತ್ರ್ಯ ಸಮರಗಳಲ್ಲಿ ಐರ್ಲೆಂಡ್, ರಷ್ಯಾ, ಚೀಣ ನಾಟಕವನ್ನು ಚೆನ್ನಾಗಿ ಬಳಸಿಕೊಂಡವು. ಅವರು ದೇಶ ಸೇವೆಯ ಕಹಿಗುಳಿಗೆಯನ್ನು ನಾಟಕದ ಮೂಲಕ ಸಿಹಿಗುಳಿಗೆಮಾಡಿ ಜನತೆಗಿತ್ತರು. ನಾಟಕ ಈ ದೇಶಗಳಲ್ಲಿ ಜನತೆಯ ಶಿಕ್ಷಣದ ಪ್ರಬಲ ಸಾಧನವಾಯಿತು.

ನಾಟಕಕ್ಕೆ ವಿಲಾಸದ ಮುಖವೊಂದಿರುವಂತೆ, ವಿಕಾಸದ ಮುಖವೂ ಒಂದಿದೆ. ತನ್ನ ಜೀವನದ ಒಗರನ್ನು ಕ್ಷಣಕಾಲ ಮರೆಯಲು ಮನುಷ್ಯ ಕಳ್ಳಂಗಡಿಗೋ ವೇಶ್ಯಾಗೃಹಕ್ಕೋ ಹೋಗುವಂತೆ ನಾಟಕಗೃಹಕ್ಕೂ ಹೋಗುತ್ತಾನೆ. ಅಲ್ಲಿ ಅವನು ಬೇಡುವ ತಾತ್ಕಾಲಿಕ ಉಪಶಮನ, ವಿಸ್ಮೃತಿಗಳು ದೊರೆಯುತ್ತವೆ. ಕಳ್ಳುಕುಡಿದು ಮೈಮರೆಯುವಂತೆ ನಾಟಕ ನೋಡುತ್ತ ಮೈಮರೆಯುತ್ತಾನೆ. ಕುಬೇರನ ವೈಭವ ನೋಡಿ ತಾನು ಕುಬೇರನಾದೆನೆಂದುಕೊಳ್ಳುತ್ತಾನೆ, ಹರಿಶ್ಚಂದ್ರನ ತ್ಯಾಗನೋಡಿ ತಾನೂ ಮಹಾತ್ಯಾಗಿಯೆಂದು ಭಾವಿಸಿಕೊಳ್ಳುತ್ತಾನೆ, ಅರ್ಜುನನ ಪೌರುಷ ಕಂಡು ತಾನೂ ಮಹಾ ಪೌರುಷಶಾಲಿ ಎಂದು ನಂಬುತ್ತಾನೆ—ಎಲ್ಲಾ ಕ್ಷಣ ಹೊತ್ತು. ಆ ಮೊಬ್ಬು ಹರಿದೊಡನೆಯೇ ಅವನು ಅವನೇ !

ಇನ್ನೊಂದು ಬಗೆಯ ರಂಗಭೂಮಿ ಪ್ರೇಕ್ಷಕನನ್ನು ವಿಸ್ಮೃತಿಗೊಳಿಸುವುದಿಲ್ಲ. ಹೊಡೆದೆಬ್ಬಿಸುತ್ತದೆ. ಅವನ ಮುಖಕ್ಕೆ ಕನ್ನಡಿ ಹಿಡಿದು ಸತ್ಯದ ವಿಕರ್ಷಕ ಮುಖದ ಪರಿಚಯ ಮಾಡಿಕೊಡುತ್ತದೆ. ಅವನು ಅನುಭವಿಸುವ ಹಲವು ಭಾವನೆಗಳನ್ನು, ಸಂಕಟಗಳನ್ನು, ಅವನೇ ಎದುರಿಸುವ ಹಲವು ಸಮಸ್ಯೆಗಳನ್ನು ಬಿಚ್ಚಿ ಮುಂದಿಡುತ್ತದೆ. ನಿತ್ಯ ತಾನು ಬಾಳುವ ಬಾಳನ್ನು, ಅನುಭವಿಸುವ ರಸವಂತೀಗಳನ್ನು, ಕಾಣುವ ನೋಟ, ವ್ಯಕ್ತಿಗಳನ್ನು ರಂಗಭೂಮಿ ಕಾಣಿಸುತ್ತದೆ. ನಿಜಜೀವನ ಖೈದಿಯನ್ನು ಪೋಲೀಸಿನವನು ಬೆನ್ನುಹತ್ತುವಂತೆ ಹತ್ತಿರುತ್ತದೆ. ಇದರಿಂದ ಪಾರಾಗುವುದು ಹೇಗೆ? ನಾಟಕ ಇಲ್ಲಿ ಜೀವನಕ್ಕೆ ಎದೆಗೊಟ್ಟು ನಿಲ್ಲಲು ಅಂಜಿ ಅಳುಕುವ ಉತ್ತರಕುಮಾರನನ್ನು ಹಿಡಿದು ತಂದು ರಣರಂಗದಲ್ಲಿ ನಿಲ್ಲಿಸುತ್ತದೆ. ಜೀವನದ ಸಮಸ್ಯೆಗಳನ್ನು ಮರೆಯಲೆತ್ನಿಸಿ, ಕಣ್ಣುಮುಚ್ಚಿ ಕುಳಿತರೆ ಅವುಗಳ ಪರಿಹಾರೋಪಾಯ ಕಂಡುಹಿಡಿದಂತಾಗುವುದಿಲ್ಲ. ಸಮಸ್ಯೆಗಳನ್ನು ಮೊದಲು ಅರ್ಥಮಾಡಿಕೊಳ್ಳಬೇಕು, ಕೂಲಂಕಷವಾಗಿ ಛಿದ್ರಛಿದ್ರ ಮಾಡಿ ಹೆಕ್ಕಿ

ನೋಡಿ, ಸಮಸ್ಯೆಯ ಸಹಜ ರೂಪದ ಪರಿಚಯ ಮಾಡಿಕೊಳ್ಳಬೇಕು. ಈ ಪರಿಚಯ ಪರಿಹಾರವನ್ನು ತಾನೇ ಒದಗಿಸುತ್ತದೆ.

ಈ ಎರಡು ಮುಖಗಳನ್ನೂ ಪ್ರಾಚೀನ ಭಾರತೀಯರು ಬಲ್ಲರು. ಒಂದು ಕಡೆ ಮಾನವನ ರುದ್ರಜೀವನಕ್ಕೆ ರಮಣೀಯತೆಯನ್ನು, ಲಾಲಿತ್ಯವನ್ನು, ಸುಭಗತೆಯನ್ನು ನೀಡುವ ಶಾಕುಂತಲ, ರತ್ನಾವಳಿ, ವಿಕ್ರಮೋರ್ವಶೀಯ ನಾಟಕಗಳು ಬೆಳೆದವು. ಇನ್ನೊಂದು ಕಡೆ ಅದಕ್ಕೆ ವಿವೇಚನೆ, ಶಕ್ತಿ, ಯುಕ್ತಾಯುಕ್ತ ಪರಿಜ್ಞಾನಗಳನ್ನೊದಗಿಸುವ ಮೃಚ್ಛಕಟಿಕ, ಮುದ್ರಾರಾಕ್ಷಸ, ಪ್ರಬೋಧ ಚಂದ್ರೋದಯ ನಾಟಕಗಳು ಬೆಳೆದವು. ನಾಟಕ ವಿಲಾಸ, ವಿಕಾಸಗಳೆರಡರ ಸಾಧನವೂ ಆಗಿತ್ತು. ಆದರೆ ಪ್ರಾಚೀನರು ವಿಕಾಸಕ್ಕಿಂತ ವಿಲಾಸಕ್ಕೆ, ಪ್ರಬೋಧಕ್ಕಿಂತ ಪ್ರಮೋದಕ್ಕೆ ಹೆಚ್ಚು ಗಮನಕೊಟ್ಟಿದ್ದರೆಂದು ಊಹಿಸಲು ಆಧಾರಗಳಿವೆ.

ಕನ್ನಡನಾಡಿನಲ್ಲಿ ನಾಟಕ ಬೆಳೆಯಲಿಲ್ಲವೇ? ಸಂಸ್ಕೃತ ಸಾಹಿತ್ಯದ ಪಡಿನೆಳಲಾಗಿ ಕನ್ನಡ ಸಾಹಿತ್ಯವೃಕ್ಷ ಒಂದು ಕಡೆ ಬೆಳೆಯಿತು. ರಾಮಾಯಣ, ಭಾರತ, ಭಾಗವತಗಳಿಂದ ಕಥೆಗಳನ್ನು ಇಡಿಯಾಗಿಯೋ ಬಿಡಿಯಾಗಿಯೋ ಕನ್ನಡ ಕವಿಗಳು ಆಯ್ದುಕೊಂಡು ಕಾವ್ಯಗಳನ್ನು ಬರೆದರು. ಆದರೆ ಸಂಸ್ಕೃತ ನಾಟಕಗಳನ್ನು ಅನುಸರಿಸಿಯೋ ನಾಟಕಗಳನ್ನು ಏಕೆ ಬರೆಯಲಿಲ್ಲ? ಸಾಹಿತ್ಯದ ಪಂಡಿತರು ಬಿಡಿಸಲಾಗದಿರುವ ಸಮಸ್ಯೆ ಇದು.

ಕನ್ನಡದಲ್ಲಿ ಕಾವ್ಯ ಪಂಡಿತರ, ವಿವಿಧ ಕಳಾಮಂಡಿತರ ಸೊತ್ತೆಂಬ ಭಾವನೆಯಿತ್ತು. ಸಾಮಾನ್ಯ ಜನತೆಯನ್ನು ದುರ್ಲಕ್ಷಿಸಿದ ಕಾವ್ಯಪ್ರಯೋಗ ಪರಿಣತಮತಿಗಳು ನಾಟಕ ಸಾಮಾನ್ಯರ ವಿಹಾರ ಸಾಧನವೆಂದು ಅದನ್ನು ಅಲ್ಲಗಳೆದಿರಬಹುದು. ನಾಟಕ ಸಾಧನದಲ್ಲಿರಬಹುದಾದ ಕಸುವನ್ನು ರನ್ನ, ರಾಘವಾಂಕ, ಕುಮಾರ ವ್ಯಾಸರು ತಮ್ಮ ಕಾವ್ಯಗಳಲ್ಲಿಯೇ ತಂದಿದ್ದುದರಿಂದ ನಾಟಕವನ್ನು ಸಾಹಿತ್ಯದ ಒಂದು ಪ್ರತ್ಯೇಕಾಂಗವೆಂದು ಬೆಳೆಸುವ ಆವಶ್ಯಕತೆ ಅವರಿಗೆ ತೋರದೆ ಇರಬಹುದು.

ಕವಿಗಳು ದುರ್ಲಕ್ಷಿಸಿದರೆಂದು ಕರ್ನಾಟಕದಲ್ಲಿ ನಾಟಕ ಸಾಯಲಿಲ್ಲ. ಜನತೆಯಲ್ಲಿ ಅದು ನಾನಾಮುಖವಾಗಿ ಬೆಳೆಯಿತು. ಸಾಹಿತ್ಯದ ದರ್ಜೆಗೆ ಸೇರುವ ನಾಟಕ ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ'ದಿಂದ ಆರಂಭ

ವಾದರೂ ಅದಕ್ಕೂ ಪೂರ್ವದಲ್ಲಿ ಯಕ್ಷಗಾನ ರೂಪವಾಗಿ ನಾಟಕವನ್ನು ಜನತೆ ಬೆಳಸಿತು. ಜನ ಕಾವ್ಯಗಳಿಗಿಂತ ಹೆಚ್ಚಾಗಿ ಅವುಗಳನ್ನು ಓದುತ್ತಿದ್ದರು—ನೋಡುತ್ತಿದ್ದರು. ಆದರೆ ಅವುಗಳಿಗೆ ಸಾಹಿತ್ಯಮುದ್ರೆ ಬೀಳಲಿಲ್ಲ.

ಜನತೆಯ ರಂಗಭೂಮಿಯನ್ನು ಕರ್ನಾಟಕ ಸ್ವತಂತ್ರವಾಗಿ ಮೊದಲಿನಿಂದ ಬೆಳಸಿಕೊಂಡು ಬಂದಿದೆ. ತೊಗಲು ಗೊಂಬೆಯಾಟ, ನೆರಳಾಟ, ಯಕ್ಷಗಾನ, ತಾಳಮದ್ದಳೆ, ಬಯಲು ನಾಟಕಗಳಲ್ಲದೆ ಹರಿಕಥೆ ಶಿವಕಥೆಗಳು (ಈಚೆಗೆ ಯೇಸುಕಥೆ) ಏಕವ್ಯಕ್ತಿ ಅಭಿನಯಿಸುವ ನಾಟಕಗಳೇ ಆಗಿವೆ. ಆದರೆ ಜನತೆ ವಿದ್ಯಾ ಸಾಂಸ್ಕೃತಿಕ ಕೇಂದ್ರಗಳಿಂದ ಬಹುದೂರ ನಿಂತದ್ದರಿಂದ ಅವರ ರಂಗಭೂಮಿ ಅವರ ಸಂಸ್ಕೃತಿಯ ಪ್ರತೀಕವಾಯಿತು.

ನಾಟಕದ ಪುನರೋದಯ ೧೯ನೆಯ ಶತಮಾನದ ಕೊನೆಯಲ್ಲಿ ಕರ್ನಾಟಕದಲ್ಲಿ ತಲೆದೋರಿದಾಗ ಅದು ಅನುಸರಿಸಿದುದು ಸಂಸ್ಕೃತ ಹಾಗೂ ಇಂಗ್ಲಿಷ್ ನಾಟಕಗಳನ್ನು. ಇಂಗ್ಲಿಷ್ ಬಾರದ ಸಂಸ್ಕೃತ ಪಂಡಿತರು, ಇಂಗ್ಲಿಷ್ ಬಲ್ಲವರ ನೆರವಿನಿಂದ ಷೇಕ್ಸ್‌ಪಿಯರ್ ನಾಟಕಗಳ ಅನುವಾದಕ್ಕೆ ಕೈಯಿಟ್ಟರು. ಇವುಗಳೂ, ಪ್ರತಿಭಾಶಾಲಿಗಳಾದ ನಟರು ತಮಗಾಗಿ ಬರೆಸಿಕೊಳ್ಳುತ್ತಿದ್ದ ನಾಟಕಗಳೂ ಬಹಳ ಕಾಲ ಜನಮನವನ್ನಾಕರ್ಷಿಸಿದ್ದವು. ಕವಿಯಾಗ ನಟನ ಕೈಗೊಂಬೆ. ಮಂಡ್ಯಂ ರಂಗಾಚಾರ್ಯರು, ಗೌರಿ ನರಸಿಂಹಯ್ಯನವರು, ಸುಬ್ಬಣ್ಣನವರು, ಸರ್ಟನ್ ರಾಮರಾಯರು, ಎ. ವಿ. ವರದಾಚಾರ್ಯರು ನಾಟಕ ಸಾಮ್ರಾಜ್ಯವನ್ನಾಳಿದರು. ಅವರ ರಾಜ ಸಭೆಯಲ್ಲಿ ನಾಟಕಕಾರರು, ದೊರೆಯನ್ನು ರಮಿಸುವ ವಿದೂಷಕರಂತಿದ್ದರು. ನಾಟಕದ ಸರ್ವಮಾನ್ಯ ನಟನದಾಗಿತ್ತು; ನಾಟಕಕಾರ ಗೌಣವ್ಯಕ್ತಿ. ಜನ 'ಗುಲೇ-ಬಕಾವಲಿ'ಗೆ ಹೋಗುತ್ತಿದ್ದರೆ ವರದಾಚಾರ್ಯರ ಕಲಾ ಕೌಶಲ್ಯವನ್ನು ನೋಡುವುದಕ್ಕೇ ವಿನಾ, ಕವಿಯ ಕಾವ್ಯ ವೈಭವವನ್ನು ಕಾಣುವುದಕ್ಕಲ್ಲ. ಗುಬ್ಬಿ ವೀರಣ್ಣನವರು ನಾಟಕಕಾರ, ನಟ ಇಬ್ಬರಿಗೂ ಮೈತ್ರಿಯನ್ನುಂಟುಮಾಡಿ ಇಬ್ಬರಿಗೂ ಸಮಾನ ಪ್ರಾಧಾನ್ಯವನ್ನು ಕೊಡಲೆತ್ನಿಸಿದರು. ಅದರಿಂದಾಗಿ 'ಕುರುಕ್ಷೇತ್ರ—ಅಕ್ಕಮಹಾದೇವಿ' ನಾಟಕಗಳು ರಂಗದ ಮೇಲೆ ಬಂದವು. ದಿವಂಗತ ಮಹಮದ್ ಪೀರರು ಇಂಥ ಪ್ರಯತ್ನ ನಡೆಸಿ 'ಷಹಜಹಾನ್—ಬುದ್ಧ' ನಾಟಕಗಳನ್ನು ರಂಗದ ಮೇಲೆ ತಂದರು.

ಆದರೂ ನಾಟಕಕಾರರ ಸ್ಥಾನ ರಂಗಭೂಮಿಯಲ್ಲಿ ಗೌಣವಾಗಿಯೇ ಉಳಿದಿತ್ತು.

ಇಂಗ್ಲಿಷ್ ರಂಗಭೂಮಿ ಇದೇ ರೀತಿಯಲ್ಲಿ ಪ್ರತಿಭಾಶಾಲಿಗಳಾದ ನಟರ ಕೈಗೊಂಬೆಯಾಗಿ ಕುಣಿಯುತ್ತಿದ್ದಾಗ ಅದನ್ನು ಕೈವಶಮಾಡಿಕೊಂಡವನು ನಾಟಕಕಾರ—ಜಾರ್ಜ್ ಬರ್ನಾರ್ಡ್ ಷಾ. ಷಾ ಇಂಗ್ಲಿಷ್ ರಂಗಭೂಮಿಗೆ ಮಾಡಿದ ಕೆಲಸವನ್ನು ಕನ್ನಡನಾಡಿಗೆ ಮಾಡಿದವರು ಕೈಲಾಸಂ. ೧೯೨೦ರಿಂದ ಕೈಲಾಸಂ ಯುಗವೊಂದು ನಾಟಕ ಪ್ರಪಂಚದಲ್ಲಿ ಸ್ಥಾಪನೆಯಾಯಿತು. ಸಾಮಾನ್ಯ ಜೀವನದ ಚಿತ್ರಗಳು, ಪುಂಖಾನುಪುಂಖವಾಗಿ ರಂಗಭೂಮಿಯ ಮೇಲೆ ಬಂದವು. ನಾಟ್ಯಶಾಸ್ತ್ರದ ವಿಧಿನಿಯಮ, ನಿಷೇಧಗಳನ್ನು ಮುರಿದು ಮುನ್ನುಗ್ಗಿದರು ಕೈಲಾಸಂ ಒಂದು ಧೂಮಕೇತುವಿನಂತೆ.

ಆದರೆ ಕೈಲಾಸಂ ನಾಟಕಗಳು ನಾಟ್ಯವಿಲಾಸಿಗಳು, ಶಾಲಾ ಕಾಲೇಜು ವಾರ್ಷಿಕೋತ್ಸವಗಳು, ಸಾಹಿತ್ಯ ಸಂಘಗಳ ಹಬ್ಬಗಳಿಗೆ ಮೀಸಲಾಯಿತು. ಯಾವ ಬೋರ, ಸತ್ತಾರ್, ನಾಗತ್ತೆಯರನ್ನು ಕುರಿತು ಕೈಲಾಸಂ ಬರೆದಿದ್ದರೋ ಅವರ ವಿನಾ ಮಿಕ್ಕವರು ಅವರ ನಾಟಕಗಳನ್ನು ನೋಡುತ್ತಿದ್ದರು. ಅವರ ರಂಗಭೂಮಿ ಮಧ್ಯಮವರ್ಗದವರ ವಿಲಾಸ ಸಾಧನವಾಯಿತು. ನಾಟಕ ನೋಡಿ, ನಕ್ಕುನಲಿದು 'Clever fellow, this Kailasam' ಎಂದು ಜನ ಹೇಳಿಕೊಂಡು ಹೋಗುತ್ತಿದ್ದರು. ನಾಟಕ ಜನಸಾಮಾನ್ಯರ ಒಂದು ಸಜೀವ ಶಕ್ತಿ (Living Force) ಆಗಲಿಲ್ಲ.

ಜನತೆಯ ಅಕ್ಷಮ್ಯ ಅಜ್ಞಾನವೂ ಇದಕ್ಕೆ ಕಾರಣವಾಗಿರಬಹುದು. ಕೈಲಾಸಂರ ಅತಿಜಾಣತನವೂ ಕಾರಣವಾಗಿರಬಹುದು. ಆದರೆ ಗುಲೇಬಕಾವಲಿ, ಸದಾರಮೆ, ಭೋಜ ಪ್ರಬಂಧಗಳನ್ನು ನೋಡುತ್ತಿದ್ದ ಲಕ್ಷಾಂತರ ಜನ ಕೈಲಾಸಂ ನಾಟಕಗಳನ್ನು ನೋಡುತ್ತಿರಲಿಲ್ಲವೆನ್ನುವುದು ನಿರ್ವಿವಾದ.

ನಾಟಕ ಜನತೆಯ ಶಿಕ್ಷಣಕ್ಕೆ ದಿವ್ಯಸಾಧನವೆಂದು ತೋರಿಸಿಕೊಟ್ಟವರು ಕೈಲಾಸಂ. ಅವರು ಕನ್ನಡನಾಡಿನಲ್ಲಿ ಹುಟ್ಟದಿದ್ದರೆ ನಮ್ಮ ನಾಟಕವಿನ್ನೂ ೧೯ನೆಯ ಶತಮಾನದ ಪರಿಸ್ಥಿತಿಯನ್ನು ಬಿಟ್ಟು ಹೊರಗೆ ಬರುತ್ತಿರಲಿಲ್ಲ.

ಎಲ್ಲ ದೃಷ್ಟಿಯಿಂದ ಕನ್ನಡನಾಡಿನಲ್ಲಿ ಆಗಿರುವ ನಾಟಕ ಪ್ರಯತ್ನ ಹೆಮ್ಮೆ ಪಡುವಂತಿಲ್ಲ. ಅಲ್ಲೊಂದು ಇಲ್ಲೊಂದು ಒಳ್ಳೆಯ ನಾಟಕ, ಅಲ್ಲೊಬ್ಬ ಇಲ್ಲೊಬ್ಬ ಒಳ್ಳೆಯ ನಟ—ಆಗಲೋ ಈಗಲೋ ಒಂದೊಂದು ಬದುಕುವ ನಾಟಕ—ಇಲ್ಲಿಗೆ ಮುಗಿಯಿತು. ನಮ್ಮ ಸಾಧನ ಸಿದ್ಧಿಗಳ ಕಥೆ.

ನಾಟಕದ ಪುನರುದ್ಧಾರವಾಗಬೇಕು. ಅದು ನಮ್ಮ ವೈಯಕ್ತಿಕ, ಸಾಂಘಿಕ, ರಾಷ್ಟ್ರೀಯ ಜೀವನಕ್ಕೆ ಬೆಳಕನ್ನು, ಶಕ್ತಿಯನ್ನು, ಸ್ಥೈರ್ಯವನ್ನು ನೀಡುವಂತಾಗಬೇಕೆಂಬ ಅಭಿಪ್ರಾಯವನ್ನು ಪ್ರಾಯಶಃ ಎಲ್ಲರೂ ಒಪ್ಪುತ್ತಾರೆ. ಕರ್ನಾಟಕದಲ್ಲಿ ಪುನರುದ್ಧಾರ ಕಾರ್ಯ ಹೇಗೆ ಆಗಬಹುದೆಂಬುದನ್ನು ಯೋಚಿಸೋಣ.

ಟಾಕೀಯುಗವಾರಂಭವಾದ ಮೇಲೆ ನಾಟಕ ತಾತ್ಕಾಲಿಕವಾಗಿ ರಾಹುಗ್ರಸ್ತವಾಯಿತು. ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡಿ, ಒಂದೂವರೆ ಗಂಟೆ ಅವಧಿಯಲ್ಲಿ ಎಲ್ಲ ಆಮೋದವನ್ನೂ ನೀಡುವ ವಿಹಾರ ಸಾಧನ-ಅದು ಯಾಂತ್ರಿಕವಾದರೂ-ಜನತೆಯನ್ನು ಆಕರ್ಷಿಸಿತು. ಟಾಕೀಗೆ ವಿಶೇಷ ಪ್ರೋತ್ಸಾಹ ಸಿಕ್ಕುವುದಕ್ಕೆ ಅದರ ನವೀನತೆ, ವಿಹಾರಾನುಕೂಲ್ಯಗಳಲ್ಲದೆ ನಾಟಕದ ದುಸ್ಥಿತಿಯೂ ಕಾರಣವಾಯಿತು. ನಾಟಕರಂಗದಲ್ಲಿದ್ದ ಉತ್ತಮ ನಟರು ಸಿನಿಮಾ ಸೇರಿದ್ದರು, ಉತ್ತಮ ನಾಟಕ ಗೃಹಗಳು ಸಿನೀಮಾ ಮಂದಿರಗಳಾದವು. ಹೊಲಸು ಥಿಯೇಟರಿನಲ್ಲಿ ಹೊಲಸು ನಟರು ಅಭಿನಯಿಸುವ ಕೀಳುದರ್ಜೆಯ ನಾಟಕವನ್ನು ರಾತ್ರಿಯೆಲ್ಲಾ ನಿದ್ದೆಗೆಟ್ಟು ನೋಡುವುದಕ್ಕಿಂತ ಉತ್ತಮ ಥಿಯೇಟರಿನಲ್ಲಿ ಒಂದು ಸಿನೀಮಾ ನೋಡಿ ಊಟದ ಹೊತ್ತಿಗೆ ಮನೆಗೆ ಹೋಗುವುದು ಲೇಸೆಂಬ ಭಾವನೆ ಜನತೆಯಲ್ಲಿ ಬೆಳೆಯಿತು. ಈ ಅಭಿಪ್ರಾಯವನ್ನೆದುರಿಸಿ ಜನತೆಯ ಅಭಿರುಚಿಗನುಗುಣವಾಗಿ ಪ್ರದರ್ಶನ ವೈವಿಧ್ಯ, ನೂತನ ಪ್ರಯೋಗ ಸಿದ್ಧಿಗಳಿಂದ ನಾಟಕವನ್ನು ಊರ್ಜಿತಗೊಳಿಸುವ ಕೆಲಸಕ್ಕೆ ನಾಟ್ಯವಿಲಾಸಿಗಳಾಗಲಿ, ನಾಟ್ಯಜೀವಿಗಳಾಗಲಿ ಮನಸ್ಸು ಕೊಡಲಿಲ್ಲ. ಆದರೆ ನಾಟಕ ಕಲೆಯನ್ನು ಯಾವ ಯಂತ್ರಕಲೆಯೂ ಕೊಲ್ಲಲು ಸಾಧ್ಯವಿಲ್ಲ. ನಾಟಕದ ಮಾನವ ಸಂಪರ್ಕ, ಭಾವಪ್ರದರ್ಶನ ವೈವಿಧ್ಯ ಅದರ ಬಾಳನ್ನು ರಕ್ಷಿಸಿಕೊಂಡು ಬಂದಿದೆ.

ನಾಟಕದ ಪುನರುದ್ಧಾರಕ್ಕೆ ಮೊದಲು ಅದರ ತಳಪಾಯ ಭದ್ರವಾಗಬೇಕು. ಸಾಹಿತ್ಯ, ಕಲಾ ಸಂಸ್ಥೆಗಳು, ವಿಶ್ವವಿದ್ಯಾನಿಲಯ, ಶಿಕ್ಷಣ ಶಾಖೆಯವರು ಆಕರ್ಷಕ ಪಾರಿತೋಷಕಗಳನ್ನಿಟ್ಟು ನಾಟಕಗಳನ್ನು ಬರೆಸಬೇಕು. ೨॥ ಗಂಟೆ ಅಥವಾ ೩ ಗಂಟೆಯ ಪ್ರದರ್ಶನಕ್ಕೆ ಅಳವಡುವ ನಾಟಕಗಳು ಇಂದಿಗೂ ಕನ್ನಡದಲ್ಲಿ ಕೈಬೆರಳೆಣಿಸುವಷ್ಟೂ ಇಲ್ಲ. ನಾಟಕ ಲೇಖನ ಒಂದೇ ಜಾಡುಹಿಡಿಯದೆ ವಿವಿಧ ವಿಷಯಗಳು, ಅಭಿರುಚಿಗಳು, ದೃಷ್ಟಿಪಥಗಳನ್ನು ಪ್ರತಿಬಿಂಬಿಸಬೇಕು. ಸಿಂಜ್, ಯೀಟ್ಸ್, ಲೆನಾಕ್ಸ್ ರಾಬಿನ್ಸನ್ ಮೊದಲಾದವರು ಐರಿಷ್ ಪುನರೋದಯ ಕಾಲದಲ್ಲಿ ಮಿಸಸ್ ಹಾರ್ನಿಮನ್ನರ ನೇತೃತ್ವದಲ್ಲಿ ಐರ್ಲೆಂಡಿನ ವೈಶಿಷ್ಟ್ಯವನ್ನು ಪ್ರತಿಬಿಂಬಿಸುವ ನಾಟಕಗಳನ್ನು ರಚಿಸಿದಂತೆ ನಮ್ಮಲ್ಲಿಯೂ ನಾಟಕಕರ್ತರು ಕರ್ನಾಟಕದ ವಿವಿಧಾಂಗೀನ ಸಂಸ್ಕೃತಿಯನ್ನು ನಾಟಕಗಳಲ್ಲಿ ಮೂಡಿಸಬೇಕು ಇಂಥ ನಾಟಕಗಳು:

೧. ಐತಿಹಾಸಿಕ: ಪ್ರಾಚೀನ ಕರ್ನಾಟಕದ ಐತಿಹಾಸಿಕ ವಸ್ತುಗಳನ್ನಾಯ್ದುಕೊಂಡು ಕನ್ನಡ ಜನರ ಪರಾಕ್ರಮ, ಕಲಾಪ್ರಿಯತೆ, ರಸಿಕತೆಗಳನ್ನು ಚಿತ್ರಿಸಬಹುದು. ಸತ್ಯಾಗ್ರಹದ ಇತಿಹಾಸ, ಆಗಸ್ಟ್ ೧೯೪೨ರ ವೀರಕಥೆಗಳು, ವಿಜಾಪುರದ ಕ್ಷಾಮದ ದುರಂತ ಕಥೆಗಳೆಲ್ಲಾ ನಾಟಕಕ್ಕೆ ಚೆನ್ನಾಗಿ ಅಳವಡುತ್ತವೆ.

೨. ಸಾಮಾಜಿಕ: ಈ ರಂಗದಲ್ಲಿ ಸ್ವಲ್ಪ ಕೆಲಸ ಕನ್ನಡನಾಡಿನಲ್ಲಿ ನಡೆದಿದೆ. ಆದರೆ ನಮ್ಮಲ್ಲಿ ಚಿತ್ರಿತವಾಗಿರುವ ಸಮಾಜ ಮಧ್ಯವರ್ಗದ ಸಮಾಜ. ಸರ್ಕಾರಿ ಅಧಿಕಾರಿಗಳು, ಗುಮಾಸ್ತರಲ್ಲದೆ ಬೇರೆ—ಲಕ್ಷಾವಧಿ ಜನ ಕನ್ನಡನಾಡಿನಲ್ಲಿದ್ದಾರೆ. ಹಲವು ಬಗೆಯಲ್ಲಿ ಹೊಟ್ಟೆಗಾಗಿ ಹೋರಾಟ ನಡೆಸುತ್ತಿದ್ದಾರೆ. ಅವರ ಜೀವನವನ್ನು ಚಿತ್ರಿಸುವ ಅವಕಾಶ ಇನ್ನೂ ಉಳಿದಿದೆ. ಗಾರ್ಕಿ ಇಂಥ ಜನತೆಯ ಪ್ರತಿನಿಧಿಯಾಗಿ ಅತ್ಯಮೂಲ್ಯ ನಾಟಕಗಳನ್ನು ಬರೆದು ಇಡೀ ರಷ್ಯವನ್ನೆಚ್ಚರಿಸಿದ.

ಸಾಮಾಜಿಕ ನಾಟಕವೆಂದರೆ ನಮ್ಮಲ್ಲಿ ಕೆಲಹೊತ್ತು ನಕ್ಕುಹೋಗುವ ಸಾಧನವೆಂಬ ಅಭಿಪ್ರಾಯ ಬೇರೂರಿದೆ. ನಗಿಸುವ ನೆಪದಲ್ಲಿ ನಾಟಕಕಾರರು ಹಾಸ್ಯ, ವಿಡಂಬನಗಳನ್ನು ತೊರೆದು 'ಫಾರ್ಸು (Farce)'ಗಳನ್ನು ಬರೆಯುತ್ತಿದ್ದಾರೆ. ಜನತೆಯಲ್ಲಿ ಹಾಸ್ಯಮುಖವೊಂದನ್ನು ಕಲ್ಪಿಸಿ ಅವರ ನಿತ್ಯದ

ಜಂಜಡಗಳನ್ನು ನಗುವಿನ ಚಿಕಿತ್ಸೆಯಿಂದ ಪರಿಹರಿಸಬೇಕಾದುದಗತ್ಯ. ಆದರೆ ಅಷ್ಟೇ ಮುಖ್ಯವಾದುದು ಗಂಭೀರ ವಿಷಯಗಳ—ಸಮಸ್ಯೆಗಳ ಪ್ರತಿಪಾದನೆ. ಷಾ ಗಂಭೀರ ವಿಷಯಗಳನ್ನು ಹಾಸ್ಯದ ಸಹಾಯದಿಂದ ಪ್ರತಿಬಿಂಬಿಸುವ ನೂತನ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದ್ದಾನೆ. ಯೂಜಿನ್ ಓ ನೀಲ್, ಗಾಲ್ಸ್‌ವರ್ದಿ, ಡ್ರೂಟನ್ ಸಾಮಾಜಿಕ ಸಮಸ್ಯೆಗಳನ್ನು ಅತ್ಯಂತ ಕೌಶಲ್ಯದಿಂದ ಗಂಭೀರವಾಗಿ ನಿರೂಪಿಸಿದ್ದಾರೆ. ನಿತ್ಯ ಜೀವನದ ಪೃಥಃಕರಣವನ್ನು ತೋರುವ ಗಂಭೀರ ನಾಟಕಗಳು ನಮ್ಮಲ್ಲಿ ಬೆಳೆಯಬೇಕು.

೩ ಪೌರಾಣಿಕ: ಇದುವರೆಗೆ ನಾಟ್ಯೋಪಜೀವಿಗಳ ರಂಗಭೂಮಿಯಲ್ಲಿ ಬಂದ ಪೌರಾಣಿಕ ನಾಟಕಗಳು ಕೇವಲ ಪುರಾಣ ಕಥೆಗಳ ನಿರೂಪಣೆಯಲ್ಲಿ ತೃಪ್ತಿಹೊಂದಿವೆ. ಹಲವು ಹಾಡುಗಳ ಕುಣಿಕೆ ಹಾಕಿಕೊಂಡು ಒಂದು ಕಥೆಯನ್ನು ಇಬ್ಬರು ಸಂಭಾಷಿಸಿದರೆ ನಾಟಕವಾಗುವುದಿಲ್ಲ. ನಾಟಕಕ್ಕೆ ಒಂದು ವಿಶಿಷ್ಟ ಕಲಾಸ್ವರೂಪವಿದೆ. ಪೌರಾಣಿಕ ನಾಟಕಗಳನ್ನು ಅಂದಿನ ಜೀವನ ಚಿತ್ರಗಳಾಗಿ ಪ್ರದರ್ಶಿಸಬಹುದು. ಅವುಗಳನ್ನು ಇಂದಿನ ಜೀವನಕ್ಕೆ ಅಳವಡಿಸಿಕೊಂಡು, ಹೇಗೆ ಕರ್ಣನ ಸಮಸ್ಯೆ, ಕೃಷ್ಣನ ಸಂದಿಗ್ಧ, ಹರಿಶ್ಚಂದ್ರನ ನಿರ್ಧಾರ ನಿತ್ಯ ನೂತನ ಪ್ರಶ್ನೆಗಳಾಗಿವೆಯೆಂಬುದನ್ನು ತೋರಿಸಬಹುದು.

ನಾಟಕ ಸಾಹಿತ್ಯ ವಿಪುಲವಾಗಿ ಕೈಗೆ ಬಂದರೂ ಅವುಗಳನ್ನು ಪ್ರದರ್ಶಿಸುವ ಮಂದಿರಗಳ ಪ್ರಶ್ನೆ ತಲೆಯೆತ್ತುತ್ತದೆ. ನಾಟಕಗಳ ಅವನತಿಗೆ ರಂಗಮಂದಿರಗಳ ಅಭಾವವೂ ಕಾರಣವಾಯಿತು. ಈ ತೊಡಕನ್ನು ಪ್ರಧಾನ ನಗರಗಳ ನಗರ ಸಭೆಗಳು ಬಿಡಿಸಬೇಕು. ಪ್ರತಿಯೊಂದು ಊರಿನಲ್ಲಿಯೂ ಒಂದೊಂದು 'ಮುನಿಸಿಪಲ್ ರಂಗಶಾಲೆ'ಯಿರಬೇಕು, ನಗರಸಭೆಗಳಿಗೆ ಸೊಳ್ಳೆ ಕೊಲ್ಲುವುದೆಷ್ಟು ಮುಖ್ಯ ಕೆಲಸವೊ ಜನತೆಯ ಅಜ್ಞಾನ ಕ್ರಿಮಿಗಳನ್ನು ಕೊಲ್ಲುವುದೂ ಅಷ್ಟೇ ಮುಖ್ಯ ಕೆಲಸ. ಹೊಸದಾಗಿ ಕಟ್ಟಲ್ಪಡುವ ಮಂದಿರಗಳನ್ನು 'ನಾಟಕ ಮಂದಿರ'ಗಳನ್ನಾಗಿ ಮಾರ್ಪಡಿಸಿ ಎಂದು ನಗರ ಸಭೆ ಧೈರ್ಯವಾಗಿ ಹೇಳಬಹುದು.

ಪ್ರದರ್ಶನದಲ್ಲಿ ಮಹಾಕ್ರಾಂತಿಯಾದ ಹೊರತೂ ನಾಟ್ಯೋಪಜೀವಿಗಳ ರಂಗಭೂಮಿ ಬದುಕಲು ಸಾಧ್ಯವಿಲ್ಲ. ಈಗಾಗಲೇ ಮಹಾರಾಷ್ಟ್ರ,

ತಮಿಳುನಾಡಿನ ಹಾಗೂ ಹಿಂದಿಯ ನಾಟಕ ಪ್ರದರ್ಶಕರು ಸಿನೀಮಾ ತಂತ್ರವನ್ನಳವಡಿಸಿ ನಾಟಕಗಳನ್ನು ಹೊಸ ಬಗೆಯಲ್ಲಿ ಪ್ರದರ್ಶಿಸುತ್ತಿದ್ದಾರೆ. ನಾಟಕಕ್ಕೆ ಸಿನೀಮಾ ತಂತ್ರವನ್ನು ಕಸಿಮಾಡುವುದು ಹಿತಕರವಲ್ಲ. ಸಿನೀಮಾ, ನಾಟಕ ಕಲೆಗಳು ಬೇರೆ ಬೇರೆ ಲಕ್ಷಣಗಳನ್ನನುಸರಿಸುತ್ತವೆ. ನಾಟಕ ನಾಟಕವಾಗಿದ್ದರೇ ಚೆನ್ನ, ಅದು ಕೀಳುದರ್ಜೆಯ ಸಿನೀಮಾ ಆದರೆ ಅದರ ವೈಶಿಷ್ಟ್ಯಕ್ಕೆ ಭಂಗ ಬರುತ್ತದೆ. ನಾಟಕವನ್ನೇ ವ್ಯವಸಾಯ ಮಾಡಿಕೊಂಡಿರುವ ಪ್ರದರ್ಶಕರು ಇನ್ನಾದರೂ ತಮ್ಮ ದೃಷ್ಟಿ ಬದಲಿಸಿ ಕಂದಾಚಾರದ ಪದ್ಧತಿಗಳನ್ನು ಬಿಡಬೇಕು. ಹಳೆಯ ಪರದೆ, ಕಿರೀಟ, ಬಟ್ಟೆಗಳ ಒಂದು ದಾಸ್ತಾನಿಟ್ಟುಕೊಂಡು ಅವುಗಳನ್ನೇ ಎಲ್ಲ ನಾಟಕಗಳಿಗೂ ಪ್ರಯೋಗಿಸುವ ಪದ್ಧತಿ ಒಳ್ಳೆಯದಲ್ಲ. ಪ್ರತಿಯೊಂದು ನಾಟಕಕ್ಕೂ ಪ್ರತ್ಯೇಕ ಪ್ರದರ್ಶನಸ್ವರೂಪ ಬರಬೇಕು. ಕಾಲೋಚಿತವಾದ ವಸ್ತ್ರಾಭರಣಗಳನ್ನು ಹೊಂದಿಸಬೇಕು. ಕಂಪೆನಿ ಯಜಮಾನ ಅಥವಾ ಮ್ಯಾನೇಜರ್ ತಾನೇ ಬೃಹಸ್ಪತಿ ಎಂದು ತಿಳಿಯುವುದು ಹೋಗಿ ತಜ್ಞರ ನೆರವು ಪಡೆಯುತ್ತ ಬಂದರೆ ಮಾತ್ರ ಈ ಸುಧಾರಣೆ ಸಾಧ್ಯ.

ಸಾವಿರಾರು ರೂಪಾಯಿ ಬಂಡವಾಳ ಹಾಕಿ ದೊಡ್ಡ ಕಂಪನಿಗಳನ್ನು ನಡೆಸುವ ಪ್ರಯತ್ನಗಳಿಂದಲೇ ನಾಟಕದ ಪುನರೋದಯ ಸಾಧ್ಯವಾಗುವುದಿಲ್ಲ. ಸಾಮಾನ್ಯ ಜನತೆಯ ನಿಕಟ ಸಂಬಂಧವುಳ್ಳ ಸಂಸ್ಥೆಗಳು 'ಬ್ಲಯಲು ನಾಟಕ' ಗಳನ್ನು ಆಚರಣೆಯಲ್ಲಿ ತರಬೇಕು. ಇಂಥ ಜನಸಾಮಾನ್ಯ ನಾಟಕ ಮಂದಿರಗಳು ಊರು ಊರುಗಳಲ್ಲಿ, ಹಳ್ಳಿಹಳ್ಳಿಗಳಲ್ಲಿ ಬೆಳೆಯಬೇಕು. ಹಳ್ಳಿಯಲ್ಲಿಯೇ ದೊರೆಯುವ ಸಾಧನ ಸಂಪತ್ತಿನಿಂದಲೇ ನಾಟಕವನ್ನು ಅಳವಡಿಸಬೇಕು. ರಾಷ್ಟ್ರೀಯ ರಂಗಭೂಮಿಗೆ ಇಂಥ ಪ್ರಯತ್ನ ಅಡಿಗಲ್ಲಾಗುತ್ತದೆ.

ಹಳ್ಳಿಗಳಲ್ಲಿ ಹುಟ್ಟುವ ರಂಗಭೂಮಿಗಳು ಯಕ್ಷಗಾನ, ಬಯಲು ನಾಟಕ, ತೊಗಲುಗೊಂಬೆ, ನೆರಳಾಟಗಳ ಸಾಧನಗಳನ್ನು ಬಳಸಿಕೊಂಡು ಅವುಗಳಿಗೆ ಆಧುನಿಕ ಸ್ವರೂಪ ಕೊಡಬಹುದು. ನಾಡಿನ ಪ್ರಚಲಿತ ಇತಿಹಾಸವನ್ನು ತೊಗಲುಗೊಂಬೆಗಳಿಂದ ತೋರಿಸಬಹುದು. ಯಕ್ಷಗಾನದ

ಲಯವಿನ್ಯಾಸದಿಂದ ಜನತೆಯ ಹೃದಯದಲ್ಲಿ ಹೊಸ ಶಕ್ತಿಯನ್ನು ಮೂಡಿಸ ಬಹುದು.

ಒಂದು ನಾಡಿನ ಸಂಸ್ಕೃತಿಯ ಪ್ರತೀಕ ಅದರ ಕಲೆಗಳು. ಕನ್ನಡ ನಾಡು ಹಿಂದೆ ವೈಭವದಿಂದ ಬಾಳಿದೆ. ಇಂದಿನ ಸ್ವಾತಂತ್ರ್ಯ ಇತಿಹಾಸ ಕಟ್ಟುವುದರಲ್ಲಿ ಅದು ಅಪಾರ ಸೇವೆ, ತ್ಯಾಗ, ಪರಾಕ್ರಮಗಳನ್ನು ತೋರಿದೆ. ಭಾರತದ ಅಮರ ಇತಿಹಾಸದಲ್ಲಿ ಕರ್ನಾಟಕ ತನ್ನ ಸ್ಥಾನವನ್ನು—ಸುಭದ್ರ ವಾದ ಸ್ಥಾನವನ್ನು—ದೊರಕಿಸಿಕೊಂಡಿದೆ. ಹಲವು ವಿಷಯಗಳಲ್ಲಿ ಇಡೀ ಭಾರತಕ್ಕೆ ಕರ್ನಾಟಕ ಮಾರ್ಗದರ್ಶನ ಮಾಡಿದೆ. ಸಾಹಿತ್ಯ, ಕಲೆಗಳ ಅಭಿರುಚಿ ಕನ್ನಡಿಗರ ಹುಟ್ಟುಗುಣ. ಅವರಿಂದು ತಮ್ಮ ಸುಪ್ತಚೈತನ್ಯದರಿವು ಮಾಡಿಕೊಂಡು ರಾಷ್ಟ್ರೀಯ ರಂಗಭೂಮಿಯನ್ನು ಬೆಳಸಿದರೆ ಇಡೀ ಭಾರತಕ್ಕೆ ಒಂದು ಮೇಲ್ಪಂಕ್ತಿ ಹಾಕಿಕೊಟ್ಟಂತಾಗುತ್ತದೆ. ಇಂಥ ಪ್ರಯತ್ನಕ್ಕೆ ಕನ್ನಡನಾಡಿನ ಎಲ್ಲ ಸಾಹಿತಿಗಳು, ಕಲಾವಿದರು ಮನಸ್ಸು ಕೊಡಲೆಂದು ನನ್ನ ಹಾರೈಕೆ.

————

# ೧೦. ನಾಟಕ ಮತ್ತು ನಗರ ಸಭೆಗಳು

ಈಗ ಪ್ರಕಟವಾಗುವ ನನ್ನ 'ಕರ್ನಾಟಕದ ಕಲಾವಿದರು' ಗ್ರಂಥದ ಮುನ್ನುಡಿಯಲ್ಲಿ ನಾಟಕದ ಬಗ್ಗೆ ನಾನು ಹೇಳಿರುವ ಕೆಲವು ಮಾತುಗಳಿವು :

"ನಾಟಕದ ಸ್ಥಿತಿಯೂ ಹೇಳಿಕೊಳ್ಳುವ ಹಾಗಿಲ್ಲ. ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರ ಕಾಲದಲ್ಲಿ ಕನ್ನಡ ನಾಟಕ ಅತ್ಯುನ್ನತ ಶಿಖರವನ್ನು ಮುಟ್ಟಿತು. ಮಹಮದ್ ಪೀರರವರೂ, ಜಿ. ಎಚ್. ವೀರಣ್ಣನವರೂ ಅದನ್ನು ಹಲವು ವಿಧದಲ್ಲಿ ಬೆಳಸಿದರು. ಮೈಸೂರು, ಬೆಂಗಳೂರು, ಮಂಗಳೂರು, ಬಾಗಲುಕೋಟೆ, ಧಾರವಾಡದ ನಾಟ್ಯವಿಲಾಸಿಗಳು ಕೆಲವು ಸ್ವಾರಸ್ಯವಾದ ಪ್ರಯೋಗಗಳನ್ನು ನಡೆಸಿದರು. ಆದರಿಂದು ನಾಟ್ಯೋಪಜೀವಿಗಳಲ್ಲಾಗಲಿ, ನಾಟ್ಯವಿಲಾಸಿಗಳಲ್ಲಾಗಲಿ ನಾಟಕದ ಬಗ್ಗೆ ಸಾಕಷ್ಟು ಕಳಕಳಿಯಿಲ್ಲ. ಉತ್ತಮ ನಟರಾದ ಹಂದಿಗನೂರು ಸಿದ್ದರಾಮಪ್ಪ, ಬಸವರಾಜ ಮನ್ಸೂರ್, ರಾಮಚಂದ್ರ ಶಾಸ್ತ್ರಿ, ಎಚ್. ಎಲ್. ಎನ್. ಸಿಂಹ ಮೊದಲಾದವರು ಸಣ್ಣಪುಟ್ಟ ಸಂಘಗಳನ್ನು ಕಟ್ಟಿಕೊಂಡು ತೊಳಲಾಡುತ್ತಿದ್ದಾರೆ. ಸಂಘಗಳನ್ನು ಬೆಳಸಿ ಆಧುನಿಕ ರಂಗೋಪಕರಣಗಳಿಂದ ಅವುಗಳನ್ನು ಸಿದ್ಧಗೊಳಿಸಿ ಹೊಸ ಹೊಸ ಪ್ರಯೋಗಗಳನ್ನು ನಡೆಸುವುದಕ್ಕೆ ಹಣದ ಅಭಾವ, ಪ್ರೋತ್ಸಾಹದ ದಾರಿದ್ರ್ಯ. ಎಲ್ಲಕ್ಕೂ ಮೊದಲಾಗಿ ನಾಟಕ ಪ್ರದರ್ಶನಕ್ಕೆ ಮಂದಿರಗಳಿಲ್ಲ. ಪ್ರತಿ ಊರಿನ ನಾಟಕ ಶಾಲೆಯೂ ಸಿನಿಮಾ ಮಂದಿರವಾಗಿದೆ. ಸಿನಿಮಾ ನಿಲ್ಲಿಸಿ ನಾಟಕಕ್ಕೆ ಮಂದಿರವನ್ನು ಒಂದೆರಡು ದಿವಸ ಬಿಟ್ಟುಕೊಡಲು ಅವರು ಅಪಾರ ಹಣ ಬೇಡುತ್ತಾರೆ. ಈ ಸಮಸ್ಯೆಯನ್ನು ಸ್ಥಳೀಯ ನಗರ ಸಭೆಗಳು ಎದುರಿಸಬೇಕು. ನಾಟಕ, ಸಂಗೀತಗಳ ಸಲುವಾಗಿಯೇ ಸ್ಥಳೀಯ ನಗರ ಸಭೆಗಳು ಸಭಾಭವನಗಳನ್ನು ಕಟ್ಟಿಸಿ, ಕನ್ನಡ ನಾಟಕ ಮಂಡಳಿಗಳಿಗೆ ಅವುಗಳ ಉಪಯೋಗವನ್ನು ಅತ್ಯಲ್ಪ ಶುಲ್ಕಕ್ಕೆ ಕೊಡಬೇಕು."

ಈಗ ಒಂದೂವರೆ ದಶಕದಿಂದ ಕನ್ನಡ ನಾಟಕಗಳ ಸ್ಥಿತಿ ಶೋಚನೀಯವಾಗಿದೆ ಆಧುನಿಕ ಕನ್ನಡ ಸಾಹಿತ್ಯದ ಅರುಣೋದಯ ಕಾಲದಲ್ಲಿ

ಕಂಡುಬಂದ ಚಟುವಟಿಕೆ ಏಕೋ ಏನೋ ಹೇಳಹೆಸರಿಲ್ಲದಂತಾಗಿದೆ. ವ್ಯಾಪಾರ ದೃಷ್ಟಿಯಿಂದ ನಡೆಯುವ ನಾಟ್ಯೋಪಜೀವಿ ಮಂಡಳಿಗಳು ಕೂಡ ಸಿನಿಮಾದ ಸ್ಪರ್ಧೆಯನ್ನು ಎದುರಿಸಲಾರದೆ ನೆಲಕ್ಕುರುಳಿದವು. ನಾಟ್ಯ ವಿಲಾಸಿಗಳು ನಿರ್ವಿಣ್ಣರಾದರು.

ನಾಟಕ ಜನತೆಯ ಶಿಕ್ಷಣ, ವಿಹಾರಗಳೆರಡರ ಪರಮ ಸಾಧನ. ರಾಷ್ಟ್ರದ ಜಾಗೃತಿಗೆ ಅದನ್ನು ರಷ್ಯಾ ಬಹಳ ಚೆನ್ನಾಗಿ ಅಳವಡಿಸಿಕೊಂಡಿತು. ರಷ್ಯಾದಲ್ಲಿ ಗ್ರೀಕ್ ಚರ್ಚುಗಳು ನಾಟಕವನ್ನು ತುಳಿದಿದ್ದವು. ರಾಜಮನೆತನ ಅದನ್ನು ವಿಲಾಸದ ಸಾಧನವನ್ನಾಗಿ ಉಪಯೋಗಿಸಿಕೊಂಡಿತ್ತು. ಮಹಾ ಕ್ರಾಂತಿಯಾದನಂತರ ನಾಟಕಕ್ಕೆ ಸಾರ್ವಜನಿಕ ಸ್ವರೂಪ ಬಂದು ಪ್ರತಿಯೊಂದು ಊರಿನಲ್ಲಿಯೂ ನಾಟಕದ ನಾನಾಮುಖದ ಪ್ರಯೋಗ ಆರಂಭವಾಯಿತು. ವಯಸ್ಕರ ಶಿಕ್ಷಣ, ರಾಜಕೀಯ ಜಾಗೃತಿ, ಸಮಾಜ ಸುಧಾರಣೆಗಳೆಲ್ಲವೂ ನಾಟಕರಂಗದಲ್ಲಿ ಸಜೀವ ಸ್ವರೂಪದಲ್ಲಿ ಕಾಣಿಸಿಕೊಂಡವು. ಐರ್ಲೆಂಡಿನಲ್ಲಿಯೂ ಇಂತಹ ಪ್ರಯತ್ನ ನಡೆಯಿತು. ಮಹಾಕವಿ ವಿಲಿಯಂ ಬಟ್ಲರ್ ಯೀಟ್ಸ್ 'ಇಡೀ ಐರ್ಲೆಂಡೇ ರಂಗಭೂಮಿಯ ಮೇಲೆ ನಡೆಯಬೇಕು' ಎಂದು ಘೋಷಿಸಿದ. ಮುನಿಸಿಪಲ್ ನಾಟಕ ಶಾಲೆಗಳೂ, ನಾಟಕ ಮಂಡಳಿಗಳೂ ಯಥೇಚ್ಛವಾಗಿ ಹುಟ್ಟಿಕೊಂಡವು.

ನಾಟಕದ ಪುನರುದ್ಧಾರದ ಕೆಲಸವನ್ನು ನಗರ-ಸಭೆಗಳು ಕೈಗೊಳ್ಳಬೇಕು. ಪ್ರತಿಯೊಂದು ನಗರ ಸಭೆಯೂ ನಾಟಕಕ್ಕೆ ಮೀಸಲಾಗಿ ಒಂದು ಮಂದಿರವನ್ನು ಕಟ್ಟುವುದಲ್ಲದೆ, ಪ್ರದರ್ಶನ ಸಂಸ್ಥೆಗಳನ್ನು ನಡೆಸಬೇಕು. ಜನತಾ ಶಿಕ್ಷಣದ ಪ್ರಶ್ನೆ ಎಲ್ಲರ ಮನಸ್ಸಿನ ಮೇಲೆ ಮೂಡಿರುವಾಗ ಅದನ್ನು ಸಾಧಿಸಲು ನಾಟಕದ ನೆರವನ್ನೇತಕ್ಕೆ ಪಡೆಯಬಾರದು. ಮುನಿಸಿಪಲ್ ನಾಟಕ ಸಂಸ್ಥೆಗಳು :

೧. ಜನತಾ ಶಿಕ್ಷಣಕ್ಕೆ ಬೇಕಾಗುವ ಸಮಸ್ಯೆಗಳನ್ನು ನಾಟಕ ರೂಪದಲ್ಲಿ ಬರೆಯಿಸಿ ಪ್ರದರ್ಶಿಸಬಹುದು.

೨. ಪರಸಂಸ್ಕೃತಿಯ ಪರಿಚಯ ಮಾಡಿಕೊಡುವ ನಾಟಕಗಳನ್ನು ಪ್ರದರ್ಶಿಸಬಹುದು.

೩. ಕನ್ನಡದಲ್ಲಿ ನಡೆಯುತ್ತಿರುವ ಪ್ರಾಯೋಗಿಕ ನಾಟಕಗಳಿಗೆ ರಂಗ ವೇದಿಕೆಯನ್ನು ನಿರ್ಮಿಸಬಹುದು.

ಪಕ್ಷ ಪ್ರತಿಪಕ್ಷಗಳ ಸ್ವಯೂಥ ಕಲಹ, ಸ್ಥಾನಮಾನಗಳ ಗೊಂದಲದಲ್ಲಿ ನಿರತವಾಗಿರುವ ನಗರ ಸಭೆಗಳು ಇಂತಹ ಕ್ರಿಯಾತ್ಮಕ ಕೆಲಸದಲ್ಲಿ ತೊಡಗಿದರೆ ದೇಶಕ್ಕೆ ಎಷ್ಟೋ ಕ್ಷೇಮ ಲಭಿಸುತ್ತದೆ.

———

# ೧೧. ಶಿವಗಂಗೆ

ಶಿವಗಂಗಾ ಕ್ಷೇತ್ರ ಬೆಂಗಳೂರಿಗೆ ೩೪ ಮೈಲಿಗಳ ದೂರದಲ್ಲಿದೆ. ಬ್ರಾಹ್ಮಣ, ವೀರಶೈವರಿಬ್ಬರಿಗೂ ಇದು ಪವಿತ್ರ ಯಾತ್ರಾಕ್ಷೇತ್ರ. ಪುರಾತನ ದೇವಾಲಯಗಳೂ, ಮಠಗಳೂ ಶಿವಗಂಗೆಯಲ್ಲಿವೆ. ಗಂಗರಸರ ಕಾಲ ದಿಂದಲೂ ಕರ್ನಾಟಕದ ನಕ್ಷೆಯ ಮೇಲೆ ಶಿವಗಂಗೆ ಮೂಡಿದೆ. ಮೊದಲನೆಯ ಮತ್ತು ಎರಡನೆಯ ಕೆಂಪೇಗೌಡರು (ತಂದೆ, ಮಗ) ಗುಡಿ ಗೋಪುರಗಳನ್ನು ಕಟ್ಟಿಸಿ, ಗಂಗಾಧರೇಶ್ವರ, ಹೊನ್ನಮ್ಮ ದೇವಾಲಯ ಗಳನ್ನು ಜೀರ್ಣೋದ್ಧಾರ ಮಾಡಿದರು. ಬೇಲೂರು ಕಲಾ ವೈಭವಕ್ಕೆ ಮೂಲಕಾರಣಳಾದ ಶಾಂತಲಾದೇವಿ ಇಲ್ಲಿಯೇ ನಿಧನಳಾದಳೆಂದು ಪ್ರತೀತಿ.

ಶಿವಗಂಗೆ ಬೆಟ್ಟದ ಭವ್ಯರೂಪ, ಅದರ ಚಿತ್ರರಮಣೀಯತೆ ಕಲಾ ವಿದರನ್ನು ತಣಿಸುತ್ತವೆ. ಇದರಲ್ಲಿನ ಗುಹೆಗಳು, ಪಾತಾಳಗಂಗೆ ನೋಟಕ ರನ್ನು ಬೆರಗುಗೊಳಿಸುತ್ತವೆ. ಕಲೆ ಶಾಂತಿಯನ್ನೂ, ಚಿತ್ತ ಸ್ವಾಸ್ಥ್ಯವನ್ನೂ ಸಾಧಿಸುತ್ತದೆಂದು ಸಾಕ್ಷಿತೋರಬೇಕಾದರೆ ಶಿವಗಂಗೆಯ ಕಡೆ ಕೈಬೆರಳು ತೋರಿಸಬಹುದು. ಗಂಗಾಧರಸ್ವಾಮಿ ದೇವಾಲಯದಲ್ಲಿ ಮಹಿಷಾಸುರ ಮರ್ದಿನಿ, ನಾರಾಯಣ, ಭೈರವ, ಹರಿಹರ, ಸುಬ್ರಹ್ಮಣ್ಯ ಮತ್ತು ವಿಘ್ನೇಶ್ವರ ವಿಗ್ರಹಗಳೂ, ಮಾಗಡಿ ಕೆಂಪೇಗೌಡ ಆತನ ತಮ್ಮಂದಿರಾದ ಊಳಿಗದ ಬಸವಯ್ಯ, ಕೆಂಪು ಸೋಮಣ್ಣ ಇವರ ಭಕ್ತ ವಿಗ್ರಹಗಳೂ ಸುಂದರಮೂರ್ತಿಗಳಾಗಿವೆ.

ಬೆಟ್ಟದ ಕೆಳಗೆ ಶಿವಗಂಗೆ ಮಠವಿದೆ. ಅಲ್ಲಿರುವ ಶಾರದಾದೇವಿಯ ಅಮೃತಶಿಲಾ ಪ್ರತಿಮೆ ಪ್ರೇಕ್ಷಣೀಯವಾಗಿದೆ.

ಇಂತಹ ಪ್ರದೇಶ ಜಾತ್ರೆಯ ಕಾಲದಲ್ಲಿ ಮಾತ್ರವಲ್ಲದೆ ಉಳಿದ ಕಾಲ ಗಳಲ್ಲಿಯೂ ಭಕ್ತರಿಗೆ, ರಸಿಕರಿಗೆ ಸ್ವಾಗತ ಬಯಸುತ್ತದೆ. ಆದರೆ ಪ್ರವಾಸಿಗರಿಗೆ ಯಾವ ಸೌಕರ್ಯವೂ ದೊರೆಯುವುದಿಲ್ಲ. ಒಂದು ಒಳ್ಳೆಯ ನಿಲುಮನೆಯುಲ್ಲ, ಒಂದು ಉತ್ತಮ ಹೊಟೇಲ್ ಇಲ್ಲ. ಊರಿನವರು ಅತಿಥಿಸತ್ಕಾರಕ್ಕೆ ಅಷ್ಟೇನು ಹೆಸರಾದವರಲ್ಲ. ಸ್ವಂತ ಸೌಕರ್ಯವಿಲ್ಲದೆ ಶಿವಗಂಗೆಗೆ ಹೋಗಿ ಬರುವುದು ಸಾಧ್ಯವಿಲ್ಲ.

ಗಂಗಾಧರ ಸ್ವಾಮಿಯ ಗುಡಿಯೊಳಗಿರುವ ಲೋಹ ಪ್ರತಿಮೆಗಳ ಪಾಡು ಶೋಚನೀಯ. ದೇವಸ್ಥಾನವನ್ನು ಕೇಳುವವರು ಗತಿಯಿಲ್ಲ. ಲೋಹ ಪ್ರತಿಮೆಗಳ ಮೇಲೆ ಕಿಲುಬು ಕೂತಿರುತ್ತದೆ. ದೇವಸ್ಥಾನದ ಒಳಗೆ ಕಪಟದ ಹಕ್ಕಿಯ ಉಚ್ಚಿಷ್ಟದ ದುರ್ವಾಸನೆ.

ಹಿಂದೂಸ್ಥಾನವಾದ ಮೈಸೂರಿನಲ್ಲಿ ಆದರ ದೇವಸ್ಥಾನಗಳ ಸ್ಥಿತಿ ಹೇಳಿಕೊಳ್ಳುವ ಹಾಗಿಲ್ಲ. ಶಿವಗಂಗೆಯನ್ನು ಸುಧಾರಿಸಿ ದೇವಸ್ಥಾನವನ್ನು ಸುವ್ಯವಸ್ಥಿತ ಮಾಡಿ ಯಾತ್ರಿಕರಿಗೂ, ಪೋಷಕರಿಗೂ ಅವಶ್ಯಕವಾದ ಅನುಕೂಲ್ಯಗಳನ್ನು ಕಲ್ಪಿಸಿಕೊಡುವುದು ಮುಜರಾಯ್ ಖಾತೆಯ ಕರ್ತವ್ಯ. ಪ್ರಾಚೀನ ಶೋಧನ ಶಾಖೆಯವರು ಶಿವಗಂಗೆಯ ಪೂರ್ವೇತಿಹಾಸವನ್ನು ನಿರೂಪಿಸುವ ಹೊತ್ತಗೆಗಳನ್ನು ಕನ್ನಡ, ಇಂಗ್ಲಿಷು ಭಾಷೆಗಳಲ್ಲಿ ಸಚಿತ್ರವಾಗಿ ಪ್ರಕಟಿಸಬೇಕು.

———

# ೧೨. ಬೇಲೂರು

ಆಳಿದ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಮತ್ತು ಅಮಾತ್ಯ ಮಿರ್ಜಾ ಇಸ್ಮಾಯಿಲರ ಕೃಪಾಕಟಾಕ್ಷ ದಿಂದ ಬೇಲೂರು ದೇವಸ್ಥಾನದ ಜೀರ್ಣೋದ್ಧಾರ ಕೆಲಸ ಆರಂಭವಾಯಿತು. ದಕ್ಷರಾದ ಜನ ಕೆಲಸವನ್ನು ತೃಪ್ತಿಕರವಾಗಿ ನಿರ್ವಹಿಸುತ್ತಿದ್ದಾರೆ. ದೇವಾಲಯಗಳು ಕುಸಿದು ಬೀಳದ ಹಾಗೆ ಅವುಗಳನ್ನು ರಕ್ಷಿಸುವ ಪ್ರಯತ್ನ ಶ್ಲಾಘನೀಯವಾಗಿದೆ.

ಆಗಬೇಕಾದ ಕೆಲಸದ ಮುಂದೆ ಆಗಿರುವ ಕೆಲಸ ತೀರ ಸ್ವಲ್ಪ. ಬೇಲೂರಿನ ಸುತ್ತಮುತ್ತ ಇದೇ ಶಿಲ್ಪ ಸಂಪ್ರದಾಯಕ್ಕೆ ಸೇರಿದ ದೇವಾಲಯ ಗಳಿವೆ. ಅವು ಶಿಥಿಲವಾಗುತ್ತಿವೆ. ಊರು ತುಂಬ ಶಾಸನಗಳು, ವೀರಗಲ್ಲು ಗಳು, ಮಾಸತಿಗಲ್ಲುಗಳು ಓಡಿಯಾಡುತ್ತಿವೆ. ಅಗೆದಲ್ಲಿ ದೇವತಾ ಮೂರ್ತಿಗಳ ರುಂಡಮುಂಡಗಳು ದೊರೆಯುತ್ತಿವೆ. ದೇವಾಲಯದ ರಕ್ಷಣೆ ಪೋಷಣೆಗಳ ಬಗ್ಗೆ ಎಷ್ಟು ಜಾಗರೂಕತೆ ಬೇಕೋ ಅಷ್ಟು ಕಾಣಬರುವುದಿಲ್ಲ. ಕಲ್ಲಿನಲ್ಲಿ ಲೋಹಶಬ್ದ ಹೊರಡಿಸಲುತ್ಸುಕರಾದ ಊರಿನವರು, ಪ್ರವಾಸಿಗರು ಮೂರ್ತಿ ಗಳನ್ನು ಹೊಡೆದು ಅಂದಗೆಡಿಸುತ್ತಿದ್ದಾರೆ. ಪ್ರತಿಯೊಂದು ದೇವಾಲಯ ನೋಡಿಕೊಳ್ಳುವುದಕ್ಕೆ ಯೋಗ್ಯರಾದ ಕಾಪಿನವರು ಬೇಕು.

ದೇವಸ್ಥಾನವನ್ನು ಪರಸ್ಥಳದವರಿಗೆ ವಿವರಿಸಿ ಹೇಳುವವರು ಹಳೆಯ ಕಾಲದವರು. ಅವರಿಗೆ ಇತಿಹಾಸ ಗೊತ್ತಿಲ್ಲ, ಪುರಾಣ ಕಥೆಗಳನ್ನು ಹೇಳುವದರ ಜತೆಗೆ ತಮ್ಮ ಕಲ್ಪನೆಯ ಅಸಂಬದ್ಧತೆಯನ್ನೂ ಬೆರಸುತ್ತಾರೆ. ಇಂತಹ ಸ್ಥಳಗಳಲ್ಲಿ ಸುಶಿಕ್ಷಿತರೂ, ಇತಿಹಾಸಜ್ಞರೂ ಆದ ತೋರುಗಾರರ (Guides) ಆವಶ್ಯಕತೆ ಇದೆ. ಸರ್ಕಾರ ಈ ವಿಷಯದಲ್ಲಿ ಕಾರ್ಪಣ್ಯ ತೋರದೆ ಪ್ರಾಚ್ಯ ಸಂಶೋಧನಾ ಚತುರರಾದವರನ್ನು ಸ್ಥಳೀಯ ಅಧಿಕಾರಿ ಗಳಾಗಿ (Curator) ನಿಯಮಿಸಬೇಕು., ಪ್ರಾಚೀನ ಶೋಧನ ಶಾಖೆಯವರು ದೇಶಭಾಷೆಗಳು ಮತ್ತು ಇಂಗ್ಲೀಷಿನಲ್ಲಿ ಸಚಿತ್ರ ಗ್ರಂಥಗಳನ್ನು ಪ್ರಕಟಿಸಿ ಅವುಗಳು ದೇವಾಲಯಗಳಲ್ಲಿ ಕ್ರಯಕ್ಕೆ ದೊರೆಯುವ ಹಾಗೆ ಮಾಡಬೇಕು.

ಬೇಲೂರಿನ ಒಂದು ಮೂಲೆಯಲ್ಲಿ ಪಾತಾಳೇಶ್ವರನ ದೇವಾಲಯವಿದೆ. ಇದು ಕನ್ನಡ ಕವಿಗಳಲ್ಲೊಬ್ಬನಾದ ರಾಘವಾಂಕನ ಸಮಾಧಿಯೆಂದು ಪ್ರತೀತಿ. ದೇವಸ್ಥಾನ ಶೋಚನೀಯ ಸ್ಥಿತಿಯಲ್ಲಿದೆ. ಮಣ್ಣು ಶೇಖರಗೊಂಡು ದೇವಾಲಯ ಮುಚ್ಚಿಹೋಗುತ್ತಿದೆ. ಅದರ ಸುತ್ತಮುತ್ತ ಹಲವು ಸುಂದರ ವಿಗ್ರಹಗಳಿವೆ. ಪಾತಾಳೇಶ್ವರನ ದೇವಾಲಯಕ್ಕೆ ಯಾವ ರಕ್ಷಣೆಯೂ ಇಲ್ಲ. ಈ ದೇವಸ್ಥಾನದ ಬಗ್ಗೆ ಊರಿನ ಕೆಲವು ಹಿರಿಯರ ಗಮನವನ್ನು ನಾನು ಸೆಳೆದು ಪ್ರಸ್ತಾಪಿಸಿದೆ. ಅವರಿಗೆ ಬೇಕಿಲ್ಲದ ವಿಷಯವಿದು. ಕನ್ನಡ ಮಹಾಕವಿಯೊಬ್ಬನಿಗೆ ಕನ್ನಡಿಗರು ತೋರಿರುವ ಆದರಕ್ಕೆ ಪಾತಾಳೇಶ್ವರನ ದೇವಾಲಯವೇ ಪರಮಸಾಕ್ಷಿ. ಸರ್ಕಾರದ ಗಮನವಾದರೂ ಇತ್ತ ಬೀಳಲಿ.

ಲಾರ್ಡ್ ಕರ್ಜನ್ ಸಾಹೇಬರು ಭಾರತದ ವೈಸ್ರಾಯರಾಗಿದ್ದಾಗ ಪ್ರಾಚ್ಯಕಲಾ ಸಂಪತ್ತಿನ ಕಡೆ ದೇಶೀಯರ ಗಮನವನ್ನು ಸೆಳೆದರು. ಅವರ ಉತ್ಸಾಹದಿಂದ ಹೈದರಾಬಾದಿನಲ್ಲಿ ಅಜಂತಾ, ಎಲ್ಲೋರಾ ಗುಹಾಂತರ್ದೇವಾಲಯಗಳ ಸಂರಕ್ಷಣೆಯಾಯಿತು. ಹೊರಗಿನವರು ಬಂದು ನಮ್ಮ ಕಣ್ಣು ಬಿಡಿಸುವವರೆಗೆ ನಾವು ಕಣ್ಣು ಬಿಡುವುದಿಲ್ಲ. ಇದೆಂತಹ ದಾಸ್ಯ!

ಪ್ರಾಚ್ಯ ಸಂಶೋಧನೆಗೆ ಮೀಸಲಾಗಿರುವ ಹಣ ಏತಕ್ಕೂ ಸಾಲದು. ಪ್ರಾಚ್ಯ ಸಂಶೋಧನ ಇಲಾಖೆಯನ್ನು ಇಟ್ಟುಕೊಂಡು ಅದಕ್ಕೆ ಗುಟುಕು ನೀರು ಕುಡಿಸುವದು ಸರ್ಕಾರಕ್ಕೆ ಶೀಲವಲ್ಲ. ಹಿಂದೂ ಸಂಸ್ಥಾನದಲ್ಲಿಯೇ ಹಿಂದೂ ದೇವಾಲಯಗಳು ಹೀಗೆ ಹಾಳಾಗುತ್ತಿದ್ದರೆ ಅವುಗಳ ಗತಿಯೇನು?

# ೧೩. ಕನ್ನಡ ನಾಡಿನಲ್ಲಿ ಚಿತ್ರಕಲೆ

ಯುದ್ಧ ಮುಗಿಯುವ ಕೆಲವು ದಿವಸ ಮುನ್ನ 'ಯುದ್ಧಾನಂತರದ ನಿಯೋಜನೆಗಳು' ಪುಂಖಾನುಪುಂಖವಾಗಿ ಹೊರಬಿದ್ದವು. ದೇಶದ ಆರ್ಥಿಕ, ಔದ್ಯೋಗಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಕುರಿತು ದಕ್ಷರು ವಿವೇಚಿಸಿದರು. ಆದರೆ ಪ್ರಬಲ ಗಾಂಡೀವವಾಗಿ ತಲೆದೋರಿದ ಅನ್ನಸಮಸ್ಯೆಯಲ್ಲಿ ಇವೆಲ್ಲ ಹಿಂದೆ ಬೀಳಬೇಕಾಯಿತು.

ಯುದ್ಧಾನಂತರದ ನಿಯೋಜನೆಗಳಲ್ಲಿ ಎಲ್ಲಿಯೂ ಕಲೆಗಳ ಬಗ್ಗೆ ಪ್ರಸ್ತಾಪವಿಲ್ಲ. ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿ ಇಂತಹ ನಿಯೋಜನೆಯೊಂದನ್ನು ಲೋಕದ ಮುಂದಿರಿಸಿದ ಪ್ಲೇಟೋ ತನ್ನ 'ರಿಪಬ್ಲಿಕ್'ನಲ್ಲಿ ಕಲೆಗಳನ್ನು ಮರೆಯಲ್ಲಿಲ್ಲ. ರಾಜ್ಯಾಂಗರಚಕರಿಗೂ ರಾಜಕಾರಣಪಟುಗಳಿಗೂ ಕಲೆಗಳ ಸಂಬಂಧ ಯಾವಾಗಲೂ ಸ್ವಲ್ಪ ಹಾಗೆಹಾಗೆ! ಕಲೆಗಳ ಬಗ್ಗೆ ಅವರ ಪರಂಪರಾಗತ ಧೋರಣೆಯೇ ಈಗಲೂ ವ್ಯಕ್ತವಾಗುತ್ತಿದೆ.

ಭಾರತದಲ್ಲಿ ಕಲೆಗಳು ಆಲಸ್ಯಗರಳವನ್ನೆದುರಿಸಿ ಬೆಳೆದಿವೆ. ರಾಜ ಮಹಾರಾಜರು, ಶ್ರೀಮಂತರು, ನವಾಬರು ಇವರ ವಿಲಾಸಕ್ಕಾಗಿ ಒಂದು ಕಡೆ; ಸಾಮಾನ್ಯ ಜನತೆಯ ಭಾವಪ್ರದರ್ಶನ ಸಾಧನವಾಗಿ ಇನ್ನೊಂದು ಕಡೆ ಕಲೆ ಬೆಳೆಯಿತು. ಧರ್ಮವೂ ಕಲೆಯನ್ನು ಬಿಡಲಿಲ್ಲ. ಕಲೆ ಧರ್ಮ ಪ್ರಸಾರದ ಸಾಧನವಾಯಿತು. ಕಾಂಗ್ರಾ, ಮೊಘಲ ಸಂಪ್ರದಾಯಗಳ ಚಿತ್ರಕಲೆ, ಫೈಜೆ ರಹಮಾನ್, ಷೇರ್‌ಗಿಲ್, ಚುಗ್ತಾಯ್ ಮೊದಲಾದ ಆಧುನಿಕ ಚಿತ್ರಗಾರರ ಕೃತಿಗಳು ಶ್ರೀಮಂತರ ವಿಲಾಸವನ್ನು ಸಾರುತ್ತಿವೆ. ರಂಗವಲ್ಲಿ ಕಲೆ, ಜಾತ್ರೆ ಚಿತ್ರಗಳು, ಭಿತ್ತಿ ಚಿತ್ರಗಳು ಜಾನಪದಕಲೆಯ ಸಾಕ್ಷಿಗಳಾಗಿವೆ. ಅಜಂತಾ, ಬಾದಾಮಿ, ಸೀತಾನ್ನಿವಾಸಲ್, ಬಾಘ್ ಗುಹಾಂತರ್ದೇವಾಲಯಗಳ ಚಿತ್ರಗಳು ಧರ್ಮದ ವ್ಯಾಪ್ತಿಯನ್ನು ನಿರ್ದೇಶಿಸುತ್ತವೆ. ಶ್ರೀಮಂತ ಕಲೆಯನ್ನು ಜನಪದದ ಶಿಕ್ಷಣ ಉಲ್ಲಾಸಗಳ ಸಾಧನವಾಗಿ ಬಳಸಿದವರು ನಂದಲಾಲಬೋಸ್ ಮತ್ತು ದೇವೀ ಪ್ರಸಾದ ರಾಯ್ ಚೌಧುರಿ. ಜಾನಪದ ಕಲೆಯನ್ನೇ ತೆಗೆದುಕೊಂಡು ಅದಕ್ಕೆ

ಹೆಚ್ಚಿನ ಕಲಾಪರಿಪಕ್ವತೆಯನ್ನು ಕೊಟ್ಟಿರುವವರಲ್ಲಿ ಜೆಮಿನಿರಾಯರೊಬ್ಬರೇ ಗಣನಾರ್ಹರು.

ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ನಾನಾ ಮುಖದ ಪ್ರಯತ್ನ ನಡೆದಂತೆ ಕರ್ನಾಟಕದಲ್ಲಿಯೂ ನಡೆದಿದೆ. ಶುದ್ಧ ಶ್ರೀಮಂತ ಸಂಪ್ರದಾಯದ ಕೆ. ವೆಂಕಟಪ್ಪನವರು, ಶ್ರೀಮಂತ ಸಂಪ್ರದಾಯವನ್ನು ಜಾನಪದಕ್ಕೆ ಅಳವಡಿಸಿಕೊಂಡಿರುವ ಮಿಣಜಗಿ, ಕಮಡೋಳಿಯವರು ಕನ್ನಡ ಚಿತ್ರ ಕಲೆಯ ನಂದಾದೀಪವನ್ನು ಬೆಳಗಿಸುತ್ತಿದ್ದಾರೆ.

ಆದರೆ ಕಲೆಗಳ ಬಗ್ಗೆ-ಅದರಲ್ಲಿಯೂ ಚಿತ್ರಕಲೆಯ ಬಗ್ಗೆ ಕರ್ನಾಟಕದಲ್ಲಿ ಮೂಡಿರುವಷ್ಟು ಆಲಸ್ಯ, ಅಜ್ಞಾನ ಜಗತ್ತಿನ ಯಾವ ಭಾಗದಲ್ಲಿಯೂ ಕಂಡುಬರುವುದಿಲ್ಲ. ಮಧ್ಯಮ ವರ್ಗದವರ ಮನೆಗಳಲ್ಲಿ ಕಂಡುಬರುವ ರವಿವರ್ಮನ ಚಿತ್ರಗಳು, ಶ್ರೀಮಂತರ ಮನೆಗಳಲ್ಲಿ ಮೆರೆಯುವ ಜಪಾನೀ ಗೀಷಾ ಹುಡುಗಿಯರ ಚಿತ್ರಗಳು ಈ ಆರೋಪಕ್ಕೆ ಸಾಕಷ್ಟು ಆಧಾರವನ್ನೊದಗಿಸುತ್ತವೆ. ಭಾರತದ ಕಲಾವಿದರ ಪರಿಚಯ ಜನಸಾಮಾನ್ಯಕ್ಕೆ ಸ್ವಲ್ಪವೂ ಇಲ್ಲ. ಕಲಾಭಿರುಚಿಯನ್ನು ಬೆಳಸುವ ಯಾವ ಪ್ರಯತ್ನವೂ ಶಾಲೆ, ಕಾಲೇಜುಗಳಲ್ಲಿ ನಡೆದಿಲ್ಲ. 'ಫಿಲ್ಮ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟವಾಗುವ ಸಿನಿಮಾ ತಾರೆಯರ ಚಿತ್ರಗಳೇ ಕಲೆಯ ಪರಮಾವಧಿಯೆಂಬ ಕಲ್ಪನೆ ತರುಣ ಜನಾಂಗದಲ್ಲಿ ಮೂಡಿದೆ.

ಜನಸಾಮಾನ್ಯದಲ್ಲಿ ಕಲಾಭಿರುಚಿಯನ್ನು ಮೊಳಗಿಸುವ ಪ್ರಯತ್ನ ನಡೆಯಬೇಕಾಗಿದೆ. ಜನತೆ ಉತ್ತಮ ಕಲಾಕೃತಿಗಳನ್ನು ನೋಡುವದಕ್ಕೂ ಸಂಗ್ರಹಿಸುವುದಕ್ಕೂ ಸಾಧ್ಯವಾಗುವಂತೆ ಪ್ರಯತ್ನ ನಡೆಯಬೇಕು. ಇದರ ಸಾಧ್ಯಾಸಾಧ್ಯತೆಗಳನ್ನು ನೋಡೋಣ.

ಮೈಸೂರಿನಲ್ಲಿ ಜಗನ್ಮೋಹನ ಬಂಗಲೆಯಲ್ಲಿ ಒಂದು ಚಿತ್ರಶಾಲೆಯಿದೆ. ಇದು ಅರಮನೆಗೆ ಸೇರಿದ್ದು. ಆಳಿದ ಮಹಾಸ್ವಾಮಿಯವರಾದ ಶ್ರೀಮನ್ನಾಲ್ಮಡಿ ಕೃಷ್ಣರಾಜ ಒಡೆಯರವರು ಅರಮನೆಯ ಸಂಗ್ರಹದಲ್ಲಿದ್ದ ಕೆಲವು ಪ್ರಾಚೀನ ಕೃತಿಗಳ ಜೊತೆಗೆ ನೂತನ ಕೃತಿಗಳನ್ನು ಕೊಂಡು ಈ ಚಿತ್ರಾಲಯವನ್ನು ವ್ಯವಸ್ಥೆಗೊಳಿಸಿದರು. ಪ್ರಸಿದ್ಧ ಕಲಾವಿಮರ್ಶಕರಾದ ಡಾ|| ಜೆ. ಎಚ್. ಕಸಿನ್ಸ್‌ರವರು ಚಿತ್ರಗಳನ್ನು ತೂಗುಹಾಕಿ ಒಂದು ಕೆಟಲಾಗ್ ಪ್ರಕಟಿಸಿದರು.

ಪ್ರಸಿದ್ಧ ಭಾರತೀಯ ಚಿತ್ರಗಾರರ ಮೂಲಕೃತಿಗಳು ಸಿಕ್ಕದಿದ್ದ ಸಂದರ್ಭದಲ್ಲಿ ಅವುಗಳ ಪ್ರತಿಚಿತ್ರಗಳನ್ನು ಸಂಗ್ರಹಿಸಿ ಆಲಯದಲ್ಲಿಟ್ಟರು. ಈ ಕೆಲಸ ನಡೆದು ಒಂದೂವರೆ ದಶಕವಾಯಿತು. ಅಂದು ಚಿತ್ರಾಲಯ ಯಾವ ಸ್ಥಿತಿಯಲ್ಲಿತ್ತೋ ಇಂದೂ ಅದೇ ಸ್ಥಿತಿಯಲ್ಲಿದೆ. ಈಚೆಗೆ ಪ್ರಸಿದ್ಧಿಗೆ ಬಂದು ಉತ್ತಮ ಕಲಾಕೃತಿಗಳನ್ನು ರಚಿಸಿರುವ ಶಿಲ್ಪಿಗಳ ಚಿತ್ರಗಳು ಸೇರಿಲ್ಲ. ಕರ್ನಾಟಕದ ಪ್ರಸಿದ್ಧ ಕಲಾವಿದರಾದ ಮಿಣಜಿಗಿ, ಕಮಡೋಳಿ, ಎಲವಟ್ಟಿ, ವರ್ಖೇಡಿ, ದಂಡಾವತಿಮಠ, ನಾರಾಯಣ ಸಂಗಮ ಇವರ ಒಂದೊಂದು ಕೃತಿಯೂ ಇಲ್ಲ. ಚಿತ್ರಶಾಲೆಯನ್ನಿಟ್ಟಿರುವ ಕಟ್ಟಡ ಪುರಾತನವಾದದ್ದು. ಅದರಲ್ಲಿ ಬೆಳಕು, ಕತ್ತಲೆಯ ನಿಯೋಜನೆ ಸರಿಯಾಗಿಲ್ಲ. ವಿಕೃತರೂಪದಲ್ಲಿ ಬೆಳಕು ಚಿತ್ರಗಳ ಮೇಲೆ ಬಿದ್ದು ಅವುಗಳ ನಿಜರೂಪವನ್ನೇ ಮರೆಸುತ್ತಿವೆ. ಚಿತ್ರಶಾಲೆಗಾಗಿಯೇ ಬೇರೆ ಕಟ್ಟಡ ಬೇಕು. ತಿರುವನಂತಪುರದಲ್ಲಿ ಸ್ಥಾಪಿತವಾಗಿರುವ 'ಚಿತ್ರಾಲಯ' ಅನುಕರಣೀಯ ಮಾದರಿ.

ಬೆಂಗಳೂರಿನಲ್ಲಿ ಒಂದು 'ಮ್ಯೂಸಿಯಂ' ಇದೆ. ಇದಕ್ಕೆ ತಮಾಷ್ ಬಂಗಲೆ ಎಂಬ ಹೆಸರು ಯಥಾರ್ಥವಾಗಿದೆ. ಸತ್ತ ಪ್ರಾಣಿಗಳಿಂದ ಆರಂಭವಾಗಿ ಮ್ಯೂಸಿಯಂ ಆಧುನಿಕ ಚಿತ್ರಗಳವರೆಗೆ ಬೆಳದಿದೆ. ಕಟ್ಟಡ, ಪ್ರದರ್ಶನಕ್ಕೆ ಇಟ್ಟಿರುವ ವಸ್ತುಗಳು, ಅವು ಪ್ರದರ್ಶಿವಾಗಿರುವ ರೀತಿ ಎಲ್ಲ ಹಾಸ್ಯಾಸ್ಪದ.

ಮೈಸೂರಿನ ಚಿತ್ರಶಾಲೆ, ಬೆಂಗಳೂರಿನ ಮ್ಯೂಸಿಯಂ ಎರಡರಲ್ಲಿರುವ ಉತ್ತಮ ಕಲಾಕೃತಿಗಳನ್ನು ಒತ್ತಟ್ಟಿಗೆ ಕೂಡಿಸಿ, ಪ್ರತ್ಯೇಕ ಕಟ್ಟಡದಲ್ಲಿ ಅವುಗಳನ್ನು ಸ್ಥಾಪಿಸಿ, ಆಧುನಿಕ ಚಿತ್ರಗಾರರ ನೂತನ ಕೃತಿಗಳನ್ನು ಸೇರಿಸಬೇಕು. ನೂತನ ಚಿತ್ರಶಾಲೆಯಲ್ಲಿ

೧) ಭಾರತದ ಹಾಗೂ ಕರ್ನಾಟಕದ ವಿವಿಧ ಸಂಪ್ರದಾಯಗಳಿಗೆ ಸೇರಿದ ಪ್ರಾಚೀನ ಚಿತ್ರಗಳು,

೨) ವಿವಿಧ ಆಧುನಿಕ ಸಂಪ್ರದಾಯಗಳ ಚಿತ್ರಗಳು,

೩) ಕನ್ನಡ ಕಲಾವಿದರ ಪ್ರತ್ಯೇಕ ಭಾಗ,

೪) ಮೈಸೂರಿನ ವಿವಿಧ ಭಾಗಗಳಲ್ಲಿ ನಾಥರಿಲ್ಲದೆ ತೊಳಲಾಡುತ್ತಿರುವ ಶಿಲ್ಪಗಳ ಸಂಗ್ರಹಣವಾಗಬೇಕು.

ಕಲೆಯ ಘನತೆಯನ್ನು ಬಲ್ಲ ಒಬ್ಬ ಉತ್ತಮ ವಿಮರ್ಶಕ ಈ ಚಿತ್ರಶಾಲೆಯ ವ್ಯವಸ್ಥಾಪಕ (Curator) ಆಗಬೇಕು. ಆತ ಪ್ರೇಕ್ಷಕರಿಗೆ ಚಿತ್ರಗಳನ್ನು ವರ್ಣಿಸುವ ಕೆಲಸವಲ್ಲದೆ ಕಾಲಕಾಲಕ್ಕೆ ಚಿತ್ರ ಕಲೆಯ ಮೇಲೆ ಹೊತ್ತಗೆಗಳನ್ನು ಬರೆದು ಪ್ರಕಟಿಸಬೇಕು. ಚಿತ್ರಶಾಲೆಗೆ ಮೈಸೂರಿಗಿಂತ ಬೆಂಗಳೂರೇ ಉತ್ತಮ ಸ್ಥಳ. ಚಿತ್ರಶಾಲೆ ಬೆಳೆದು, 'ಕರ್ನಾಟಕದ ರಾಷ್ಟ್ರೀಯ ಕಲಾಪ್ರದರ್ಶನಾಲಯ'ವಾಗ ಬೇಕು. ಕನ್ನಡದ ಪ್ರಾಚೀನ, ಅರ್ವಾಚೀನ ಕವಿಗಳ ಚಿತ್ರಗಳು, ಹಸ್ತಪ್ರತಿಗಳು ಸಂಗ್ರಹವಾಗ ಬೇಕು. ಕನ್ನಡ ಕಲೆಯ ವೈಶಿಷ್ಟ್ಯವನ್ನು ಚಿತ್ರಶಾಲೆ ತೋರುವಂತಿರಬೇಕು.

ಸುವ್ಯವಸ್ಥಿತ ರೀತಿಯಲ್ಲಿ ಇಂತಹ ಚಿತ್ರಶಾಲೆ ಏರ್ಪಟ್ಟರೆ ಜನ ಮೇಲಿಂದ ಮೇಲೆ ಬಂದು ಕಲೆಯ ಶುಭ್ರ ವಾತಾವರಣದಲ್ಲಿ ಒಂದು ಗಳಿಗೆ ಮನಸ್ಸನ್ನು ಉಲ್ಲಾಸಗೊಳಿಸಿಕೊಳ್ಳುವುದಕ್ಕೂ, ತಮ್ಮ ಅಭಿರುಚಿಯನ್ನು ಸುಧಾರಿಸುವುದಕ್ಕೂ, ಜೀವನವನ್ನು ಹೆಚ್ಚು ಸುಂದರ ಮಾಡಿಕೊಳ್ಳಲಿಕ್ಕೂ ಸಾಧ್ಯವಾಗುತ್ತದೆ. ವಾರಕ್ಕೊಮ್ಮೆ ಶಾಲೆ, ಕಾಲೇಜುಗಳ ಅಧ್ಯಾಪಕರು ತಮ್ಮ ಶಿಷ್ಯವರ್ಗವನ್ನು ಕರೆತಂದು ಕಲಾಶಿಕ್ಷಣ ಕೊಡುವಂತೆ ವಿಧಾಯಕ ವಾಗಬೇಕು.

ಕಲಾಪ್ರದರ್ಶನಾಲಯದ ನೈಜ ಉದ್ದೇಶ ಸಾರ್ಥಕವಾದರೆ ಅದಕ್ಕೆ ಒಂದು ರೀತಿಯಲ್ಲಿ ಇಂಬುಗೊಡುವ ಕಲಾ ಶಿಕ್ಷಣಾಲಯವನ್ನು ಸ್ಥಾಪಿಸ ಬೇಕಾಗುತ್ತದೆ. ಕಲಾರ್ಥಿಯ ಆಶೆ ಆಶಯಗಳನ್ನು ಪೂರೈಸುವ ಶ್ರೇಷ್ಠ ದರ್ಜೆಯ ಶಿಕ್ಷಣಾಲಯ ಇನ್ನಿದುವರೆಗೆ ಕರ್ನಾಟಕದಲ್ಲಿ ಸ್ಥಾಪಿತವಾಗಿಲ್ಲ. ವಿದ್ಯಾರ್ಥಿಗಳು ಕಲ್ಕತ್ತೆ, ಶಾಂತಿನಿಕೇತನ, ಮದರಾಸು, ಮುಂಬಯಿಯ ಕಲಾ ಶಿಕ್ಷಣಾಲಯಗಳಿಗೆ ಹೋಗಿ ಶಿಕ್ಷಣಪಡೆದು ಬರಬೇಕಾಗಿದೆ. ಈ ಸಂಬಂಧವಾಗಿ ನಾನು ಬೇರೊಂದೆಡೆ* ಹೇಳಿರುವ ಮಾತುಗಳು ಲಕ್ಷ್ಯಾರ್ಥ ವಾಗಿವೆ.

"ಲಲಿತ ಕಲೆಗಳಲ್ಲಂತೂ ಕನ್ನಡಿಗರ ಪರಿಸ್ಥಿತಿ ತುಂಬ ಶೋಚನೀಯ. ಚಿತ್ರಕಲೆಯಲ್ಲಿ ಒಂದು ಮಹಾಕ್ರಾಂತಿಯನ್ನು ೧೯೦೬ರಲ್ಲಿಯೇ ಬಂಗಾಳ

* ಕರ್ನಾಟಕದ ಕಲಾವಿದರು ಮುನ್ನುಡಿ

ಮಾಡಿತು ಅವನೀಂದ್ರ ಠಾಕೂರರೂ, ನಂದಲಾಲ ಬಸು ಅವರೂ ಅಜಂತಾ, ಬಾಗ್, ಸೀತಾನ್ನಿವಾಸಲ್ ಭಿತ್ತಿಚಿತ್ರಗಳ ಪ್ರತಿ ಮಾಡಿದುದಲ್ಲದೆ, ಅವುಗಳ ತಂತ್ರನೈಪುಣ್ಯ, ರಸಭಾವಗಳನ್ನಳವಡಿಸಿಕೊಂಡು ಆಧುನಿಕ ಆಶೋತ್ತರಗಳನ್ನು ಪೂರೈಸುವ ಒಂದು ಸಂಪ್ರದಾಯವನ್ನೇ ಆರಂಭಿಸಿದರು. ಇವರ ಶಿಷ್ಯರು ಈ ಸಂಪ್ರದಾಯವನ್ನು ಭಾರತದ ವಿವಿಧ ಪ್ರಾಂತಗಳಿಗೊಯ್ದರು. ಆಂಧ್ರಜಾತೀಯ ಕಲಾಶಾಲೆಗೆ ಸಂಸ್ಕೃತಿಯ ರಾಯಭಾರಿಗಳಾಗಿ ಬಂದ ಪ್ರಮೋದಕುಮಾರ ಚಟ್ಟೋಪಾಧ್ಯಾಯರು ಆಂಧ್ರ ನಾಗರಿಕತೆಗಳವಡುವ ಚಿತ್ರಕಲಾ ಸಂಪ್ರದಾಯಕ್ಕೆ ನೆರವಾದರು.

"ಇಂತಹ ಪ್ರಯತ್ನ—ಕ್ರಾಂತಿಯನ್ನು ಕರ್ನಾಟಕದಲ್ಲಿ ಮಾಡಬಲ್ಲವರಿದ್ದಾರೆ. ಆದರೆ ಅವರ ಕೃತಿಗಳನ್ನು ಎತ್ತಿಹಿಡಿದು ಜಗತ್ತಿಗೆ ತೋರಿಸಬಲ್ಲ 'ಮಾಡರ್ನ್ ರೆವ್ಯೂ,' 'ವಿಶಾಲ ಭಾರತ' 'ಭಾರತಿ' ಮೊದಲಾದಂಥ ಪತ್ರಿಕೆಗಳು ಕನ್ನಡದಲ್ಲಿಲ್ಲ.

"ವೈಯಕ್ತಿಕವಾಗಿ ಕನ್ನಡ ಚಿತ್ರಗಾರರು, ಶಿಲ್ಪಿಗಳು ಮಾಡುತ್ತಿರುವ ಪ್ರಯತ್ನ ಸಾಲದು. ಶಾಂತಿನಿಕೇತನ, ನಾಗಾರ್ಜುನ ವಿದ್ಯಾಪೀಠದಂತಹ ಕಲಾಭ್ಯಾಸಂಗ ಕ್ಷೇತ್ರಗಳು ನಮ್ಮಲ್ಲಿ ಬೇಕು. ಕಲಾವಿದರು ಕೂಡಿ ಕನ್ನಡ ನಾಡಿನ ವೈಶಿಷ್ಟ್ಯ, ಸಾಂಸ್ಕೃತಿಕ ಪರಂಪರೆಗನುಗುಣವಾದ ಚಿತ್ರಕಲಾ ಪದ್ಧತಿಯನ್ನು ಆರಂಭಿಸಬೇಕು."

"ಇತ್ತ ಸರ್ಕಾರದ ಉಪೇಕ್ಷೆ, ಅತ್ತ ಜನತೆಯ ಆಲಸ್ಯ—ಎರಡೂ ಕೂಡಿ ಮೈಸೂರಿನಲ್ಲಿ ಚಿತ್ರಕಲೆ ಎಷ್ಟು ಮುಂದುವರಿಯಬೇಕಾಗಿತ್ತೋ ಅಷ್ಟು ಮುಂದುವರಿಯಲಿಲ್ಲ. ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿರುವ ಚಿತ್ರಕಲಾ ವಿಭಾಗ ಓಬೀರಾಯನ ಕಾಲದ್ದು. ಅಲ್ಲಿನ ಶಿಕ್ಷಕರು, ಪದ್ಧತಿ ಎಲ್ಲಾ ಹ್ಯಾವಲ್‌ರವರು ಹೋಗುವುದಕ್ಕೆ ಮೊದಲಿದ್ದ ಕಲ್ಕತ್ತೆಯ ಪರಿಸ್ಥಿತಿಯನ್ನು ನೆನಪಿಗೆ ತರುತ್ತದೆ. ಆ ಶಾಲೆಯಲ್ಲಿ ಚಿತ್ರಕಲೆ ಕುಶಲ ಕಲೆಗಳ ಒಂದು ಅಂಗ. ಭರಣಿಗಳ ಮೇಲೆ ಗೊಂಬೆ ಬರೆಯುವುದಕ್ಕೆ, ಅರಗಿನ ಆಟಗೆಗಳ ಮೇಲೆ ಚಿತ್ರಕೊರೆಯುವುದಕ್ಕೆ, ಕೆತ್ತನೆಯ ಕೆಲಸಗಳಿಗೆ ಅನುಕೂಲಗಳನ್ನೊದಗಿಸುವುದಕ್ಕೆ ಎಷ್ಟು ಚಿತ್ರಕಲಾಭ್ಯಾಸ ಅವಶ್ಯವೋ

ಅಷ್ಟು ಅಲ್ಲಿ ದೊರೆಯುತ್ತಿದೆ. ಆ ಶಾಲೆಯಿಂದ ಇದುವರೆಗೆ ಹೆಸರು ಹೇಳುವಂತಹ ಪ್ರಥಮ ದರ್ಜೆಯ ಒಬ್ಬ ಚಿತ್ರಕಾರನೂ ಬಂದಿಲ್ಲ.

"ಕರ್ನಾಟಕದಲ್ಲಿ ಚಿತ್ರಕಲೆ ಕ್ರಿ. ಶ. ೨–೩ನೆಯ ಶತಮಾನಗಳಿಂದ ಬೆಳೆದು ಬಂದಿದೆ. ಬಾದಾಮಿ, ಬಿಜಾಪುರ, ಇಟ್ಟಗಿ, ಮೈಸೂರುಗಳಲ್ಲಿ ಕಾಲಕಾಲಕ್ಕೆ ಚಿತ್ರಕಲೆ ಬೆಳೆಯಿತು. ಬಾದಾಮಿ ಕಮತಗಿಗಳ ಭಿತ್ತಿಚಿತ್ರಗಳನ್ನು ಜಗನ್ಮಾನ್ಯ ಕಲಾವಿಮರ್ಶಕರು ಕೊಂಡಾಡಿದ್ದಾರೆ. ಮೈಸೂರಿನಲ್ಲಿಯೇ ಒಂದು ಸ್ವತಂತ್ರ ಸಂಪ್ರದಾಯ ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಬೆಳೆಯಿತು. ಬೇಲೂರು, ಹಳೆಯಬೀಡು, ವಿಜಯನಗರ, ಇಟ್ಟಗಿ, ಬಾದಾಮಿಗಳ ಶಿಲ್ಪಕೃತಿಗಳು ಸ್ವತಂತ್ರ ಕನ್ನಡ ಸಂಪ್ರದಾಯದ ಹೆಗ್ಗುರುತುಗಳಾಗಿವೆ. ಇವುಗಳನ್ನು ಸರಿಯಾಗಿ ಅಳವಡಿಸಿಕೊಂಡು ಇವುಗಳಿಂದ ಸ್ಫೂರ್ತಿಪಡೆದು ಕನ್ನಡ ಸಂಪ್ರದಾಯವೊಂದನ್ನು ಧಾರಾಳವಾಗಿ ಬೆಳೆಸಬಹುದು. ಕೆ. ವೆಂಕಟಪ್ಪನವರು, ಮಿಣಜಗಿ ಮಡಿವಾಳಪ್ಪನವರು, ಕಮಡೋಳಿಯವರು, ದಿವಂಗತ ಆರ್. ವ್ಯಾಸರಾವ್ ಅವರು ಈ ದೃಷ್ಟಿಯಲ್ಲಿ ಕೆಲಸಮಾಡಿದ್ದರು. ಆದರವುಗಳನ್ನು ಸಂಘಟಿಸಿ 'ಶಾಂತಿನಿಕೇತನ'ದ ಕಲಾಶಾಲೆಯ ಮಾದರಿಯಲ್ಲಿ ಒಂದು ಕಲಾಶಾಲೆಯನ್ನು ತೆರೆಯಬೇಕು. ಕಮಡೋಳಿಯವರು ತಮ್ಮ ಕಲೆಯಲ್ಲಿ ನವೀನ ದೃಷ್ಟಿಯನ್ನು ಮೂಡಿಸಿದ್ದಾರೆ. ಸಾಮಾನ್ಯ ಜನತೆಯ ಜೀವನವನ್ನು ಕಲೆಯ ಸುಂದರ ಅಚ್ಚಿನಲ್ಲಿ ತುಂಬಿದ್ದಾರೆ. ಈ ಮೂವರ ನೇತೃತ್ವದಲ್ಲಿ ಮೈಸೂರು ಒಂದು ಕಲಾಶಾಲೆಯನ್ನು ತೆರೆದರೆ ಕನ್ನಡನಾಡಿಗೆ ಹಿರಿಯ ಸೇವೆ ಮಾಡಿದಂತಾಗುತ್ತದೆ."*

ಇದಕ್ಕೆ ಹೆಚ್ಚು ಸೇರಿಸಬೇಕಾದ ಅವಶ್ಯಕವಿಲ್ಲ. ಶಾಂತಿನಿಕೇತನ, ಆಂಧ್ರಜಾತೀಯ ಕಲಾಶಾಲೆ, ಲಕ್ನೋ ಕಲಾಶಾಲೆಗಳ ಮಟ್ಟಕ್ಕೆ ನಿಲ್ಲುವ ಕನ್ನಡ ಚಿತ್ರಕಲಾಶಾಲೆ ಏರ್ಪಡಬೇಕು.

ಕಲಾಪ್ರತಿಭೆ ಇರುವ ಜನ ಕೂಡ ಅದನ್ನು ತ್ಯಜಿಸಿ ಕುಶಲ ಕಲೆಗಳ ಬೆನ್ನು ಹತ್ತಿರುವುದಕ್ಕೆ ಲಲಿತ ಕಲಾಕೃತಿಗಳಿಗೆ ಪ್ರೋತ್ಸಾಹವಿಲ್ಲದಿರುವುದೇ ಕಾರಣ. ಚಿತ್ರಪ್ರದರ್ಶನಗಳಲ್ಲಿ ಚಿತ್ರಗಾರರಿಗೆ ಬಹುಮತಿ ದೊರೆತು,

---

* ಕನ್ನಡದ ದಾರಿ, ಪುಟ ೧೩೫

ಅವರ ಕೃತಿಗಳು ಮಾರಾಟವಾದಲ್ಲಿ ಲಲಿತಕಲೆಗಳನ್ನು ಮುಂದುವರಿಸುವ ಹುರುಪು ಹುಟ್ಟೀತು.

ಮೈಸೂರಿನಲ್ಲಿ 'ದಸರಾ ಎಕ್ಸಿಬಿಷನ್' ಬಹಳ ವರ್ಷಗಳಿಂದ ನಡೆದು ಬಂದಿದೆ. ಕೆಲವು ವರ್ಷಗಳಿಂದ ಚಿತ್ರಕಲಾ ಭಾಗವೊಂದು ಇದರ ಆಕರ್ಷಣಗಳಲ್ಲಿ ಸೇರಿದೆ. ಚಿತ್ರಕಲಾ ಭಾಗಕ್ಕೆ ಪ್ರತ್ಯೇಕ ಸಮಿತಿಯೊಂದು ಪ್ರತಿವರ್ಷ ನಿಯೋಜಿತವಾಗುತ್ತದೆ. ಸಮಿತಿಯಲ್ಲಿರುವವರು ಒಬ್ಬಿಬ್ಬರು ಅಧಿಕಾರಿಗಳು, ಒಬ್ಬಿಬ್ಬರು ರಾವ್‌ಬಹದ್ದೂರ್ ರಾಜಸೇವಾಸಕ್ತರು, ಒಬ್ಬಿಬ್ಬರು ಮೈಸೂರಿನ ಚಿತ್ರಗಾರರು. ಹೊರಗಿನಿಂದ ಚಿತ್ರಗಳನ್ನು ತರಿಸಿಕೊಂಡು ಮೊಳೆಬಡಿದು ಗೋಡೆಗೆ ನೇತುಹಾಕಿದರೆ ತಮ್ಮ ಕೆಲಸ ಮುಗಿಯಿತೆಂದು ಈ ಸಮಿತಿಯ ತಿಳುವಳಿಕೆ. ಪ್ರದರ್ಶನದ ಚಿತ್ರಗಳಿಗೆ ಪಾರಿತೋಷಕ ಕೊಡುವ ವಿಧಾನವೂ ಅಷ್ಟೇ ಚಮತ್ಕಾರವಾಗಿದೆ. ಸಮಿತಿಯಲ್ಲಿರುವ ಮೈಸೂರು ಚಿತ್ರಗಾರರ ಅಪ್ರಬುದ್ಧ ಕೃತಿಗಳಿಗೆ ಪಾರಿತೋಷಕ ಮೀಸಲು. ಈ ಅಧಿಕಾರಿಗಳು, ರಾವಬಹದ್ದೂರರು, ಚಿತ್ರಗಾರರನ್ನು ಬಿಟ್ಟರೆ ಸಮಿತಿಯ ಕೆಲಸವನ್ನು ನ್ಯಾಯವಾಗಿ ಚೆನ್ನಾಗಿ ನಿರ್ವಹಿಸಬಲ್ಲ ಕಲಾವಿದರು, ಕಲಾವಿಮರ್ಶಕರು ಕರ್ನಾಟಕದಲ್ಲಿಲ್ಲವೇ? ಇಂತಹ ಸಮಿತಿಗಳನ್ನು 'ವಯೋವೃದ್ಧ'ರಿಂದ ತುಂಬಿದರೆ ಪ್ರಯೋಜನವಿಲ್ಲ. ಕಲೆಯ ತಿರುಳನ್ನರಿತ 'ಜ್ಞಾನವೃದ್ಧ'ರು ಇವುಗಳಲ್ಲಿರಬೇಕು. ಚಿತ್ರಗಳನ್ನು ಯುಕ್ತರೀತಿಯಲ್ಲಿ ಪ್ರದರ್ಶಿಸುವುದಲ್ಲದೆ, ಸ್ಥಳೀಯ ಕಲಾವಿದರ ಕೃತಿಗಳು ಮಾರಾಟವಾಗುವಂತೆ ವ್ಯವಸ್ಥೆಮಾಡಬೇಕು. ಪಾರಿತೋಷಕಗಳನ್ನು ನಿರ್ವಂಚನೆಯಿಂದ ಯೋಗ್ಯ ಕಲಾವಿದರಿಗೆ ಹಂಚಬೇಕು.

ಚಿತ್ರಶಾಲೆ, ಚಿತ್ರಶಿಕ್ಷಣ ಮಂದಿರ, ಪ್ರದರ್ಶನ ಮುಪ್ಪುರಿಗೊಂಡು ಕರ್ನಾಟಕದ ಚಿತ್ರಕಲಾ ಸೇವೆಗೆ ನಿಂತರೆ ಆಗ ಕನ್ನಡನಾಡಿನ ಒಂದು ಊನ ನೇರವಾಗುತ್ತದೆ. ಈ ಕಡೆಗೆ ಸರ್ಕಾರದವರು, ಸಾರ್ವಜನಿಕರು ಗಮನ ಕೊಡುವರೇ?

———

# ೧೪. ಕಲೆಯ ಗುರಿ

ಕಲೆಯ ಬಗ್ಗೆ ನಮ್ಮ ದೇಶದಲ್ಲಿರುವಷ್ಟು ಅಜ್ಞಾನ ಬೇರೆಲ್ಲಿಯೂ ಕಂಡುಬರುವುದಿಲ್ಲ. ಅನಕ್ಷರಜ್ಞರೂ, ಅಶಿಕ್ಷಿತರೂ ಆದವರಲ್ಲಿ ಮಾತ್ರವೇ ಅಲ್ಲ; ಸುಶಿಕ್ಷಿತರೂ, ಅಕ್ಷರಜ್ಞರೂ ಆದವರ ಹಣೆಯಬರಹವೂ ಇಷ್ಟೇ. ಕಲೆಯ ನಿತ್ಯೋತ್ಸವವನ್ನು ನಡೆಸಿದ ಭಾರತವರ್ಷದ ಪ್ರಕೃತ ಕಲಾಪರಿಸ್ಥಿತಿ ಶೋಚನೀಯವಾಗಿದೆ. ಇಟಲಿ, ಫ್ರಾನ್ಸ್ ದೇಶೀಯರ ಕಲಾಭಿಮಾನ ಅವರ ಹಿರಿಯ ಹೆಮ್ಮೆ. ಶಾಲಾಬಾಲಕರಿಂದ, ಮುಪ್ಪಿನ ಮುದುಕರ ವರೆಗೆ ಕಲಾಕೃತಿಗಳನ್ನು ನೋಡುವ, ಮೆಚ್ಚುವ ಹಾಗೂ ಕಲಾವಿದರನ್ನು ಆದರಿಸುವ ಪರಿಪಾಠ ಇಟ್ಟುಕೊಂಡಿರುತ್ತಾರೆ. ನಮಗೆ ದೊರೆಯುತ್ತಿರುವ ದುರಂತ ಶಿಕ್ಷಣದಿಂದ ಕಲಾಭಿಜ್ಞತೆ ಬೆಳೆಯುವ ಮಾತು ಹಾಗಿರಲಿ, ವಿದ್ಯಾರ್ಥಿಯಲ್ಲಿರುವ ಸುಪ್ತ ಕಲಾಚೇತನವೂ ನಾಶವಾಗುತ್ತಿದೆ.

ನಮ್ಮ ಲಲಿತಕಲೆಗಳ ಪ್ರಾಚೀನ ಪರಂಪರೆಯನ್ನು ಗಮನಿಸಿದರೆ ನಮ್ಮ ಅವನತಿಯ ಘೋರ ಸ್ವರೂಪ ಹೆಚ್ಚು ಮಂದಟ್ಟಾಗುತ್ತದೆ. ಕ್ರಿಸ್ತಪೂರ್ವದಲ್ಲಿ ಬೆಳೆದ ಮೊಹೆಂಜೋದಾರೋ, ಹರಪ್ಪಕಾಲದ ಕಲೆಯನ್ನು ತತ್ಕಾಲಕ್ಕೆ ಬಿಟ್ಟುಕೊಂಡರೂ ಕ್ರಿ. ಶ. ಎರಡನೆಯ ಶತಮಾನದಿಂದ ಕಲೆ ಭಾರತದಲ್ಲಿ ಬೆಳೆಯಿತು. ಜಗದ್ವಿಖ್ಯಾತವಾದ ಅಜಂತೆಯ ಗುಹಾಂತರ್ದೇವಾಲಯಗಳೂ, ಭಿತ್ತಿಚಿತ್ರಗಳೂ, ಸಿಗ್ರಿಯ, ಸೀತಾನ್ನಿವಾಸಲ್, ಬಾದಾಮಿ, ಕಮತಗಿಯ ಭಿತ್ತಿಚಿತ್ರಗಳೂ, ಅಮರಾವತಿ, ಸಾಂಚಿ, ವಿಜಯನಗರ, ಬೇಲೂರು, ಹಳೆಯಬೀಡು, ಐಹೊಳೆ, ಪಟ್ಟದಕಲ್ಲುಗಳ ಶಿಲ್ಪ ,ವಾಸ್ತುಶಿಲ್ಪಗಳೂ, ದಕ್ಷಿಣೌತ್ತರೇಯ ಸಂಗೀತ ಪದ್ಧತಿಗಳೂ ಅಭೂತಪೂರ್ವ ಕಲಾ ಇತಿಹಾಸವನ್ನು ಕಟ್ಟಿಕೊಟ್ಟುವು. ನಮ್ಮ ಜನರ ಪ್ರಕೃತಿ ಪ್ರೇಮ, ಧರ್ಮಶ್ರದ್ಧೆ, ಕಲಾಭಿಜ್ಞತೆಗಳ ಸಾಕ್ಷ್ಯವಾಗಿ ನಿಂತಿವೆ, ಇಂದಿಗೂ ಈ ಅಮರ ಕ್ಷೇತ್ರಗಳು.

ಪರದೇಶಿಯ ಸಂಸ್ಕೃತಿಗಳ ಆಘಾತದಿಂದ ಪರಂಪರೆಯನ್ನು ನಾವು ನೀಗಿಕೊಂಡೆವು. ಆದರೆ ಪ್ರಗತಿಯನ್ನು ಸಾಧಿಸುವಷ್ಟು ದಾರ್ಢ್ಯವನ್ನು ತೋರಲಿಲ್ಲ. ಎಂದೆಂದಿಗೂ ನಾವು ಅಜಂತಾ, ಬಾದಾಮಿ, ಬೇಲೂರುಗಳ

ಹಾಡನ್ನು ಹಾಡುತ್ತ ಕುಳಿತುಕೊಳ್ಳಬೇಕಾದುದಿಲ್ಲ. ಅಂದಿನ ಕಲಾವಿದರು, ಅಜಂತೆಯನ್ನು ನಿರ್ಮಾಣಮಾಡಿದರೆ ಇಂದಿನ ಕಲಾವಿದರು ಅದಕ್ಕೂ ಭವ್ಯವಾದ ಸಂಪ್ರದಾಯವನ್ನು ನಿರ್ಮಾಣಮಾಡಬೇಕು. ಹಳೆಯುದಕ್ಕೇ ನಾವು ಬಲಿಬೀಳದಿದ್ದರೂ ಅವುಗಳನ್ನು ಬಲಿಕೊಡುವುದೂ ವಿವೇಕವಲ್ಲ. ಹಳೆಯುದರ ಮೇಲೆ ಒಂದು ಕಣ್ಣಿರಬೇಕು. ನಮ್ಮ ಪೂರ್ವಜರು ಏನು ಮಾಡಿದರು, ಎಂತು ತಮ್ಮ ಬಾಳನ್ನು ಸತ್ಯ, ಸೌಂದರ್ಯ, ಶಕ್ತಿಗಳಿಂದ ಬೆಳಗಿಸಿಕೊಂಡರು ಎಂದು ಲಕ್ಷಿಸಬೇಕು. ಹಾಗೇ ಇಂದಿನ ಪರಿಸ್ಥಿತಿಯನ್ನೂ ಗಮನಿಸಬೇಕು. ಇಂದು ನಮಗೇನು ಬೇಕು? ಎಂಥ ಕಲೆ ನಮ್ಮ ಇಂದಿನ ಬಾಳಿಗೆ ಉಲ್ಲಾಸವನ್ನು, ಕ್ರತುಶಕ್ತಿಯನ್ನು ನೀಡಬಲ್ಲುದು ಎಂದು ಗಮನಿಸಬೇಕು. ನಾಳಿನ ಆವಶ್ಯಕತೆಯನ್ನೂ ಅನುಲಕ್ಷಿಸಬೇಕು. ಕಲಾವಿದ ಹಾಗೂ ಕಲಾಭಿಮಾನಿ ಮುಕ್ಕಣ್ಣ ನಿನ್ನೆ-ಇಂದು-ನಾಳೆಗಳೆಂಬ ಮೂರು ಮಹತ್ವದ ಕಣ್ಣುಗಳಿಂದ ಪ್ರಗತಿಯನ್ನು ಅನುಲಕ್ಷಿಸುತ್ತಾನೆ ಹಾಗೂ ಸಾಧಿಸುತ್ತಾನೆ.

ರಸವನ್ನು ಈಶ್ವರನೆಂದು ಸಾರಿದ ಉಪನಿಷತ್ತು ನಮ್ಮ ಮುಂದೆ ಅತ್ಯಂತ ಗಹನವಾದ, ಅಜರಾಮರವಾದ ಆದರ್ಶವನ್ನಿಟ್ಟಿತು. ಎಲ್ಲಿ ಕ್ರಿಯಾ ಶಕ್ತಿಯಿದೆಯೋ ಅಲ್ಲಿ ಈಶ್ವರನಿದ್ದಾನೆ. ರಸ ಕ್ರಿಯಾಶಕ್ತಿಯ ಹೇತುವಾಗುವುದಲ್ಲದೆ, ಕ್ರಿಯಶಕ್ತಿಯನ್ನು ವಿರೋಧಶಕ್ತಿಗಳನ್ನಡಗಿಸುವ, ಸಾಮರ್ಥ್ಯವನ್ನೂ ಪಡೆದಿದೆ. ಜೀವನ ಸುಂದರವಾಗಬೇಕಾದರೆ ಸುಂದರವಲ್ಲದ ವಸ್ತುಗಳ ನಿವಾರಣೆಯಾಗಬೇಕು. ತೋಟ ಹಸನಾಗಬೇಕಾದರೆ ಮುಳ್ಳು, ಕಳ್ಳಿ, ಕಲ್ಲು ಹೋಗಬೇಕು.

ಕಲೆ-ರಸ ಶಬ್ದಗಳನ್ನು ಪ್ರಾಚೀನರು ಬಹಳ ವ್ಯಾಪಕಾರ್ಥದಲ್ಲಿ ಉಪಯೋಗಿಸಿದರು. ಕಣ್ಣಿಗೆ, ಕಿವಿಗೆ ಪ್ರಿಯವಾದುದನ್ನು ಸೃಜಿಸುವುದು ಕಲೆಯೆಂಬ ಆಧುನಿಕ ಅರ್ಥ ಹೊರಗಿನಿಂದ ಬಂದದ್ದು. ಪ್ರೇಯಸ್ಸಿಗಿಂತ ಶ್ರೇಯಸ್ಸಿಗೆ ಹೆಚ್ಚು ಬೆಲೆಕೊಟ್ಟ ಪ್ರಾಚೀನರು ಕಲೆಯ ಬೃಹದ್ಗರ್ಭದಲ್ಲಿ ಲೋಕ ಸರ್ವಸ್ವವನ್ನೂ ಕಂಡರು. ಕಲೆಯ ವ್ಯಾಖ್ಯೆ ಮಾಡುತ್ತಾ ಫ್ರೆಡರಿಕ್ ಹೆಬ್ಬೆಲ್ 'ಅನಂತವನ್ನೂ ಒಂದು ನಿಯತ ಪ್ರಮಾಣದಲ್ಲಿ ಸೆರೆಹಿಡಿಯುವುದೇ ಕಲೆ' ಎಂದು ಹೇಳಿದ. ವ್ಯಕ್ತಿಯ ಕಣ್ಣಲ್ಲಿ ಸಮಷ್ಟಿಯನ್ನು ನೋಡು

ವುದೇ ಕಲೆಯೆಂದು ಅವನ ಅಭಿಪ್ರಾಯ. ರವೀಂದ್ರರೂ ಹೆಚ್ಚುಕಡಿಮೆ ಅದೇ ವ್ಯಾಖ್ಯೆ ಕೊಟ್ಟಿದ್ದಾರೆ. 'ಸತ್ಯ ಅನಂತ. ಆದ್ದರಿಂದ ನಮ್ಮ ಜ್ಞಾನೋದಯಕ್ಕೆ ಪ್ರತಿಯೊಂದೂ ಅವಶ್ಯಕವಾಗುತ್ತದೆ. ಸೌಂದರ್ಯ-ಸರ್ವಾಂತರ್ಯಾಮಿ-ಆದ್ದರಿಂದ ಪ್ರತಿಯೊಂದೂ ನಮಗೆ ಆನಂದ ನೀಡಲು ಸಮರ್ಥವಾಗಿದೆ' ಪ್ರಾಚ್ಯ ಪಾಶ್ಚಾತ್ಯರಿಬ್ಬರ ದೃಷ್ಟಿಯೂ ಉತ್ತಮ ಕಲೆಯ ಬಗ್ಗೆ ಒಂದೇ ಆಗಿತ್ತು. ಸೌಂದರ್ಯವಿರುವುದು ವಸ್ತುವಿನಲ್ಲಲ್ಲ—ನೋಟದಲ್ಲಿ. ಸಾಮಾನ್ಯವಸ್ತುವನ್ನೂ ಸುಂದರವಾಗಿ, ಶಕ್ತಿಯುತವಾಗಿ, ಪರಿಣಾಮಕಾರಕವಾಗಿ ತೋರಬಲ್ಲವನೇ ಕಲಾವಿದನೆಂಬ ಅಭಿಪ್ರಾಯ ಮೂಡಿತ್ತು.

ಜನ ಸುಧಾರಿಸಿದಂತೆ ವಿಚಾರಗಳೂ, ಮಾರ್ಪಾಟುಗೊಂಡವು. ವಿಶಾಲವಾಗಿದ್ದುದು ಸಂಕ್ಷಿಪ್ತವೂ ಸಂಕುಚಿತವೂ ಆಗುತ್ತ ಬಂದಿತು. ಕಲೆಯ ಬಗ್ಗೆ ಸರ್ವಾಧಿಕಾರ ವಹಿಸಿದ ಕಲಾವಿದರ ತಂಡವೊಂದು ಸುಂದರವಾದುದನ್ನು ಸುಂದರವಾಗಿ ನಿರೂಪಿಸುವುದೇ ಕಲೆ, ಉಳಿದವೆಲ್ಲಾ ಕಲೆಯ ವಿಪರ್ಯಾಸ ಎಂದು ಸಾರುತ್ತ ಬಂದಿತು. ಈ ತಂಡದಿಂದಲೇ 'ಕಲೆಗಾಗಿ ಕಲೆ'ಯೆಂಬ ವಿಲಕ್ಷಣ ವಾದ ರಂಭವಾಯಿತು. ಕಲಾನುಭೂತಿ ಕೆಲವರ ಹಕ್ಕು-ಕೆಲವರ ಸೊತ್ತು. ಜನತೆಗೂ ಅದಕ್ಕೂ ನಿಕಟ ಸಂಬಂಧವಿಲ್ಲ. ಕಲಾವಿದ ಕೊಟ್ಟುದನ್ನು ಅಚ್ಚರಿಯಿಂದ, ಭಕ್ತಿಯಿಂದ, ಕೃತಜ್ಞತೆಯಿಂದ ಸ್ವೀಕರಿಸಿ ಕೃತಾರ್ಥರಾಗುವುದಷ್ಟೇ ಜನಸಾಮಾನ್ಯದ ಕೆಲಸ ಎಂದು ಆ ಮತಸ್ಥರು ಸಾರುತ್ತ ಬಂದರು. 'ಕಲೆಗಾಗಿ ಕಲೆ'—ಕಲಾವಿದ ಒಬ್ಬ ಅಂಶ ಪುರುಷ, ಕಲೆ ದೇವದತ್ತವಾದುದು, ಅದು ಕೆಲವರ ಸೊತ್ತು ಎಂಬ ತತ್ತ್ವಗಳಿಂದ ಜನಸಾಮಾನ್ಯದಲ್ಲಿದ್ದ ಕಲಾಂಕುರ ಶಿಥಿಲವಾಗುತ್ತ ಬಂದಿತು. ಕಲೆಯ ಹೆಸರಿನಲ್ಲಿ ಕಲೆಯ ಸಂಹಾರಮಾಡಿದವರು ಈ 'ಕಲೆಗಾಗಿ ಕಲೆ' ತತ್ತ್ವವನ್ನು ಪ್ರತಿಪಾದಿಸಿದ ಕಲಾವಿದರು.

ಅಜಂತಾ, ಸೀತಾನ್ನಿವಾಸಲ್, ಸಿಗ್ರಿಯಾ ಗುಹಾಂತರ್ದೇವಾಲಯಗಳ ಚಿತ್ರಗಳನ್ನು ನೋಡಿದರೆ ಜನ ಸಾಮಾನ್ಯದ ನಿತ್ಯ ಜೀವನದ ಚಿತ್ರಗಳನ್ನು ಕಲಾವಿದ ಚಿತ್ರಿಸುತ್ತಿದ್ದುದು ಮಾತ್ರವೇ ಅಲ್ಲ; ಸಾಮಾನ್ಯ ಮನುಷ್ಯ ತನ್ನ ನಿತ್ಯಜೀವನವನ್ನು ಕಲೆಗೆ ಎರಕಹೊಯ್ದಿರುವುದೂ ಕಂಡು

ಬರುತ್ತದೆ. ಆಗಿನ ಕಲಾವಿದರು ಸಾಮಾನ್ಯ ಮನುಷ್ಯರಾಗಿದ್ದರು.* ರಾಯಲ್ ಎಕೆಡಮಿಗಳಲ್ಲಿ, ಫ್ರೆಂಚ್ ಸೆಲಾನ್‌ಗಳಲ್ಲಿ, ವಿಲಾಸೀ ಕಲಾಲಯಗಳಲ್ಲಿ ಶಿಕ್ಷಣ ಪಡೆದು ಕಲೆಯೆಂದರೆ ಉದ್ದಮುಖಮಾಡುತ್ತಿದ್ದ ಒಂದು ವಿಶಿಷ್ಟಜಾತಿ ಪ್ರಾಣಿಗಳಲ್ಲ. ಅವರ ಮನೆ, ಮನ, ನಿತ್ಯದ ಬಾಳು ಇದ್ದಂತೆ ಅವರ ಕಲೆಯೂ ಇರುತ್ತಿತ್ತು. ಕೋತಿಗಳ ಚೆಲ್ಲಾಟ, ಆನೆಗಳ ನೀರಾಟ, ಗೊಲ್ಲಿತಿ ಹರವಿ ಹೊತ್ತು ನಡೆದಿರುವುದು, ಹಳ್ಳಿಯ ಹೆಣ್ಣುಮಗಳು ಹೊಲದ ಕೆಲಸಮಾಡುತ್ತಿರುವುದು, ಬೇಡಿತಿ ಹಕ್ಕಿಹೊಡೆಯಲು ಬಿಲ್ಲುಹೂಡಿರುವುದು, ಸ್ನಾನಕ್ಕಿಳಿದ ಹೆಣ್ಣು ಚೇಳು ಕಂಡು ಬೆದರಿರುವುದು, ಮುದುಕಜ್ಜನ ಸುತ್ತು ಮೊಮ್ಮಕ್ಕಳು ಕುಳಿತು ಕಥೆಕೇಳುತ್ತಿರುವುದು, ಸತೀಹೋಗುವ ಸ್ತ್ರೀ, ಯುದ್ಧ ಸನ್ನದ್ಧನಾಗಿರುವ ತರುಣವೀರ ಇಂಥ ನೂರಾರು ನಿತ್ಯಜೀವನದ ಚಿತ್ರಗಳು ಪ್ರಾಚೀನ ಚಿತ್ರಕರಂಡದಲ್ಲಿ ನನಗೆ ದೊರೆಯುತ್ತವೆ.

ಅಜಂತೆಯ ಚಿತ್ರಗಾರರು ಎಲ್ಲ ವರ್ಗದ ಜೀವನವನ್ನೂ ಚಿತ್ರಿಸಿದ್ದಾರೆ. ಅವರಿಗೆ ಪುಲಕೇಶಿಯ ದರ್ಬಾರೂ ಬೇಕು, ಬೌದ್ಧ ಭಿಕ್ಷುಗಳ ಭಿಕ್ಷಾಟನೆಯೂ ಬೇಕು, ಸಿದ್ಧಾರ್ಥನ ರಾಜವೈಭವವೂ ಬೇಕು, ಬೋಧಿಸತ್ವನ ವೈರಾಗ್ಯವೂ ಬೇಕು. ಮಧ್ಯಕಾಲದ ಇತಿಹಾಸಕ್ಕೆ ಬಂದರೆ ಚಿತ್ರಕಲೆ ಎರಡು ಕುಡಿಯೊಡೆದುದು ಕಾಣಬರುತ್ತದೆ. ಮೊಘಲರ ರಾಜಮಂದಿರಗಳ ವಿಲಾಸ ಜೀವನವನ್ನು ತೋರುವ ಮೊಘಲ್ (ಅಥವಾ ಇಂಡೊ-ಪರ್ಶಿಯನ್) ಸಂಪ್ರದಾಯವೊಂದು ಕಡೆ, ಸಾಮಾನ್ಯ ಜನರ ಜೀವನಚಿತ್ರಗಳನ್ನು ತೋರುವ ಕಾಂಗ್ರಾ (ಅಥವಾ ಪಹರಿ) ಸಂಪ್ರದಾಯವೊಂದು ಕಡೆ ಬೆಳೆದವು. ಚಿತ್ರಗಾರರು ಆಗಲೂ ತಾವು ಕಂಡುಂಡಿದ್ದ ಬಾಳನ್ನೇ ಚಿತ್ರಿಸುತ್ತಿದ್ದರು. ಅಜಂತೆಯ ಕಾಲದ ಧರ್ಮದೃಷ್ಟಿ ಮಧ್ಯಕಾಲದ ಮೊಘಲ್, ಕಾಂಗ್ರಾ ಸಂಪ್ರದಾಯಗಳಲ್ಲಿ ಕುಂದಿರುವುದು ಸ್ಪಷ್ಟವಾಗಿ ಕಾಣಬರುತ್ತದೆ. ಕಾಂಗ್ರಾ ಸಂಪ್ರದಾಯದಲ್ಲಿ ಕೃಷ್ಣಗೋಪಿಯರ ಲೀಲೆಗಳು, ಮೊಘಲ್ ಸಂಪ್ರದಾಯ

* "The artist is not a special kind of man, but every man is a special kind of artist."

—Ananda Coomaraswamy

ದಲ್ಲಿ ಸೂಫಿ ತತ್ವಜ್ಞರ ಚಿತ್ರಗಳು ದೊರೆಯುತ್ತವೆ. ಆದರೆ ಅಜಂತೆಯಲ್ಲಿದ್ದಂತೆ ಕಲೆಯನ್ನು ಧರ್ಮಕ್ಕೆ ಅಧೀನಮಾಡುವ ಪ್ರವೃತ್ತಿ ಬಹುಮಟ್ಟಿಗೆ ಕಡಿಮೆಯಾಯಿತು. ಅಜಂತೆಯ ಸಂಪ್ರದಾಯದಲ್ಲಿ ಸಾಮಾನ್ಯ ಮನುಷ್ಯನ ಮೇಲೂ ಬೋಧಿಸತ್ವನ ಪ್ರಭೆ ಮೂಡಿರುವುದು ಕಂಡುಬರುತ್ತದೆ. ಕಾಂಗ್ರಾ ಸಂಪ್ರದಾಯದಲ್ಲಿ ಕೃಷ್ಣ ಕೂಡ ಸಾಮಾನ್ಯ ಮಾನವನಾಗಿದ್ದಾನೆ. ಕಲೆಗೆ ಮಾನವ್ಯದ ಪಟ್ಟಕಟ್ಟಿದ ಕೀರ್ತಿ ಕಾಂಗ್ರಾ ಸಂಪ್ರದಾಯದ ಚಿತ್ರಕಲಾವಿದರಿಗೆ ಸೇರುತ್ತದೆ.

ಕಲೆಯ ನೈಜಗುರಿ ಕಾಂಗ್ರಾ ಚಿತ್ರಗಾರರಿಗೆ ಮನವರಿಕೆಯಾಗಿತ್ತೆಂದು ಧಾರಾಳವಾಗಿ ತಿಳಿಯಬಹುದು. ಅನುಭವವನ್ನು, ಜೀವನದ ಬಗ್ಗೆ ವ್ಯಕ್ತಿಯ ಮಾನಸಿಕ ಪ್ರತಿಕ್ರಿಯೆಯನ್ನು, ಸಮದರ್ಶನವನ್ನು ಕಲೆ ತನ್ನ ಗುರಿಯಾಗಿಟ್ಟುಕೊಂಡಿರುವಾಗ ಅದನ್ನು ವರ್ಗೀಕರಣಮಾಡಿ 'ಇದು ಒಳ್ಳೆಯದು—ಇದು ಕೆಟ್ಟದು' ಎಂದು ಹೇಳುವುದು ಸುತರಾಂ ಸರಿಯಲ್ಲ. ಎರಿಕ್ ಗಿಲ್ ಅವರು ಹೇಳುವಂತೆ 'ಕಲೆ ಒಳ್ಳೆಯದೂ ಅಲ್ಲ, ಕೆಟ್ಟದೂ ಅಲ್ಲ. ನಾನಾ ತರಹ ಕಲೆಗಳಿವೆ. ಅವಿವೇಕ, ಅಜ್ಞಾನಗಳಿಂದ ಕೂಡಿದ ಕಲೆಯೂ ಇದೆ; ಅತಿ ಸೂಕ್ಷ್ಮವಾದ ಭಾವನೆಯನ್ನು ಅತಿ ಸ್ಪಷ್ಟವಾದ ರೀತಿಯಲ್ಲಿ ಚಿತ್ರಿಸುವ ಕಲೆಯೂ ಇದೆ.'* ಜಾರ್ಜ್ ಬರ್ನಾರ್ಡ್ ಷಾ ಇದೇ ವಾದವನ್ನು ಮುಂದೊತ್ತಿ 'ಒಳ್ಳೆಯ ಕಲೆ—ಅಥವಾ ಒಳ್ಳೆಯದೆನ್ನುವುದು ಕೇವಲ ದೃಷ್ಟಿಯಲ್ಲಿ ಇಲ್ಲ'‡ ಎಂದು ಹೇಳುತ್ತಾರೆ. ಒಳ್ಳೆಯದು, ಕೆಟ್ಟದು ಶುದ್ಧ ಸಾಪೇಕ್ಷ ಗುಣಗಳು. ಪರಿಸ್ಥಿತಿಗೆ ಹೊಂದಿಕೊಂಡು ಬಂದು, ವಸ್ತು, ನಡತೆ, ವಿಚಾರ ಒಳ್ಳೆಯದು ಕೆಟ್ಟದು ಆಗುತ್ತದೆ.

---

* "Art itself is neither good nor bad; there is every kind of art, from the silliest and most inept to that which embodies the most refined sensibility in the most perfectly precise form."

—Eric Gill

‡ "There is no good art, any more than there is good anything else in the absolute sense."

—G. B. Shaw

ಹದಿನೇಳನೆಯ ಶತಮಾನದ ಅಂತ್ಯಕ್ಕೆ ಭಾರತೀಯ ಕಲಾ ಇತಿಹಾಸ ಕೊನೆಗೊಂಡಿತು. ಆವೇಳೆಗಾಗಲೇ ಅವನತಿ ತಲೆಹಾಕಿತ್ತು. ಭಾವ ಚಿತ್ರಗಳ ಬದಲು ರೂಪ ಚಿತ್ರಗಳು ಪ್ರಸಾರಕ್ಕೆ ಬಂದವು. ಚಿತ್ರಗಾರ ಫೋಟೋ ಹಿಡಿದ ಹಾಗೆ ಒಂದು ನೋಟದ ಚಿತ್ರ ತೆಗೆದುಕೊಟ್ಟರೆ ಸಾಕೆಂಬ ಭಾವನೆ ಬಂದಿತ್ತು. ಕ್ಲೈವ್, ವಾರನ್ ಹೇಸ್ಟಿಂಗ್ಸ್, ಕಾರ್ನವಾಲೀಸ್ ಮೊದಲಾದ ಮಹಾಪ್ರಭೃತಿಗಳು ಭಾರತಕ್ಕೆ ಬಂದಮೇಲೆ ಭಾರತದ ಕಲಾ ಮೂರ್ತಿಗಳು ವಿಲಾಯಿತಿ ಯಾತ್ರೆ ಮಾಡಿದವು. ಭಾರತದಲ್ಲಿದ್ದ ಚಿತ್ರಕಲಾ ಸಂಪ್ರದಾಯ ಗಳು ಕೇಳುವವರಿಲ್ಲದೆ ನಶಿಸುತ್ತ ಬಂದವು. ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳೂ, ಅವರ ಸಂಸ್ಥಾನಿಕರೂ ಪಾಶ್ಚಾತ್ಯ ಕಲೆಯ ಕೀಳು ಅನು ಕರಣಗಳಿಗೆ ಬೆಲೆಕೊಡುತ್ತ ಬಂದರು. ಆಕಾಲದಲ್ಲಿ ಏರ್ಪಟ್ಟ ಕಲಾ ಶಾಲೆಗಳಲ್ಲಿ ವಿದ್ಯಾರ್ಥಿಗಳು ಇಟಾಲಿಯನ್, ಫ್ರೆಂಚ್ ಶಿಲ್ಪಗಳನ್ನು ಮಾದರಿ ಯಾಗಿಟ್ಟುಕೊಂಡು ಅವುಗಳ ಪ್ರತಿಚಿತ್ರ ತೆಗೆಯುವುದರಿಂದ ತಮ್ಮ ಶಿಕ್ಷಣ ಆರಂಭಿಸುತ್ತಿದ್ದರು. ನಮ್ಮ ರಾಷ್ಟ್ರೀಯ ಜೀವನದ ಬುನಾದಿಗೇ ಕೊಡಲಿ ಪೆಟ್ಟು ಬಿತ್ತು.

ಈ ಪರಿಸ್ಥಿತಿಯನ್ನು ಹೋಗಲಾಡಿಸಿ ಭಾರತೀಯರಿಗೆ ಭಾರತೀಯತ್ವ ವನ್ನು ಕಲೆಯಲ್ಲಿ ಉಪದೇಶಿಸಿದವರು ಇ. ಬಿ. ಹ್ಯಾವಲ್ ಮತ್ತು ಅವನೀಂದ್ರ ನಾಥ ಠಾಕೂರರು. ಇಟಾಲಿಯನ್, ಫ್ರೆಂಚ ಶಿಲ್ಪಗಳನ್ನು ಬಿಟ್ಟು ಅಜಂತಾ, ಕಾಂಗ್ರಾ ಕಡೆಗೆ ಲಕ್ಷ್ಯಕೊಡಿರೆಂದು ಹ್ಯಾವೆಲ್, ಠಾಕೂರರು ಸಾರಿದರು. ಅವರ ಪ್ರಯತ್ನದಿಂದ ಕಲ್ಕತ್ತೆ, ಶಾಂತಿನಿಕೇತನಗಳಲ್ಲಿ ಸ್ವತಂತ್ರ ಭಾರತ ಸಂಪ್ರದಾಯವಾರಂಭವಾಯಿತು.

'ಭಾರತೀಯ ಚಿತ್ರಕಲೆ ಆದರ್ಶ ನೋಡುವಂಥದು; ಅದು ತನ್ನ ನೈಸರ್ಗಿಕ ಸೌಂದರ್ಯವನ್ನು ಮರೆತಿದೆ' ಎಂಬ ವಾದವನ್ನು ಆರಂಭಿಸಿ ಕ್ಯಾಪ್ಟನ್ ಗ್ಲಾಡ್‌ಸ್ಟನ್ ಸೋಲೋಮನ್ ಅವರು ಮುಂಬಯಿಯಲ್ಲಿ ನಿಸರ್ಗ ಸಂಪ್ರದಾಯವನ್ನು ಆರಂಭಿಸಿದರು. ಇದರ ಪರಿಣಾಮವಾಗಿ ಇಟಾಲಿಯನ್, ಫ್ಲೆಮಿಷ್ ಚಿತ್ರಗಾರರ ಕ್ರಿಸ್ತ ಕೃಷ್ಣನಾಗುತ್ತ ಬಂದ, ಮಾಡೋನ-ಮಗು ಯಶೋದಾ-ಕೃಷ್ಣರಾಗುತ್ತ ಬಂದರು. ಹೊರ ಆಕಾರ, ವಸ್ತ್ರಾಭರಣಗಳ ನಿಯೋಜನೆಯಲ್ಲಿ ಮುಂಬಯಿ ಸಂಪ್ರದಾಯದ ಕೃತಿ ಭಾರತದ್ದೆಂಬ ಭ್ರಾಂತಿ

ಬರಿಸುತ್ತಿದ್ದರೂ, ಅದರಿಂದ ಭಾರತದ ಆತ್ಮ ಮಾಯವಾಗಿತ್ತು. ಕಲ್ಕತ್ತೆಯ ಪ್ರಯತ್ನಕ್ಕೆ ಪ್ರತಿಕ್ರಿಯೆಯಾಗಿ ಹುಟ್ಟಿದ ಈ ಸಂಪ್ರದಾಯದಲ್ಲಿ ಹೆಚ್ಚು ವ್ಯಾಪಾರಿ ಕಲಾವಿದರು (Commercial Artists) ಹುಟ್ಟಿದರೇ ವಿನಾ ಪ್ರತಿಭಾಶಾಲಿಗಳಾದ ಕಲಾಭಿಜ್ಞರು ಹುಟ್ಟಲಿಲ್ಲ.

ಕಲ್ಕತ್ತೆಯ ಆದರ್ಶವಾದ, ಮುಂಬಯಿಯ ನಿಸರ್ಗವಾದ ಎರಡನ್ನೂ ಮೇಳವಿಸಿ ಹುಬ್ಬಳ್ಳಿಯ ಮಿಣಜಗಿ ಮಡಿವಾಳಪ್ಪನವರು ಒಂದು ಪ್ರತ್ಯೇಕ ಪದ್ಧತಿಯನ್ನಾರಂಭಿಸಿದರು. ಇವರ ಪದ್ಧತಿ ಹೆಚ್ಚು ಹೆಚ್ಚಾಗಿ ಕಾಂಗ್ರಾ ಸಂಪ್ರದಾಯದ ಸಮೀಪಗತವಾಯಿತು. ತಮ್ಮ ಮಾಲಕಂಸ, ತೋಡಿ, ಹಂಸಗತಿ, ಮೇಘಮಲ್ಹಾರ ಮೊದಲಾದ ಕೃತಿಗಳಿಂದ ಮಿಣಜಗಿಯವರು ಶಾಶ್ವತವಾದ ಕೀರ್ತಿಯನ್ನು ಗಳಿಸಿಕೊಂಡಿದ್ದಾರೆ. ಆದರ್ಶಕಲೆಗೆ ಅಂಗಾಂಗ ವೈಕಲ್ಯ ಪ್ರಧಾನ 'ಆವಶ್ಯಕತೆಯೆಂಬ ಭಾವನೆಯನ್ನು ಹೋಗಲಾಡಿಸಿದವರು ಮಿಣಜಗಿಯವರು. ಆದರೆ ಇವರ ಕೃತಿಗಳು ರಮ್ಯವಾದವು, ಚೆಲುವಾದವು, ಚಿತ್ತಾಕರ್ಷಕವಾದವುಗಳಿಗೇ ಮೀಸಲಾಯಿತು. ಜೀವನದ ವೈಪರೀತ್ಯ, ವೈಕಲ್ಯ, ವಕ್ರತೆಗಳೂ ಕಲೆಗೆ ಸಾಧನವೆಂಬುದನ್ನು ತೋರಿದವರು ಅಮೀನಾ ಸಾಹೇಬ್ ಕಮಡೋಳಿಯವರು. ಇವರ ಪ್ರಕೃತಿನೋಟಗಳೂ, ಲಂಬಾಣಿ ಜನಜೀವನದ ಚಿತ್ರಗಳೂ ಕಲೆಯ ಬಹುಮುಖತ್ವವನ್ನು ಸ್ಥಾಪಿಸಿ ಭಾರತೀಯ ಚಿತ್ರಕಲೆಯಲ್ಲಿ ವಿಶಿಷ್ಟಸ್ಥಾನ ಗಳಿಸಿಕೊಂಡಿವೆ. ಮೈಸೂರಿನ ಎಸ್. ಎನ್. ಸ್ವಾಮಿಯವರು ಹೊಯ್ಸಳ ಸಂಪ್ರದಾಯವನ್ನನುಸರಿಸಿ ಕೆಲವು ಸುಂದರ ಚಿತ್ರಕೃತಿಗಳನ್ನು ನಿರ್ಮಾಣಮಾಡಿದ್ದಾರೆ. ಹೊಯ್ಸಳ ಶಿಲ್ಪಕೃತಿಗಳ ಚಿತ್ರಪ್ರತಿ ತೆಗೆಯುವ ಕೆಲಸವನ್ನಲ್ಲದೆ, ಆ ಪದ್ಧತಿಯಲ್ಲಿಯೇ ನವನೂತನ ಕೃತಿಗಳನ್ನೂ ರಚಿಸಿದ್ದಾರೆ. ಬಂಗಾಳದ ಕಲಾ ಪುನರೋದಯಕ್ಕೆ ಅಜಂತಾ, ಬಾಗ್ ಚಿತ್ರಗಳ ಪ್ರತಿಚಿತ್ರಣ ನೆರವಾದಂತೆ ಕನ್ನಡ ಕಲಾ ಪುನರೋದಯಕ್ಕೆ ಸ್ವಾಮಿಯವರ ಪ್ರಯತ್ನ ನೆರವಾಗುತ್ತದೆ.

ಇವರೆಲ್ಲಾ ಜೀವನವನ್ನು ನೇರವಾಗಿ ನೋಡಿ, ಹೊರಗಣ್ಣುಗಳಿಗೆ ಅದು ಕಾಣಬರುವ ರೀತಿಯಲ್ಲಿ ಚಿತ್ರಿಸಲೆತ್ನಿಸಿದವರು. ಒಬ್ಬ ವ್ಯಕ್ತಿಯನ್ನು ನಾವು ಹಲವು ಬಗೆಯಲ್ಲಿ ಕಾಣುತ್ತೇವೆ. ಅವನ ಬಟ್ಟೆ ಬರೆ, ಅವನ ನಿಲವು ಚೆಲುವು, ಅವನ ಅಂಗಾಗಳ ವಕ್ರತೆ ಇವೆಲ್ಲ ಹೊರಗಣ್ಣಿಗೆ ಕಾಣುವ

ನೋಟಗಳು ಅಂತರಂಗ ಪರಿಶೋಧಕನಾದ ಕಲಾವಿದ ಅವುಗಳ ಕೋಟೆಯನ್ನು ಭೇದಿಸಿ ವ್ಯಕ್ತಿಯ ಅಂತರಂಗವನ್ನು ಹೊಗುತ್ತಾನೆ. ಅದರೊಳಗೆ ಹುದುಗಿರುವ ಕಾರುಣ್ಯ, ಕಾಠಿಣ್ಯ, ಪ್ರೇಮ ಕಾಮ, ಶಾಂತಿ ಅಶಾಂತಿ, ಸಮಾಧಾನ ಸಮರಗಳನ್ನು ಚಿತ್ರಿಸುತ್ತಾನೆ. ವ್ಯಕ್ತಿಯ ಮನಸ್ಸು ಓಡುವ ಬಗೆ, ಅವನ ಆಚಾರ ವಿಚಾರಗಳು ಅನುಸರಿಸುವ ಮಾರ್ಗವನ್ನು ತೋರುತ್ತಾನೆ. ಈ ಸಂಪ್ರದಾಯದಲ್ಲಿ ಗಾಂಧೀಜಿಯವರ ಚಿತ್ರ ಬಿಡಿಸುವ ಕಲಾವಿದ ಅವರ ತುಂಡು ಪಂಚೆ, ಮುರಿದಹಲ್ಲು, ತೂಗಾಡುವ ಗಡಿಯಾರಗಳನ್ನು ಗಮನಿಸುವುದಿಲ್ಲ. ಆತ್ಮನಿಷ್ಠೆಯಿಂದ ಪುಟಗೊಂಡ ಒಬ್ಬ ರುದ್ರ ವಿರಾಗಿಯನ್ನು ತೋರುತ್ತಾನೆ. ದೇಹ ಪ್ರಮಾಣವನ್ನು ನಿರ್ಲಕ್ಷಿಸಿ, ಅಂತರಂಗದ ವೈಶಿಷ್ಟ್ಯವನ್ನು ನಮ್ಮ ಚಿತ್ತಭಿತ್ತಿಯ ಮೇಲೆ ಮೂಡುತ್ತಾನೆ. ಈ ಸಂಪ್ರದಾಯವನ್ನು ಆರಂಭಿಸಿ ಹೆಚ್ಚಿನ ಪ್ರಗತಿ ಸಾಧಿಸಿರುವವರು ಜೈಮಿನಿರಾಯರು. ರವೀಂದ್ರನಾಥ ಠಾಕೂರರ ಚಿತ್ರಗಳಲ್ಲಿಯೂ ಇಂಥ ಪ್ರಯತ್ನ ಕಂಡು ಬರುತ್ತದೆ. ಜೈಮಿನಿರಾಯರು ಸಂಪ್ರದಾಯಬದ್ಧ ಎಲ್ಲ ಮಾರ್ಗಗಳನ್ನೂ ಗಾಳಿಗೆ ತೂರಿದರು. ಬಣ್ಣಗಳ, ಪ್ರಮಾಣಗಳ, ಹಿನ್ನೆಲೆ ಮುನ್ನೆಲೆಗಳ ನಿಯೋಜನೆಯಲ್ಲಿ ಪ್ರಕೃತಿಯನ್ನನುಸರಿಸಲಿಲ್ಲ–ಮನಸ್ಸನ್ನು ಅನುಸರಿಸಿದರು.

ಆದರ್ಶನದಿಂದ ನಿಸರ್ಗಕ್ಕೆ ಬಂದು, ಮಾನಸಿಕ ಚಿತ್ರಕಲೆಯ ಕಡೆಗೆ ಧಾವಿಸುತ್ತಿದೆ ಭಾರತೀಯ ಚಿತ್ರಕಲಾ ಇತಿಹಾಸ. ಯಾವ ಪದ್ಧತಿಯನ್ನು ಕಲಾವಿದ ಅನುಸರಿಸಿದರೂ ಅವನ ಮಾನವ ಪ್ರೇಮ ಹಾಗೂ ಮಾನವ ಕುಂದುಕೊರತೆಗಳ ಬಗ್ಗೆ ಅನುಕಂಪ ಎರಡೂ ಅವನ ಕಲೆಯ ಮಾನ ದಂಡಗಳಾಗಿವೆ. ತಾನು ಶ್ರೇಷ್ಠ ಜೇಷ್ಠ ಕಲಾವಿದನೆನಿಸಿಕೊಳ್ಳುವ ಹಂಬಲ ಹಿರಿದಲ್ಲ, ಲೋಗರೆಲ್ಲರನ್ನೂ ಕಲಾವಿದರನ್ನಾಗಿ ಮಾಡಬೇಕೆಂಬ ಹಂಬಲು ಹಿರಿದು. ಪ್ರತಿಯೊಬ್ಬ ಮಾನವನೂ ಹುಟ್ಟು ಕಲಾವಿದ. ಕಲಾವಿದಗ್ಧತೆ ಅವನ ಜೀವನದಲ್ಲಿ ಹಲವು ಸಂದರ್ಭದಲ್ಲಿ, ಹಲವು ಸನ್ನಿವೇಶಗಳಲ್ಲಿ ಪ್ರಕಟ ವಾಗುತ್ತದೆ. ಆದರೆ ಅಂಥ ಪ್ರಕಟನೆಯನ್ನು ಗಮನಿಸಿ ಅದರ ಉತ್ಕ್ರಾಂತಿಗೆ ಅವಕಾಶ ಕೊಡದೆ ಅವನು ತನ್ನ ಸ್ವೋಪಜ್ಞತೆಯನ್ನು ನಿಗ್ರಹಿಸಿಬಿಡುತ್ತಾನೆ. ಕಲಾವಿದ ಕೇವಲ ಆತ್ಮದರ್ಶನಕ್ಕೆ ಹೋರಾಡುವ ಸಿದ್ಧನಲ್ಲ, ಆತ್ಮಗಳ

ದರ್ಶನ ಮಾಡಿಸಲು ಹೆಣಗಾಡುವ ಅವಧೂತ. ದೇವರನ್ನು ಕಲಾವಿದನೆಂದು ಋಷಿ ಕಂಡಾಗ, ಅವನ ಪ್ರತಿಛಾಯೆಯಾದ ಮಾನವನೂ ದೇವರಂತೆ ಮಾನವ್ಯಕ್ಕೆ ಸ್ವಸ್ವರೂಪ ದರ್ಶನ ಮಾಡಿಸಲೆಂಬ ತನ್ನ ಹಾರೈಕೆಯನ್ನು ಸುಪ್ತವಾಗಿ ಸೂಚಿಸಿದ್ದಾನೆ.

———

## ೧೫. ಸಾಹಿತಿಯ ಲಕ್ಷ್ಯ

ಪ್ರಾಚೀನ ಕನ್ನಡ ಸಾಹಿತ್ಯವನ್ನು ವಿಹಂಗಮ ದೃಷ್ಟಿಯಲ್ಲಿ ನೋಡಿದಾಗ ಕಂಡುಬರುವ ಮುಖ್ಯ ವಿಷಯ ಅದರ ಧರ್ಮಶ್ರದ್ಧೆ.

ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇರದು ಪೆಣ್ಣರೂಪಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರ ಸೌಖ್ಯಮನೀವುದು...........

ಎಂದು ಆದಿಕವಿ ಪಂಪ ಕನ್ನಡ ಕವಿಗಳ ಲಕ್ಷ್ಯವನ್ನು ಸೂಚಿಸಿದ್ದಾನೆ. ಸಾಹಿತ್ಯವನ್ನು ಪಾಪ-ಪುಣ್ಯಗಳ ತಕ್ಕಡಿಮಾಡಿ

ಪಾಪವಿದು ಪುಣ್ಯವಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದರಿಪುಗು
ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್

ಎಂದು ನೃಪತುಂಗ ಖಚಿತವಾದ ಮಾತುಗಳಲ್ಲಿ ಹೇಳಿದ್ದಾನೆ.

ಭಾರತವರ್ಷದ ಸಮಸ್ತ ವಿದ್ಯೆ, ಸಂಸ್ಕೃತಿ, ವಿಜ್ಞಾನಗಳ ಅಡಿಗಲ್ಲು ಧರ್ಮ. ಧರ್ಮಜ್ಯೋತಿ ಅನವರತ ಉರಿಯುತ್ತಿರಬೇಕು. ವಿಜ್ಞಾನ, ಕಲೆ, ಸಂಸ್ಕೃತಿಗಳೆಲ್ಲವೂ ಅದರ ಪ್ರಭೆಯನ್ನು ಬೆಳಗಿಸುವ ತೈಲಧಾರೆಗಳು. ಶಾಸ್ತ್ರ ಶ್ರೀರೋಹಣಗಿರಿಯಲ್ಲಿ ಅರಸಿದರೆ ನರಕವಿತಾ ಚಿಂತಾರತ್ನ ದೊರೆಯುವುದಿಲ್ಲ—ಅದಕ್ಕೆ ಮಾರಾರಿಯ ಕೃಪೆಬೇಕು.

ಜೈನರು, ವೀರಶೈವರು, ಬ್ರಾಹ್ಮಣರು ಏಕಪ್ರಕಾರವಾಗಿ ತಮ್ಮ ಧರ್ಮಶ್ರದ್ಧೆಯನ್ನು ಸಾರಿದ್ದಾರೆ. ತಮ್ಮ ಕಾವ್ಯಗಳ ನಾಯಕರು ಲೌಕಿಕ ಪುರುಷರಲ್ಲ; ಪರಮ ಜಿನೇಂದ್ರ, ಪರಮೇಶ್ವರ, ಮಹಾವಿಷ್ಣುವೆಂದು ಒತ್ತಿಯೊತ್ತಿ ಹೇಳಿದ್ದಾರೆ. ಇಂಥ ಧರ್ಮನಿಷ್ಠೆಯಿಂದ ಪರಸ್ಪರ ಹೋರಾಟವಾಗಿರಬಹುದೆಂದು ನಾವು ಊಹಿಸಬಹುದು. ಆದರೆ ಧರ್ಮಕ್ಕಾಗಿ ಹೋರಾಟವಾದ ನಿದರ್ಶನಗಳು ಕನ್ನಡ ನಾಡಿನಲ್ಲಿ ತೀರ ವಿರಳ. ವಿವಿಧ ಮತೀಯರು ತಮ್ಮ ತಮ್ಮ ಮತ, ಪ್ರಕ್ರಿಯೆ, ತತ್ತ್ವವೇ ಶ್ರೇಷ್ಠವೆಂದು ಹೇಳಿಕೊಂಡಿದ್ದರೂ ಪರಮತವನ್ನು ಹಳಿದಿರುವ ನಿದರ್ಶನಗಳು ಕಡಿಮೆ.

ಜೈನದೊರೆ ವೀರಶೈವ, ಬ್ರಾಹ್ಮಣ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದ ಸಂಗತಿಗಳೂ, ವೀರಶೈವ ದೊರೆ ಜೈನ, ಬ್ರಾಹ್ಮಣ ದೇವಾಲಯಗಳಿಗೆ ದಾನದತ್ತಿಕೊಟ್ಟ ನಿದರ್ಶನಗಳೂ ಕನ್ನಡಿಗರ ಧಾರ್ಮಿಕ ಇತಿಹಾಸದಲ್ಲಿ ವಿಪುಲವಾಗಿ ದೊರೆಯುತ್ತವೆ. ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರ ಹೊಂದುವುದೂ ಆಗ ಸಾಮಾನ್ಯವಾಗಿದ್ದಿರಬಹುದು. ಧರ್ಮಾಮೃತಪುರಾಣಕಾರ ಇಂಥ ಪ್ರಸಂಗಗಳನ್ನೆತ್ತಿಕೊಂಡು ಸ್ವಾರಸ್ಯವಾಗಿ ವಿಡಂಬನೆ ಮಾಡಿದ್ದಾನೆ.

ಜನತೆಗೆ ಬೇಕಾದುದೇನು? ಇಹಲೋಕದ ವ್ಯಾಪಾರವನ್ನು ಸಾಗಿಸಲು ಅನ್ನ ವಸತಿ—ಪರಲೋಕದ ವ್ಯಾಪಾರಕ್ಕೆ ಸಿದ್ಧವಾಗುವ ಸಾಧನ. ಇಂದು ಇದ್ದು ನಾಳೆ ನಾಶವಾಗುವ ಒಡಲಿಗಾಗಿ ಅಳಬೇಕೇ? ಇಂದು ಇದ್ದು ನಾಳೆ ಅಳಿಯುವ ನರರನ್ನು ಇಂದ್ರ, ಚಂದ್ರ, ದೇವೇಂದ್ರರೆಂದು ಹೊಗಳಬೇಕೇ?

ರಸೆಯೊಳ್ ರಸವತ್ಕವಿತೆಯ
ನುಸಿರಲ್ ಪಡೆದಸಮನಯನನಂ ಪೊಗಳದೆ ಮಾ
ನಿಸರಂ ಸುರರಂ ಪೊಗಳ್ವುದು
ಕಸವರಂ ಕಳೆದು ಕಸವನಾಂತವೊಲಕ್ಕುಂ ||

ಎಂದು ಷಡಕ್ಷರದೇವ ಅಳಿಗವಿಗಳ ನಿರರ್ಥಕ ಪ್ರಯತ್ನವನ್ನು ಖಂಡಿಸಿದ್ದಾನೆ.

ಲೋಕದ ವ್ಯಾಪಾರವನ್ನೆಲ್ಲಾ ನಡೆಸುವ ಲೋಕೇಶ್ವರನೊಬ್ಬನಿದ್ದಾನೆಂದು ಒಪ್ಪಿಕೊಂಡ ಕನ್ನಡ ಕವಿಗಳು ಅವನನ್ನು ಮೆಚ್ಚಿಸದೆ, ನುತಿಸದೆ, ಪೂಜಿಸದೆ ಉಳಿದ ವಿಷಯಗಳಲ್ಲಿ ಮನಸ್ಸಿಹಾಕುವುದು ಅನ್ಯಾಯವೆಂದು ತಿಳಿದಿದ್ದರು. ಲೌಕಿಕ ವಿಷಯಗಳನ್ನೆತ್ತಿಕೊಂಡು ಕಾವ್ಯ ಬರೆಯುವುದೇ ತಪ್ಪು. ಕಾವ್ಯ ಬರೆದರೆ ಈಶ್ವರನನ್ನು ಕುರಿತು ಬರೆಯಬೇಕು—ಇಲ್ಲ ಅವನ ಶರಣಸಂತತಿಯನ್ನು ಕುರಿತು ಬರೆಯಬೇಕು ಎಂದು ವೀರಶೈವ ಕವಿಗಳು ಕಟ್ಟನ್ನೇರ್ಪಡಿಸಿಕೊಂಡಿದ್ದರು. ಲೌಕಿಕ ಜ್ಞಾನ ಭಂಡಾರವಾದ ಮಹಾಭಾರತ ಕುಮಾರವ್ಯಾಸನಿಗೆ ಕೃಷ್ಣಚರಿತಾಮೃತವಾಯಿತು.

ಈ ಮಿತಿಯಿಂದ ಕನ್ನಡ ನಾಡು ಪರಿಶುದ್ಧ ಸಾಹಿತ್ಯ-ಪವಿತ್ರಸಾಹಿತ್ಯವೆಂದು ಹೆಸರಾದ ಸಾಹಿತ್ಯವನ್ನು ಸೃಷ್ಟಿಸಿತು. ಉದಾತ್ತ ವಿಚಾರಗಳನ್ನು ಉದಾತ್ತ ರೀತಿಯಲ್ಲಿಯೇ ಹೇಳಬೇಕೆಂದು ಪ್ಲೇಟೋ ವಿಧಿಸಿದ ಸೂತ್ರವನ್ನು ಕನ್ನಡಿಗರು ಅಕ್ಷರಶಃ ಪಾಲಿಸಿದ್ದಾರೆ. ಪಂಪನ ಅರಿಕೇಸರಿ, ಜನ್ನನ ಅನಂತನಾಥ, ಹರಿಹರನ ಬಸವೇಶ್ವರ, ರಾಘವಾಂಕನ ಸಿದ್ಧರಾಮ, ಕುಮಾರವ್ಯಾಸನ ಕೃಷ್ಣ ಪರಮಪುರುಷರು. ಆದರ್ಶಜೀವನ ನಡೆಸಿದ ಮಹಾನುಭಾವರು. ಲೋಕಕ್ಕೆ ಅವರ ನಡೆ, ನುಡಿ, ಮಾದರಿಯಾಗಲಿ ಎಂಬ ಪವಿತ್ರಾಕಾಂಕ್ಷೆ ಸಾರ್ಥಕವಾಗಿದೆಯೆಂದು ಧಾರಾಳವಾಗಿ ಹೇಳಬಹುದು.

ಪ್ರಾಚೀನ ಕನ್ನಡ ನಾಡಿನ ರಾಷ್ಟ್ರೀಯ ಹಾಗೂ ಸಾಮಾಜಿಕ ವ್ಯವಸ್ಥೆಗಳನ್ನು ಗಮನಿಸಿದರೆ ಇಂಥ ಸಾಹಿತ್ಯ ಆ ಕಾಲಕ್ಕೆ ಬೇಕಾಗಿದ್ದುದು ಮಾತ್ರವಲ್ಲ—ಸಾಕಾಗಿತ್ತು ಎಂದು ತರ್ಕಿಸಬಹುದು. ಭಾರತದ ಇತರ ಭಾಗಗಳಂತೆ ಕನ್ನಡನಾಡೂ ಹಳ್ಳಿಗಳ ನಾಡು. ಜೀವನಕ್ಕೆ ಹೆಚ್ಚು ಅನುಕೂಲಗಳೂ, ಪದಾರ್ಥಗಳೂ ಬೇಕೆಂದು ಬಯಸುತ್ತಿದ್ದ ಜನ ಅಲ್ಲಿರಲಿಲ್ಲ. ಅವರ ಜೀವನವನ್ನು ತೃಪ್ತಿ ಆಳುತ್ತಿತ್ತು. ಪಟ್ಟಣಗಳ ನಾಗರಿಕತೆಯಾಗಲಿ, ಪಟ್ಟಣಗಳ ನಿತ್ಯ ಅತೃಪ್ತಿಯಾಗಲಿ ಹಳ್ಳಿಗಳಿಗೆ ವ್ಯಾಪಿಸಿರಲಿಲ್ಲ. ಹಳ್ಳಿ ಒಂದು ಕುಟುಂಬ—ಹಲವು ಹಳ್ಳಿಗಳು ಒಂದು ದೊಡ್ಡ ಕುಟುಂಬ ಎಂಬ ಭಾವನೆ ಬೇರೂರಿದ್ದ ಕಾಲ. ಪಚ್ಚೆಪಯಿರುಗಳ ಮಧ್ಯೆ ಓಡಿಯಾಡುತ್ತಾ ಕೋಗಿಲೆ ಕಾಜಾಣಗಳ ಮಂಜುಳಗಾನವನ್ನು ಲಾಲಿಸುತ್ತಾ ಸೂರ್ಯೋದಯ, ಸೂರ್ಯಾಸ್ತಗಳ ಚೆಲುವನ್ನು ತುಂಬಿಕೊಳ್ಳುತ್ತಾ ಜನ ಇದ್ದುದರಲ್ಲೆ ತೃಪ್ತಿಪಟ್ಟುಕೊಂಡು ಸುಖವಾಗಿದ್ದ ಕಾಲ. ಅವರಿಗೆ ಜೀವನದ ಜಂಜಾಟವೂ ಕಡಿಮೆ, ಸಮಸ್ಯೆಗಳೂ ಕಡಿಮೆ. ಮನಸ್ಸು ಆಮುಷ್ಮಿಕ ಚಿಂತನೆಯಲ್ಲಿ ವಿಲೀನವಾಗಲು ತಕ್ಕ ವಾತಾವರಣ, ಅನುಕೂಲ್ಯಗಳೂ ಇದ್ದವು.

ಆದರೆ ಪ್ರಾಚೀನ ಕನ್ನಡ ನಾಡಿನ ಪ್ರತಿನಿಧಿಗಳಾದ ಕವಿಗಳೆಲ್ಲಾ ಧಾರ್ಮಿಕ ಸಾಹಿತ್ಯವೊಂದನ್ನೇ ಬೆಳಸಿದರು ಎಂದು ಭಾವಿಸುವುದೂ ತಪ್ಪಾದೀತು. ಪಂಪ ತನ್ನ ಆದಿಪುರಾಣದಲ್ಲಿ ಸಾಮ್ಯವಾದದ ಮೇಲೆ ತನ್ನ ದೃಷ್ಟಿ ಚೆಲ್ಲಿದ್ದಾನೆ. ಜನ್ನ ತನ್ನ ಯಶೋಧರ ಚರಿತ್ರೆಯಲ್ಲಿ ನೀತಿಯು

ಪ್ರಶ್ನೆಯನ್ನು ವಿಪುಲವಾಗಿ ಚರ್ಚಿಸಿದ್ದಾನೆ. ರತ್ನಾಕರವರ್ಣಿ ತನ್ನ ಭರತೇಶವೈಭವದಲ್ಲಿ ಇಹಲೋಕದ ಬಾಳುವೆಯ ಸೌಖ್ಯವನ್ನು ಅನ್ಯಾದೃಶ ವಾಗಿ ಬಣ್ಣಿಸಿದ್ದಾನೆ. ರಾಘವಾಂಕ ತನ್ನ ಹರಿಶ್ಚಂದ್ರಕಾವ್ಯ ಬರೆದುದೇ 'ನಮ್ಮ ಜನ ಬದುಕಲೆಂದು.' ಸರ್ವಜ್ಞನಂತೂ ತನ್ನ ತ್ರಿಪದಿಗಳ ಜ್ಞಾನ ಭಂಡಾರವನ್ನು ಮನೆಮನೆಗೆ ಎಳ್ಳು ಬೀರಿದಂತೆ ಬೀರಿದ್ದಾನೆ. 'ಇಲ್ಲಿ ಸಲ್ಲುವವರು ಅಲ್ಲೂ ಸಲ್ಲುವರಯ್ಯಾ' ಎಂಬ ದೃಷ್ಟಿ ಪ್ರಾಚೀನರಿಗಿದ್ದರೂ ಅವರ ಲಕ್ಷ್ಯ ಹೆಚ್ಚಾಗಿದ್ದುದು ಧರ್ಮದ ಕಡೆಗೇ-ಪರಲೋಕದ ಕಡೆಗೇ !

ಭಾರತಕ್ಕೆ ಬ್ರಿಟಿಷರು ಕಾಲಿಟ್ಟಮೇಲೆ ನಮ್ಮ ರಾಜಕೀಯ ಜೀವನ ಅವಲು ಬದಲಾದಂತೆ ನಮ್ಮ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯರಂಗಗಳೂ ಮಹಾಕ್ರಾಂತಿಗೆ ತುತ್ತಾದವು. ಹಳ್ಳಿಯ ಬಾಳು ನಿರ್ಮೂಲವಾಗುತ್ತ ಬಂದು ದೊಡ್ಡ ದೊಡ್ಡ ಪಟ್ಟಣಗಳು ಹುಟ್ಟಿಕೊಂಡವು. ಹಳ್ಳಿಗಳೇ ದೊಡ್ಡ ಪಟ್ಟಣಗಳಾದವು. ಹೊಸ ಹೊಸ ಸಮಸ್ಯೆಗಳು ತಲೆಹಾಕುತ್ತ ಬಂದವು. ಇಂಗ್ಲಿಷ್ ಶಿಕ್ಷಣ ಪಡೆದ ವಿದ್ಯಾವಂತರು ಪಾಶ್ಚಾತ್ಯ ಜಗತ್ತಿನ ವಿಚಾರ ಧೋರಣೆಯನ್ನು ಮಂಡಿಸುತ್ತ ಬಂದರು. ಒಂದು ಶತಮಾನದಿಂದ ಒಂದೇ ಸಮನಾಗಿ ಪ್ರಾಚ್ಯ ಪಾಶ್ಚಾತ್ಯ ತತ್ತ್ವಗಳ ಹೋರಾಟ ಹಿಂದೂಸ್ಥಾನದಲ್ಲಿ ನಡೆದಿದೆ. ಆಳರಸರನ್ನು ಎದುರಿಸಬೇಕಾದರೆ ಅವರ ವಿದ್ಯೆ, ಕಲೆ, ವಿಜ್ಞಾನಗಳಲ್ಲಿ ನಮ್ಮ ಜನ ನಿಪುಣರಾಗಬೇಕೆಂದು ರಾಜಾ ರಾಮಮೋಹನ ರಾಯರು ಸಾರಿದರು. ಭಾರತ ಯಾವ ಮೋಹಕ್ಕೂ ಬಲಿಯಾಗದೆ ತನ್ನ-ತನ ವನ್ನು ಉಳಿಸಿಕೊಳ್ಳಬೇಕು. ಜನ ತಮ್ಮ ನಿರಾಡಂಬರ ಗ್ರಾಮ್ಯ ಜೀವನಕ್ಕೆ ಮರಳಬೇಕು, ಯಂತ್ರಪ್ರಭಾವವನ್ನು ದೂರೀಕರಿಸಬೇಕು ಎಂದು ಗಾಂಧೀಜಿ ಹೇಳುತ್ತ ಬಂದಿದ್ದಾರೆ. ನಿಸರ್ಗದ ಮುಂದೆ ಮಾನವನ ಕೃತಕಶಕ್ತಿ ದುರ್ಬಲವೆಂಬುದನ್ನು ರವೀಂದ್ರನಾಥ ಠಾಕೂರರು ತಮ್ಮ 'ಮುಕ್ತಧಾರಾ' ನಾಟಕದಲ್ಲಿ ಮಂಡಿಸಿದ್ದಾರೆ.

ಈ ತತ್ವಗಳ ಹೋರಾಟಕ್ಕೂ ಸಾಹಿತ್ಯಕ್ಕೂ ಯಾವ ಸಂಬಂಧ ? ಸಾಹಿತ್ಯ ನಿತ್ಯ ಚೇತೋಹಾರಿ. ಆನಂದವೇ ಅದರ ಜೀವ ಜೀವಾಳ. ಅದರ ಜೀವನವೇ ರಸ, ವಿರಸ ಅದಕ್ಕೆ ಮರಣ ಎಂದು ಕೆಲವರು ವಾದಿಸ ಬಹುದು. ಕವಿಯ ಕಲ್ಪನಾ ವಿಲಾಸವನ್ನವಲಂಬಿಸಿ ಸಾಹಿತ್ಯ ನಿರ್ಮಾಣ

ವಾದರೂ ಅದರ ಹಿನ್ನೆಲೆಯಲ್ಲಿರುವುದು ಜನರ ಬಾಳು ಹಾಗೂ ಪರಿಸ್ಥಿತಿಯ ಪ್ರಭಾವ. ವೀರಶ್ರೀ ಕನ್ನಡನಾಡಿನಲ್ಲಿ ಲಾಸ್ಯವಾಡುತ್ತಿದ್ದ ಕಾಲದಲ್ಲಿ ಹುಟ್ಟಿದವು ಪಂಪಭಾರತ, ರನ್ನನ ಗದಾಯುದ್ಧ, ಭಕ್ತಿಯ ಆವೇಗ ಬೆಳೆದಾಗ ಹುಟ್ಟಿದವು ಹರಿಹರನ ರಗಳೆಗಳು, ವಚನ ಸಾಹಿತ್ಯ, ಹರಿದಾಸ ಸಾಹಿತ್ಯ. ಕಾಲದ ನೋಟಕ್ಕೆ ಸಿಗದ ದೂರದ ನೋಟವನ್ನು ಕವಿನೋಡ ಬಲ್ಲ-ಅವನು ದೃಷ್ಟಾರ. ಆದರೆ ಕಾಲ ಅನಿರೀಕ್ಷಿತವಾಗಿ ಅವನ ಮೇಲೆ ತನ್ನ ಪ್ರಭಾವಮುದ್ರೆಯನ್ನೊತ್ತದೆ ಬಿಡುವುದಿಲ್ಲ. ವ್ಯಷ್ಟಿ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿ ಬಂದಿರುವುದರಿಂದ ಅವನು ಸಮಷ್ಟಿಯ ಅಧೀನನಾಗುತ್ತಾನೆ. ತನ್ನ ಪ್ರತಿಭೆಯಿಂದ ಸಮಷ್ಟಿಯ ಮುಖವನ್ನು ಅವನು ಮಾರ್ಪಡಿಸಬಲ್ಲ. ವ್ಯಷ್ಟಿ-ಸಮಷ್ಟಿಗಳು ಪರಸ್ಪರಾಧೀನ. ಕವಿ ನಿರ್ವಿಕಲ್ಪನೆಂದೂ ಸ್ವಯಂಭೂ ಎಂದೂ ಭಾವಿಸುವುದು ಸತ್ಯದ ವಿಪರ್ಯಾಸ.

ಸಮಕಾಲೀನ ಸಾಮಾಜಿಕ ಜೀವನಕ್ಕೂ ಪ್ರಾಚೀನ ಕನ್ನಡ ಸಾಹಿತ್ಯಕ್ಕೂ ಸಾಮರಸ್ಯವಿದೆ. ಬ್ರಿಟಿಷರ ಆಗಮನಾನಂತರ ಉದಯವಾದ ಕನ್ನಡ ಸಾಹಿತ್ಯದಲ್ಲಿ ಈ ಅಂಶ ಕಡಿಮೆ. ನಮ್ಮ ಜೀವನದ ಮೇಲೆ-ಪರಂಪರಾಗತವಾದ ಜೀವನದ ಮೇಲೆ ದೊಡ್ಡ ಆಘಾತವಾಯಿತು. ನಮ್ಮ ರಾಜಕೀಯ ತತ್ವಗಳನ್ನು ಫ್ರಾನ್ಸ್, ರಷ್ಯಾದೇಶಗಳ ಕ್ರಾಂತಿ ಇತಿಹಾಸಗಳೂ, ಮಿಲ್, ಬರ್ಕ್, ಕ್ಲಾರ್ಲ್ ಮಾರ್ಕ್ಸ್ ಇವರ ಕೃತಿಗಳೂ ಬಲವಾಗಿ ಅಲುಗಾಡಿಸಿದವು. ನಮ್ಮ ಸಾಮಾಜಿಕ ಜೀವನ ಪಟ್ಟಣದ ಸಂಸ್ಕೃತಿಯಿಂದ ಬೆಳೆದ ಅತೃಪ್ತಿ, ಅಸಂತೋಷಗಳಿಂದ ಅಲ್ಲೋಲ ಕಲ್ಲೋಲವಾಯಿತು. ನಮ್ಮ ಶಿಕ್ಷಣ, ಸಾಹಿತ್ಯ, ಕಲೆಗಳೆಲ್ಲಾ ಒಂದು ವಿಚಿತ್ರ ಸಂಗಮಕ್ಕೆ ಸಿಕ್ಕಿ ತಮ್ಮ ನಿರ್ದಿಷ್ಟ ಸ್ವರೂಪವನ್ನು ಕಳೆದುಕೊಂಡವು.

ಸಂಧಿಕಾಲದ ವಿಷಮಪರಿಸ್ಥಿಯನ್ನು ನಾವು ಈಗೀಗ ನಿವಾರಿಸಿಕೊಂಡು ನಮ್ಮ ಆವಶ್ಯಕತೆಯನ್ನು ಪೂರೈಸುವ ಸಾಹಿತ್ಯ ರೂಪಗಳನ್ನು ಕಂಡುಕೊಳ್ಳುತ್ತಿದ್ದೇವೆ. ನಾಲ್ಕು ದಶಕಗಳಿಂದ ಪ್ರಯತ್ನ ಒಂದೇ ಸಮನಾಗಿ ನಡೆಯುತ್ತಿದೆ. ಪ್ರಯತ್ನ ಸಾಕಷ್ಟು ಯಶಸ್ವಿಯಾಗಿದೆಯೆಂದಾಗಲಿ ಪ್ರಗತಿಶೀಲರು ನಿರೀಕ್ಷಿಸುವ ವೈಜ್ಞಾನಿಕ ಮನೋಭಾವ ನಮ್ಮ ಸಾಹಿತ್ಯದಲ್ಲಿ ಮೂಡಿದೆಯೆಂದಾಗಲಿ ಧೈರ್ಯವಾಗಿ ಹೇಳಬರುವಂತಿಲ್ಲ.

ನಮ್ಮ ಜನಾಂಗದ ಅವನತಿಗೆ ಬಹುಮಟ್ಟಿಗೆ ಕಾರಣವಾಗಿರುವುದು ನಮ್ಮ ವೈಯಕ್ತಿಕ ನೋಟ. ನಮ್ಮ ಧರ್ಮ ನಮಗೆ ತಿಳಿಸಿಕೊಟ್ಟಿರುವುದೂ ಈ ವೈಯಕ್ತಿಕ ನೋಟವನ್ನೇ. ಇಂದು ನಮ್ಮ ಬಾಳು ಹಲವರ ಬಾಳಿನೊಂದಿಗೆ ಹಾಸುಹೊಕ್ಕಾಗಿರುವಾಗ ವೈಯಕ್ತಿಕ ನೋಟ, ಬಾಳುವೆಗಳಿಂದ ತೃಪ್ತಿಹೊಂದುತ್ತೇವೆಯೆಂಬ ಮಾತು ವಿನಾಶಕಾರಕ. ಸಮಷ್ಟಿಯಬಲ, ಸಂಘಶಕ್ತಿಯ ಹಿರಿಮೆಯನ್ನು ನಾವು ಮನಗಾಣಬೇಕು. ವ್ಯಕ್ತಿ ತನ್ನ ಅಂತರ್ಗತ ಶಕ್ತಿಯ ಪರಿಪೂರ್ಣ ಪ್ರಕಟನೆಗೆ ಹೆಣಗಬೇಕು. ನರ ಹರನಾಗಬೇಕು. ಆದರೆ ಆ 'ಹರತ್ವ' ಲೋಕಸೇವೆಗೆ-ಲೋಕಕಲ್ಯಾಣಕ್ಕೆ ಮೀಸಲಾಗಬೇಕು.

ಈ ಶತಮಾನದಾದಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ತಲೆದೋರಿದ ನವೋದಯಕ್ಕೆ ರಾಷ್ಟ್ರೀಯ ಸ್ವರೂಪ, ಸಾಂಘಿಕ ಚೈತನ್ಯವನ್ನು ಕೊಡಲು ಶಾಂತಕವಿಗಳು, ಆಲೂರ ವೆಂಕಟರಾಯರು ಪ್ರಯತ್ನಿಸಿದರು. ನಾನು ಎಂಬ ಭಾವನೆ ಮೊದಲು ತೊಲಗಿ ನನ್ನನಾಡು-ನನ್ನಭಾಷೆ ಎಂಬ ಅಭಿಮಾನ ಬೆಳೆಯಲಿ ಎಂದು ಅವರು ಹಾರೈಸಿದರು. ಸಾಹಿತ್ಯ ಪಂಡಿತರ, ವಿವಿಧ ಕಳಾಮಂಡಿತರ ಸೊತ್ತಾಗಿರದೆ ಸರ್ವಸಾಮಾನ್ಯರ ಸೊತ್ತಾಗಿರಬೇಕೆಂದು ಅವರು ನಿರಂತರವಾಗಿ ಶ್ರಮಿಸಿದರು. ಎಂ. ಎಸ್. ಪುಟ್ಟಣ್ಣ, ಮಾಸ್ತಿ, ಕೈಲಾಸಂ, ಪಂಜೆ, ಕಾಮತ್ ಮೊದಲಾದ ಪ್ರತಿಭಾಶಾಲಿ ಲೇಖಕರು ಜನಜೀವನದ ಚಿತ್ರಗಳನ್ನುಸಾಹಿತ್ಯದಲ್ಲಿ ಪ್ರತಿಬಿಂಬಿಸುವ ಕೆಲಸಕ್ಕೆ ಕೈಹಾಕಿದರು. ಆದರೆ ಇವರ ಪ್ರಯತ್ನಗಳು ನಾಡಿನ ಆವಶ್ಯಕತೆಯನ್ನು ಪೂರೈಸಲಿಲ್ಲ. ಪ್ರಾಚೀನ ಸಾಹಿತ್ಯ ಪಂಡಿತರ ಸೊತ್ತಾಗಿದ್ದಂತೆ ಅರ್ವಾಚೀನ ಸಾಹಿತ್ಯ ಮಧ್ಯಮವರ್ಗದವರ (ಬೂರ್ಜ್ವಾ) ಮುಖವೀಣೆಯಾಯಿತು.

ಪ್ರಾಗತಿಕ ಸಾಹಿತ್ಯದ ಕೀಲುಗಳನ್ನರಸುವಾಗ ನಾವು ಮೊದಲು ಗಮನಿಸಬೇಕಾದುದು ಜನತೆಯ ಸಂಪರ್ಕ. ನಮ್ಮನಾಡಿನಲ್ಲಿ ಪಂಡಿತರು, ಕಲಿತವರು, ಶ್ರೀಮಂತರು, ರಾಜ ಮಹಾರಾಜರೂ ಕವಿಚಕ್ರವರ್ತಿಗಳು ವಿರಳ. ದೇಶದ ಬಹುಸಂಖ್ಯಾತ ಜನ ಶ್ರಮಜೀವಿಗಳು—ದುಡಿದು ಹೊಟ್ಟೆ ತುಂಬಿಕೊಳ್ಳುವ ಜನ. ಬಾಳಿನ ಬವಣೆಯಲ್ಲಿ ಮಿಕ್ಕೆಲ್ಲ ವಿಷಯಗಳನ್ನೂ ಬದಿಗೊತ್ತುವ ಮನೋಭಾವ ಈ ಜನತೆಯಲ್ಲಿ ತಾನೇ ಕಾಣಾಗಿದೆ.

ಹಾಗಾದರೆ ಸಾಹಿತ್ಯ ಯಾರಿಗಾಗಿ ಸೃಷ್ಟಿಯಾಗಬೇಕು ? ವಿಲಾಸಜೀವನಕ್ಕೆ ಮಾತ್ರ ಮೀಸಲು ವರ್ಗದವರಿಗೆ ಸಾಹಿತ್ಯ ಅನವಶ್ಯಕ ; ಮಧ್ಯಮ ಅಥವಾ ಕೆಳವರ್ಗದವರಿಗೆ ಸಾಹಿತ್ಯ ಸವಿಯನ್ನನುಭವಿಸುವ ಸಿದ್ಧತೆ, ಕಾಲಾವಕಾಶ, ಅನುಕೂಲ್ಯಗಳ ಅಭಾವ ಇಂಥ ತ್ರಿಶಂಕುಸ್ವರ್ಗದಲ್ಲಿ ತೂರಾಡುತ್ತಿದೆ ನಮ್ಮ ಸಾಹಿತ್ಯ.

ಇಡಿಯ ಜಗತ್ತಿನ ವಿಚಾರಲಹರಿಯ ಮೇಲೆ ಅದ್ಭುತ ಪರಿಣಾಮ ವನ್ನುಂಟುಮಾಡಿದ ಕಾರ್ಲ್ ಮಾರ್ಕ್ಸ್, ಸಿಗ್ಮಂಡ್ ಫ್ರಾಯ್ಡ್, ಮತ್ತು ಗಾಂಧೀಜಿಯವರ ತತ್ವಗಳು ಜನತೆಯ ಮೇಲೆ ಪ್ರಭಾವ ಮೂಡಿವೆ. ಮಾರ್ಕ್ಸ್‌ನ ಆರ್ಥಿಕ ಸಮವಿಭಜನೆ, ಫ್ರಾಯ್ಡ್‌ನ ಅಂತರಂಗ ವಿವೇಚನೆ, ಗಾಂಧೀಜಿಯಲ್ಲಿನ ಸಮದರ್ಶನ ಅವರ ಹೆಸರು ಕೂಡ ಕೇಳರಿಯದ ಸಾಮಾನ್ಯ ಜನತೆಯ ಚಿತ್ತವನ್ನು ಸೆರೆಹಿಡಿದಿವೆ. ಆದರೆ ಅವರ ಪ್ರಭಾವಕ್ಕೆ ಸೋಲದಿರುವವರು ಮಧ್ಯಮವರ್ಗದ ಕನ್ನಡ ಸಾಹಿತಿಗಳು. ಸಾಹಿತಿ ಜನತೆಯ ಗುರುವಾಗುವ ಮಾತು ಹಾಗಿರಲಿ; ಜನತೆಯ ಪ್ರಾಗತಿಕ ವಿಚಾರ ಧೋರಣೆಯನ್ನು ಅರ್ಥಮಾಡಿಕೊಳ್ಳದಷ್ಟು ಪ್ರತಿಗಾಮಿಯಾಗಿದ್ದಾನೆ ಸಾಹಿತಿ.

ನವೋದಯಕಾಲದ ಸಾಹಿತಿಗಳು ಜನತೆಯ ಜೀವನಕ್ಕೆ ಸಂಬಂಧ ಪಟ್ಟ ವಸ್ತುಗಳನ್ನೇ ತಮ್ಮ ಕೃತಿಗಳಿಗಾರಿಸಿಕೊಂಡರು. ವಸ್ತು ಜನತೆಗೆ ಸಂಬಂಧಪಟ್ಟರೇನಾಯಿತು ?— ವಿಚಾರ ಇವರದೇ ! ಬೋರ, ಯಾಕೂಬ, ಮೊಸರಿನ ಮಂಗಮ್ಮ, ನೀಲಗಾರ ಮಾದ, ಜಟಕಾಸಾಬಿ ಸಾಹಿತ್ಯದಲ್ಲಿ ಅವತರಿಸಿದರು. ಆದರೆ ಅವರ ವೇಷಭೂಷಣ, ಮಾತು ಕತೆ, ವಿಚಾರಲಹರಿ ಎಲ್ಲಾ ಮಧ್ಯಮವರ್ಗದವರ ಶುಕಭಾಷೆ. ಸಾಮಾನ್ಯಜನತೆಯನ್ನು ಸಾಹಿತ್ಯದಲ್ಲಿ ತಂದೆವೆಂದೂ ತಾವೂ ಪ್ರಗತಿಶೀಲರೆಂದೂ ಈ ಸಾಹಿತಿಗಳು ಹೇಳಿಕೊಳ್ಳುವುದೂ ಉಂಟು. ಆದರೆ ಇವರ ಸಾಮಾನ್ಯಜನತೆ ಮಧ್ಯಮ ಹಾಗೂ ಮೇಲುವರ್ಗದವರ ದರ್ಪ ಅಧಿಕಾರ, ಸುಲಿಗೆಗಳಿಗೆ ತುತ್ತಾದ ಹುತಾತ್ಮರು.

ಜನತೆಯ ಕಷ್ಟಸುಖಗಳನ್ನು ಜನತೆಯ ಕಣ್ಣಿಂದ ನೋಡಿ, ಮನಸ್ಸಿನಿಂದ ಅನುಭವಿಸಿ ಚಿತ್ರಿಸಬೇಕು. ಮಾರ್ಕ್ಸ್ ಪ್ರತಿಪಾದಿಸಿದ ಸಮಾನ ಶಿಕ್ಷಣ, ಸಮಾನ ವಸತಿ, ಸಮಾನ ಆಹಾರ ವಿಹಾರ ತತ್ವದಲ್ಲಿ

ಸಾಹಿತಿಗೆ ನಂಬಿಕೆಯಿರಬೇಕು. ಅವುಗಳ ಒಳಮರ್ಮವನ್ನು ಘ್ರಾಣ್ಯದ್ರನಂತೆ ನೋಡುವ ಪ್ರತಿಭೆ ಸಾಹಿತಿಗೆ ಇರಬೇಕು. ಇವೆಲ್ಲದರ ಕಳಶವಾಗಿ ಗಾಂಧೀಜಿಯವರ ಸಮದರ್ಶನ, ಅಂತಃಕರಣವಾದ ಸಾಹಿತಿಯ ಉಸಿರಾಗಿರಬೇಕು. ಸಾಹಿತಿಗೆ ಆಳವಾದ ಅನುಭವದ ಅಗತ್ಯವೆಷ್ಟೋ ಅಷ್ಟೇ ಆಳವಾದ ಅಂತಃಕರಣದ ಅಗತ್ಯವೂ ಇದೆ. ಕನ್ನಡ ಸಾಹಿತ್ಯದ ಸ್ಥಾಯಿಸ್ಥಿತಿಗೆ ಅನುಭವ, ಅಂತಃಕರಣಗಳ ಅಭಾವವೇ ಮೂಲಕಾರಣ.

ಡ್ರೇಟನ್ ಕವಿಯ ಬಗ್ಗೆ ಹ್ಯಾಜಲಿಟ್ 'ಮನುಷ್ಯನಾಗಿ ಅನುಭವಿಸಿದ್ದನ್ನು ಸಾಹಿತಿಯಾಗಿ ಹೇಳುವ ಧೈರ್ಯ ಅವನಿಗಿತ್ತು.' (He had the courage to say as an author what he felt as a man) ಎಂದು ಹೇಳಿದ್ದಾನೆ. ನಮ್ಮ ಸಾಹಿತಿಗಳಲ್ಲಿ ಮನುಷ್ಯರಾಗಿ ಅನುಭವಿಸುವ ಗುಣವೂ ಇಲ್ಲ—ಸಾಹಿತಿಗಳಾಗಿ ಹೇಳುವ ಧೈರ್ಯವೂ ಇಲ್ಲ. ಅವರ ನುಡಿಯಲ್ಲಿ ನೈರಾಶ್ಯವಾದ, ಭಯ, ದೌರ್ಬಲ್ಯ ತುಂಬಿ ತುಳುಕುತ್ತಿದೆ. ದೇಶದಲ್ಲಿ ಪ್ರಳಯಕಾರಕ ಘಟನೆಗಳಾದರೂ ಸಾಹಿತಿ ಕೋಗಿಲೆ ಕಾಜಾಣಗಳ ಕನವರಿಕೆಯಲ್ಲಿರುತ್ತಾನೆ. ದೇಶ ಅಲ್ಲೋಲ ಕಲ್ಲೋಲವಾಗುತ್ತಿದ್ದರೆ ಸಾಹಿತಿ ಸೌಂದರ್ಯೋಪಾಸನೆಯಲ್ಲಿ ತೊಡಗಿರುತ್ತಾನೆ. ರೋಮ್ ಉರಿಯುತ್ತಿದ್ದರೆ ನೀರೋ ಪಿಟೀಲು ಬಾರಿಸುತ್ತಿದ್ದನಂತೆ. ಭಾರತ—ಕರ್ನಾಟಕ ಉರಿಯುತ್ತಿದ್ದರೆ ಕನ್ನಡ ಸಾಹಿತಿಗಳು ವೀಣೆ ಬಾರಿಸುತ್ತಾರೆ! ನಮ್ಮಲ್ಲಿ ಸತ್ಯವನ್ನರಸಬೇಕು ನಿರ್ಭೀತಿಯಿಂದ—ಸಮಷ್ಟಿಯ ಮುಕ್ತಿಯನ್ನು ಸಾಧಿಸಬೇಕು ಎಂಬ ಹಾಹಾಕಾರ ಹುಟ್ಟಿಲ್ಲ. ಸತ್ಯಸಾಧನೆಯ, ಮುಕ್ತಿ ಸಂಘಟನೆಯ ಹಾಹಾಕಾರ ಹುಟ್ಟುವವರೆಗೆ ಉತ್ತಮ ಸಾಹಿತ್ಯ ಯಾವ ದೇಶದಲ್ಲಿಯೂ ಹುಟ್ಟಲಾರದು. ಸಾಹಿತಿ 'ಅಭೀಃ' ಮಂತ್ರಮುಗ್ಧನಾದ ಹೊರತೂ ಅವನಿಂದ ಸಜೀವ ಸಾಹಿತ್ಯವನ್ನು ನಿರೀಕ್ಷಿಸುವುದು ಮರಳುಗಾಡಿನಲ್ಲಿ ಮಲ್ಲಿಗೆಯನ್ನರಸಿದಂತೆ ನಿರರ್ಥಕ.

ಕನ್ನಡ ಸಾಹಿತಿಗಳನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದಿರುವ ಸಂಪ್ರದಾಯಬದ್ಧತೆ, ಹೃದಯ ದೌರ್ಬಲ್ಯಗಳನ್ನು ಮುಚ್ಚುವುದಕ್ಕೆ ಅವರು ನೀತಿ, ಧರ್ಮ, ಶೀಲ, ಪುರಾತನಗಳ ಮರೆಹೊಗುತ್ತಾರೆ. ಅವರ ದೃಷ್ಟಿಯಲ್ಲಿ ಸಾಹಿತ್ಯ ನೀತಿ ಬೋಧೆ ಮಾಡಬೇಕು. ಯಾವ ನೀತಿಯನ್ನು?—

ನೀತಿ ಶಬ್ದಕ್ಕೆ ಸರಿಯಾದ ಅರ್ಥವನ್ನು ಇದುವರೆಗೆ ಯಾರಾದರೂ ಕೊಡಲು ಸಮರ್ಥರಾಗಿದ್ದಾರೆಯೇ ? ಜನ ಅನುಸರಿಸಬೇಕಾದುದು ಯಾವ ಕಾಲದ ನೀತಿಯನ್ನು—ರಾಮಾಯಣ ಕಾಲದ ನೀತಿಯೇ—ಮಹಾಭಾರತ ಕಾಲದ ನೀತಿಯೇ—ಇಂದಿನ ನೀತಿಯೇ ? ಕಾಲಕಾಲಕ್ಕೆ ನೀತಿಯ ಕಲ್ಪನೆ ಮಾರ್ಪಾಟು ಹೊಂದುತ್ತ ಬಂದಿರುವಾಗ ಸಾಹಿತಿ ಸತ್ತಸೂತ್ರಗಳಿಗೆ ಗಂಟು ಬಿದ್ದು ಅವುಗಳನ್ನು ಪುನರುಜ್ಜೀವನಗೊಳಿಸಲೆತ್ನಿಸುವುದು ಎಂಥ ಮೌಢ್ಯ? ಸಾಹಿತ್ಯದ ಉದ್ದೇಶ ಜನರನ್ನು ಉತ್ತಮರನ್ನಾಗಿ ಮಾಡುವುದಲ್ಲ. ಅವರನ್ನು ವಿವೇಕಿಗಳೂ, ವಿಚಾರಪರರೂ ಆಗಿ ಮಾಡುವುದು. ಸಾಹಿತ್ಯದ ಉದ್ದೇಶ ನೀತಿಬೋಧೆಯಲ್ಲ—ಅನುಭವದ ಅನಾವರಣ. ಸಾಹಿತಿ ಸಿದ್ಧಾಂತಿಯಲ್ಲ ಜಿಜ್ಞಾಸು. ಸಾಹಿತಿ ಮತಸ್ಥಾಪಕನಲ್ಲ ಧರ್ಮದೂತ.

ಕನ್ನಡ ಸಾಹಿತಿಗಳಲ್ಲಿ ಈ ಲಕ್ಷ್ಯ ಬರಬೇಕಾದರೆ ಅವರ ಅಸ್ವತಂತ್ರ ಭಾವನೆ ಹೋಗಬೇಕು. 'ನಾವು ಎಂಥ ಸಾಹಿತ್ಯ ನಿರ್ಮಾಣಮಾಡಬೇಕು' ಎಂದು ಕೆಲವು ಸಾಹಿತಿಗಳು ಗಾಂಧೀಜಿಯವರನ್ನು ಪ್ರಶ್ನಿಸಿದಾಗ 'ದೇಶವನ್ನು ದಾಸ್ಯದಿಂದ ಮುಕ್ತಮಾಡುವ ಸಾಹಿತ್ಯವನ್ನು ನಿರ್ಮಾಣಮಾಡಿ' ಎಂದು ಬಾಪೂ ಹೇಳಿದರಂತೆ. ರಾಜಕೀಯ ದಾಸ್ಯ ಮಾತ್ರವೇ ಅಲ್ಲ—ಎಲ್ಲ ಬಗೆಯ ದಾಸ್ಯದಿಂದಲೂ ನಮ್ಮನ್ನು ಮುಕ್ತರನ್ನಾಗಿ ಮಾಡುವ ಸಾಹಿತ್ಯ ಬೇಕು. ಎಲ್ಲ ದಾಸ್ಯಗಳಿಗಿಂತ ಪ್ರಬಲವಾದುದು ಮಾನಸಿಕ ದಾಸ್ಯ. ಅದು ನಿರ್ಮೂಲವಾಗಬೇಕು. ಮನುಷ್ಯರಾಗಿ ಪರರ ಕಷ್ಟಸುಖಗಳನ್ನು ಅನುಭವಿಸುವ ಗುಣವನ್ನೂ ಅದನ್ನು ಸಾಹಿತಿಗಳಾಗಿ ಉಚ್ಚರಿಸುವ ಕೆಚ್ಚನ್ನೂ ನಮ್ಮ ಜನ ದೊರಕಿಸಿಕೊಳ್ಳಬೇಕು. ಅನುಭವ, ಉಚ್ಚಾರಣೆ ಎರಡೂ ಧೀರ ನಿರ್ಮಲ ವಿಚಾರದಿಂದ ಯಾವಾಗ ಹೊರಹೊಮ್ಮುವುದೋ ಆಗ ನಾಡನ್ನು ಬೆಳಗಿಸುವ ಭವ್ಯ ಸಾಹಿತ್ಯ ನಿರ್ಮಾಣವಾಗುತ್ತದೆ.

ನಮ್ಮ ಸಾಹಿತ್ಯಕ್ಕೆ ಅವಶ್ಯ ಬೇಕಾಗಿರುವ ಇನ್ನೊಂದು ಮುಖ ಹಾಸ್ಯಮುಖ. ನಿರ್ವಿಣ್ಣತೆಯಿಂದ ಸೋತು ಸೊರಗುವ ಬಾಳನ್ನು ಉದ್ಧರಿಸಬಲ್ಲುದು ಹಾಸ್ಯ. ಹಾಸ್ಯಪ್ರವೃತ್ತಿ ನಮ್ಮ ಜನಾಂಗದಲ್ಲಿಯೇ ಕ್ಷೀಣದ ಗುಣ. ಜನಾಂಗ ಬದುಕಬೇಕಾದರೆ ಅದು ನಗಬೇಕು—ನಕ್ಕು ನಗಿಸುವ ನಗೆಗಾರಿಕೆ ನಮ್ಮಲ್ಲಿ ವಿಶೇಷವಾಗಿ ಬೆಳೆಯಬೇಕು.

ಜನಕ್ಕೆ ಬಾಳಿನಲ್ಲಿ ಉತ್ಸಾಹವನ್ನು ಹುಟ್ಟಿಸಿ ಬಾಳಿನ ಅನಂತ ತೊಡಕು ಬವಣೆಗಳನ್ನು ಗೆಲ್ಲಲು ಬೇಕಾದ ಧೀರ ಮನೋವೃತ್ತಿಯನ್ನು ಹುಟ್ಟಿಸುವ ಸಾಹಿತ್ಯ ನಮಗೆ ಬೇಕು. ನಾಡು ಬದುಕಿದರಲ್ಲವೇ ನಾಡಿನ ಸಾಹಿತ್ಯ ಬದುಕುವುದು. ಕನ್ನಡ ಸಾಹಿತಿಗಳು ತಾವು ಗ್ರಂಥ ನಿರ್ಮಾಪಕರು ಮಾತ್ರವೇ ಅಲ್ಲ ರಾಷ್ಟ್ರ ಸೇವಕರೂ ಹೌದೆಂಬುದನ್ನು ಸದಾ ಲಕ್ಷ್ಯದಲ್ಲಿಟ್ಟುಕೊಂಡಿರಬೇಕು.

———